# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-34, ಶ್ರೀ ಶುಭಕೃತ್‌ನಾಮ ಸಂವತ್ಸರ, ವೈಶಾಖ ಮಾಸ ಮೇ-2022, ಸಂಚಿಕೆ-2, ಪುಟಗಳು-36, ಬೆಲೆ ರೂ.-15/-



ಶ್ರೀ ಶಂಕರಾಚಾರ್ಯರ ಜಯಂತಿ

ದಿನಾಂಕ 06-05-2022 - ತತ್ವಜ್ಞಾನಿಗಳ ದಿನ



ಶ್ರೀ ರಾಮಾನುಜಾಚಾರ್ಯರ ಜಯಂತಿ

ದಿನಾಂಕ 05-05-2022









ಹರಿಹರಪುರ ಶ್ರೀಮಠದಲ್ಲಿ ವೈಭವಯುತ ಮಹಾಕುಂಭಾಭಿಷೇಕ ಮಹೋತ್ಸವ






ಹೊಸಪೇಟೆಯಲ್ಲಿ ಮಹಾಕುಂಭಾಭಿಷೇಕ ಮಹೋತ್ಸವ



ಕಾಶ್ಮೀರ ನರಮೇಧ ಕುರಿತು ಸಂವಾದ






ಕುಂಭಾಭಿಷೇಕ ಮಹೋತ್ಸವದಲ್ಲಿ
ಶ್ರೀ ಅಶೋಕ ಹಾರನಹಳ್ಳಿ,
ಶ್ರೀ ಭೀಮೇಶ್ವರ ಜೋಷಿ ಯವರಿಗೆ ಪ್ರಶಸ್ತಿ ಪ್ರಧಾನ



ಹರಿಹರಪುರ ಶ್ರೀಮಠದ
ಒಂದು ನೋಟ



ಕಾಸರಗೋಡಿನ ಎಡನೀರು ಮಠದಲ್ಲಿ
ನೂತನ ಗುರುಭವನದ ಭೂಮಿ ಪೂಜೆ



ಆರ್.ಎಸ್.ಎಸ್.ಎಸ್. ಸಹಕಾರ್ಯವಾಹ ಶ್ರೀ ದತ್ತಾತ್ರೇಯ ಹೊಸಬಾಳೆಯವರಿಗೆ ಲಕ್ಷ್ಮೀನರಸಿಂಹ ಪ್ರಶಸ್ತಿ ಪ್ರದಾನ



ಮತ್ತೂರು ಕೇಶವ ಅವಧಾನಿಗಳ ಪುತ್ರ ಹಾಗೂ
ಮಾರ್ಕಂಡೇಯ ಅವಧಾನಿಗಳ ಮೊಮ್ಮಗಳ ಮದುವೆಯ
ಸಂದರ್ಭದಲ್ಲಿ ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ




ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾ (ರಿ) ಸರ್ವಸದಸ್ಯರ ಮಹಾಸಭೆಯಲ್ಲಿ
ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು :
**ಅಶೋಕ ಹಾರನಹಳ್ಳಿ**
ಪ್ರಧಾನ ಕಾರ್ಯದರ್ಶಿ :
**ಶ್ರೀಧರಮೂರ್ತಿ ಎಸ್.**
ಖಜಾಂಚಿ :
**ವೆಂಕಟೇಶ ಎಸ್. ನಾಯಕ್**
ಸಂಘಟನಾ ಕಾರ್ಯದರ್ಶಿ :
**ಡಾ॥ ಬಿ.ಎಸ್. ರಾಘವೇಂದ್ರ ಭಟ್**

ವಿಪ್ರನುಡಿ ಪ್ರಕಟಣಾ ಸಮಿತಿ

ಪ್ರಧಾನ ಸಂಪಾದಕರು :
**ಡಾ॥ ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು :
**ಎಂ.ಕೆ. ಭಾಸ್ಕರರಾವ್**
**ಡಾ॥ ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು :
**ಜ್ಯೋತಿಷಿ ವಿ॥ ಡಾ॥ ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ.**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ

ಅಖಿಲ ಭುವನ ಜನ್ಮಸ್ಥೇಮ ಭಂಗಾದಿ ಲೀಲೇ
ವಿನತ ವಿವಿಧ ಭೂತವ್ರಾತ ರಕ್ಷೈಕ ದೀಕ್ಷೇ ।
ಶೃತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮಪರಸ್ಮಿನ್ ಶೇಮುಷೀ ಭಕ್ತಿರೂಪಾ ॥

'ಸಮಗ್ರ ಜಗತ್ತಿನ ಸೃಷ್ಟಿ-ಸ್ಥಿತಿ-ಲಯ ಮುಂತಾದವು ಯಾರಿಗೆ ಲೀಲೆಯಾಗಿವೆಯೋ, ಶರಣಾಗತರಾದ ವಿವಿಧ ಪ್ರಾಣಿ ಸಮೂಹಗಳ ರಕ್ಷಣೆಯೊಂದೇ ಯಾರಿಗೆ ದೀಕ್ಷೆಯಾಗಿದೆಯೋ, ಶ್ರುತಿಗಳಿಗೆ ಶಿರಸ್ಸು ಎನಿಸಿದ ಉಪನಿಷತ್ತುಗಳಲ್ಲಿ ಯಾರು ವಿಶೇಷವಾಗಿ ಪ್ರತಿಪಾದಿತರಾಗಿರುವರೂ ಆ ಪರಬ್ರಹ್ಮನಾದ ಶ್ರೀನಿವಾಸನಲ್ಲಿ ನನಗೆ ಭಕ್ತಿರೂಪವಾದ ಜ್ಞಾನವುಂಟಾಗಲಿ'.

ಶ್ರೀ ರಾಮಾನುಜಾಚಾರ್ಯರು ವೇದಾಂತ ಸೂತ್ರಗಳಿಗೆ ವಿಶಿಷ್ಟಾದ್ವೈತ ಮತಾನುಸಾರ ಬರೆದ ಶ್ರೀಭಾಷ್ಯವೆಂಬ ಗ್ರಂಥದ ಮಂಗಳಾಚರಣೆ ಸ್ತೋತ್ರವಿದು. ಅವರ ಪ್ರಕಾರ ಈ ಜಗತ್ತಿನಲ್ಲಿ ಚೇತನ-ಅಚೇತನ ವಸ್ತುಗಳ ಹುಟ್ಟು, ಜೀವನ ಸ್ಥಿತಿ, ಸಾವು, ಪುನರ್ಜನ್ಮ ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿವೆ. ಈ ನೈಸರ್ಗಿಕ ಪ್ರಕ್ರಿಯೆಯ ಹಿಂದೆ ಒಂದು ಕಾಣದ ಕೈಲೀಲೆ ಇದೆಯಲ್ಲವೇ? ಅದು ಯಾವುದು? ಕಷ್ಟದ, ಅಪಾಯಗಳ ಸನ್ನಿವೇಶದಲ್ಲಿ ಪ್ರಾಣಿ-ಪಕ್ಷಿ ಸಮೂಹ, ದೀನರು, ಭಗವಂತನ ಮೊರೆ ಹೊಂದುತ್ತಾರಲ್ಲವೇ? ಶರಣಾಗತಿ ಕೋರಿ ಬಂದವರಿಗೆ ಕಲಿಯುಗ ಪರದೈವವಾದ ಶ್ರೀನಿವಾಸನಲ್ಲದೇ ಇನ್ಯಾರು ತಾನೇ ರಕ್ಷಣೆ ಕೊಡಬಲ್ಲರು? ಭಗವಂತ ಶ್ರೀನಿವಾಸನು ಆರ್ತರಿಗೆ ಅಭಯ ನೀಡುವ ದೀಕ್ಷೆಯಲ್ಲಿ ತೊಡಗಿದ್ದಾನೆ. ಭಾರತೀಯರ ನಂಬಿಕೆಯಂತೆ ವೇದಗಳು ಅವಿನಾಶಿ, ಅನಂತ, ಪುರುಷರಾರೂ ಅದನ್ನು ಸೃಷ್ಟಿಸಿಲ್ಲ. ಋಷಿ-ಮುನಿಗಳು ತಮ್ಮ ಧ್ಯಾನಸ್ಥ ಸ್ಥಿತಿಯಲ್ಲಿದ್ದಾಗ ಹಲವಾರು ಸತ್ಯಗಳು ಗೋಚರವಾದವು ಹಾಗೂ ಅವುಗಳನ್ನು ಕೇಳಿಸಿಕೊಂಡರು. ಅದೇ ಶ್ರುತಿಗಳು ಅಥವಾ ವೇದಗಳು, ಅವುಗಳ ಅಂತಿಮ ಭಾಗವೇ ವೇದಾಂತ ಅಥವಾ ಉಪನಿಷತ್ತುಗಳು. ಇವು ವೇದಗಳ ಶಿರಸ್ಸಿನಂತೆ ಮುಕುಟಪ್ರಾಯವಾದವು.

ಆ ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದದ್ದು ಜಗತ್ತಿನ ಪರಮ ಏಕೈಕ ಸತ್ಯವಾದ ಪರಬ್ರಹ್ಮ. ಅದು ಅಮೂರ್ತಸ್ವರೂಪ, ವರ್ಣನೆಗೆ ನಿಲುಕಲಾರದು, ಕೇವಲ ಅನುಭವವೇದ್ಯ. ಅದೇ ಪರಬ್ರಹ್ಮವು ರೂಪ ಹೊಂದಿದಾಗ ಭಗವಂತ ಶ್ರೀನಿವಾಸನಾಗುತ್ತಾನೆ. ಅವನನ್ನು ಒಂಬತ್ತು ರೀತಿಯ ಭಕ್ತಿಯ ಮೂಲಕ ಒಲಿಸಿಕೊಳ್ಳಬಹುದು. ಅದೇ ಶ್ರವಣ, ಕೀರ್ತನೆ, ಸ್ಮರಣೆ, ಪಾದಸೇವನೆ, ಅರ್ಚನೆ, ವಂದನೆ, ದಾಸ್ಯಭಾವ, ಸಖೀಭಾವ ಮತ್ತು ಆತ್ಮನಿವೇದನೆ. ಈ ಭಕ್ತಿಯನ್ನು ಅಳವಡಿಸಿಕೊಂಡು ಉದ್ಧಾರವಾದ ಭಕ್ತರು ಅನುಕ್ರಮವಾಗಿ ಪರೀಕ್ಷಿತ, ನಾರದ, ಪ್ರಹ್ಲಾದ, ಲಕ್ಷ್ಮೀದೇವಿ, ಪೃಥು, ಅಕ್ರೂರ, ಹನುಮಂತ, ಅರ್ಜುನ ಮತ್ತು ಬಲಿಮಹಾರಾಜ. ನಾರದರು ತಮ್ಮ ಭಕ್ತಿ ಸೂತ್ರದಲ್ಲಿ ವಿವರಿಸಿದಂತೆ ಈ ಭಕ್ತಿಯು ಪರಮ ಪ್ರೇಮರೂಪವಾದದ್ದು, ಅಮೃತಸ್ವರೂಪವಾದದ್ದು. ಈ ಆತ್ಮೀಯ ಮಾರ್ಗವನ್ನು ಅನುಸರಿಸಿ ಕೃತಾರ್ಥರಾಗಿ ಎಂದು ಶ್ರೀ ರಾಮಾನುಜಾಚಾರ್ಯರು ಕರೆ ನೀಡುತ್ತಾರೆ.

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

-ಸಂಚಾಲಕರು-ಜಾಹೀರಾತು ವಿಭಾಗ

# ತಿಂಗಳ ರಾಶಿ ಫಲ

–ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್



**ಮೇಷ ರಾಶಿ** : ನಿಮ್ಮ ರಾಶಿಯಲ್ಲಿ ರವಿ, ರಾಹುಗಳು ಮತ್ತು ವ್ಯಯದಲ್ಲಿ ಕುಜ, ಗುರು, ಶುಕ್ರರಿದ್ದಾರೆ. ಇದರಿಂದಾಗಿ ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ. ಎಲ್ಲಿದ್ದರೂ ಮಾನಸಿಕ ಅಶಾಂತಿ, ದೈಹಿಕ ಅನಾರೋಗ್ಯ, ಆರ್ಥಿಕ ನಷ್ಟ, ಬಂಧು ಬಾಂಧವರಲ್ಲಿ ನಿಷ್ಠುರ. ಇತ್ತ ದರಿ, ಅತ್ತ ಹುಲಿ ಎಂಬಂತಹ ಪರಿಸ್ಥಿತಿ. ಇದರ ನಿವಾರಣೆಯು 'ಮೌನಂ ಪಂಡಿತ ಲಕ್ಷಣಂ' ಎಂಬಂತೆ ಮೌನ ವ್ರತಾಚರಣೆಯಿಂದ ಕ್ರಮೇಣ ಇಷ್ಟಾರ್ಥ ಸಿದ್ಧಿಸುವುದು.



**ವೃಷಭ** : ಈ ವರ್ಷವಿಡೀ ಗುರುಬಲ ನಿಮ್ಮ ಪಾಲಿಗೆ ಇರುವುದು. ಸದ್ಯ ಗುರುವಿನೊಟ್ಟಿಗೆ ಕುಜಶುಕ್ರರಿರುವರು. ಹೀಗಾಗಿ ದೈವಬಲ ಚೆನ್ನಾಗಿರುವುದು. ಇದರ ಫಲ ಮುಟ್ಟಿದ್ದೆಲ್ಲ ಚಿನ್ನವಾಗುತ್ತದೆ. ಇಂದಿನ ದಿನವೇ ಶುಭದಿನವು ಎಂಬಂತೆ ಆಯುರಾರೋಗ್ಯ ಭಾಗ್ಯಾದಿಗಳುಂಟಾಗಲಿರುವುದು. ಮನೆಯಲ್ಲೂ, ಸಮಾಜದಲ್ಲೂ ನಿಮ್ಮ ಮುಂದಾಳತ್ವದಲ್ಲಿ ಮಂಗಲ ಕಾರ್ಯಗಳು ನಡೆಯಲಿರುವುದು. **ಸರ್ವೇಜನಾಃ ಕಾಂಚನಮಾಶ್ರಯಂತೇ** ಎಂಬಂತೆ ಎಲ್ಲರೂ ನಿಮ್ಮ ಹಿಂಬಾಲಕರಾಗುವರು.



**ಮಿಥುನ** : ತತ್ಕಾಲ ನಿಮ್ಮ ರಾಶಿಗೆ ನವಗ್ರಹಗಳೇ ಅನುಕೂಲ ಸ್ಥಾನದಲ್ಲಿರುವುದರಿಂದ **'ತಮಸೋಮಾ ಜ್ಯೋತಿರ್ಗಮಯ'** ಎಂಬಂತೆ ನಿಮ್ಮ ಬಾಳಿನಲ್ಲಿ ದೈನಂದಿನ ಜೀವನದಲ್ಲಿ ಭಾಗ್ಯೋದಯ ಉಂಟಾಗಲಿರುವುದು. ನಿಂತು ಹೋದ ಕಾರ್ಯ ಕಲಾಪಗಳು, ವ್ಯವಹಾರಗಳು ತನ್ನಿಂದತಾನೇ ಆರಂಭ ವಾಗಲಿರುವುದು. ಬಿಟ್ಟುಹೋದ ಮಿತ್ರಬಾಂಧವರು ತಿರುಗಿ ಬಂದು ಸೇರಲಿರುವರು. ಇಂದಿಗೆ ನೀವೇ ರಾಜರು ಮತ್ತು ಭೋಜರು.



**ಕರ್ಕಾಟಕ** : ಗುರುಬಲ ಏನೋ ಚೆನ್ನಾಗಿದೆ. ಒಟ್ಟೊಟ್ಟಿಗೆ ಅಷ್ಟಮದಲ್ಲಿ ಕುಜ ಶನಿಗಳೂ ಬಂದು ಸೇರುತ್ತಿದ್ದಾರೆ. ಒಂದು ಕೈಯಲ್ಲಿ ಧನಾಗಮ ಇನ್ನೊಂದು ಕೈಯಲ್ಲಿ ಅನ್ಯಥಾ ವ್ಯಯ ಆಗುತ್ತಿರುತ್ತದೆ. ಮನೆಯಲ್ಲಿ ಮಂಗಲಕಾರ್ಯಗಳ ಮುನ್ಸೂಚನೆ ಉಂಟಾಗುತ್ತದೆ. ಇನ್ನೊಂದು ಬದಿಯಲ್ಲಿ ದುಃಖ ದುಮ್ಮಾನ ಗಳುಂಟಾಗಬಹುದು. **ಸರ್ವಂ ಆನಂದಮಯಂ ಆದರೆ ಸರ್ವಂಕ್ಷಣಿಕಂ** ಎಂಬಂತಾಗು ವುದು ಜೀವನ. ಜೀವನಾನುಭವ ಚೆನ್ನಾಗಿ ಆಗುತ್ತದೆ.



**ಸಿಂಹರಾಶಿ** : ಸದ್ಯಕ್ಕೆ ಗುರುಬಲವಿಲ್ಲ. ಇದರೊಟ್ಟಿಗೆ ಕುಜಾಷ್ಟಮಕ್ಕೆ ಬರಲಿರುವನು. ಹೀಗಾಗಿ ಬರಬರುತ್ತಾ ರಾಯರ ಕುದುರೆ ಕತ್ತೆಯಾಯಿತು ಎಂಬಂತೆ ದಿನೇದಿನೇ ಕ್ಷೀಣಚಂದ್ರ ನಾಗುವಂತೆ ವ್ಯವಹಾರಗಳೆಲ್ಲ ಕುಂಟುತ್ತಾ ಸಾಗಲಿರುವುದು. ಒಟ್ಟಿನಲ್ಲಿ ದೈಹಿಕ ಅನಾರೋಗ್ಯ, ಮಾನಸಿಕ ಅಶಾಂತಿ, ಪ್ರಾರಂಭಿಸಿದ ಕೆಲಸಗಳು ಸ್ಥಗಿತವಾಗಬಹುದು. ನೆಮ್ಮದಿ ಹಾಳಾಗಬಹುದು. ಗೃಹ ತಾಪತ್ರಯಗಳು ಉಂಟಾಗಬಹುದು. ನೆಂಟರಿಷ್ಟರ ನಿಷ್ಠುರವಾಗಬಹುದು. ಶತ್ರುಗಳ ಕಾಟ ಉಂಟಾಗಬಹುದು. ಸರ್ಕಸ್ ಮಾಡುವ ಸಂದರ್ಭ ಉಂಟಾಗಬಹುದು. **ಧೈರ್ಯಂ ಸರ್ವತ್ರ ಸಾಧನಂ** ಎಂಬಂತಿದ್ದರೆ ಭವಿಷ್ಯ ಉತ್ತಮವಾಗಲಿರುವುದು.



**ಕನ್ಯಾರಾಶಿ** : 'ಕನ್ಯಾ ವರಯತೇ ರೂಪಂ' ಎಂಬಂತೆ ಗೃಹದಲ್ಲಿ ಕಲ್ಯಾಣಾದಿಗಳ ಸಂದರ್ಭ ಉಂಟಾಗುವುದು. ಪರಜನ, ಪರಗೃಹ, ಪರದೇಶದ ವ್ಯವಹಾರಾದಿಗಳಿಂದ ಧನಾಗಮ ಆಗಲಿರುವದು. ವಿದ್ಯಾರ್ಥಿಗಳಿಗೂ, ಉದ್ಯಮಿಗಳಿಗೂ, ರಾಜಕೀಯ ಮುಖಂಡರಿಗೂ ಶ್ರೇಯಸ್ಸಾಗಲಿರುವುದು. ಇಷ್ಟಮಿತ್ರರ ಬಂಧು ಜನರ ದರ್ಶನ ಲಾಭವಾಗಲಿರುವುದು. ತೀರ್ಥಯಾತ್ರಾದಿಗಳಿಂದ ಮಾನಸಿಕ ಸಂತೋಷ ಉಂಟಾಗಲಿರುವುದು.



**ತುಲಾ ರಾಶಿ:** 'ನ್ಯೂನದೋಷಾಃ' ಎಂಬಂತೆ ಗುರುಬಲ ಇಲ್ಲವೆಂದಿಲ್ಲ, ಪಂಚಮದ ಶನಿ ಕಾರಣಿಕ ಅಂದರೆ ಮಾನಸಿಕ ಅಶಾಂತಿಯನ್ನು ಉಂಟು ಮಾಡಬಹುದು. ಜನ್ಮದ ಕೇತು ಅಷ್ಟಮದ ರವಿ ಅನಾರೋಗ್ಯವನ್ನು ಕೊಡಬಹುದು. ಆಲಸ್ಯ ದಿಂದ ವ್ಯವಹಾರ ನಿಲ್ಲಬಹುದು. ಇದರಿಂದಾಗಿ ಆರ್ಥಿಕ ತೊಂದರೆ ಯಾಗಬಹುದು. ಇಲ್ಲಿ ಸಲ್ಲದವರು ಅಲ್ಲಿ ಸಲ್ಲುವರಯ್ಯ ಎಂಬಂತೆ ಸಂಚಾರಲಾಭ ಉಂಟಾಗಬಹುದು. ಶ್ರೀನಿವಾಸ ನೀನೇಪಾಲಿಸೋ ಎಂದಿರುವುದರಿಂದ ಶ್ರೀನಿವಾಸ ದೇವರ ದರ್ಶನದಿಂದ ಇಷ್ಟಾರ್ಥ ಸಿದ್ಧಿಸಬಹುದು.



**ವೃಶ್ಚಿಕ ರಾಶಿ** : ಗುರುಬಲವಿದೆ ಎಂದಾಕ್ಷಣ ಸುಖವಿದೆ ಎನ್ನಲಾಗದು. ಗೃಹತಾಪತ್ರಯ ಉಂಟಾಗಬಹುದು. ಮಾನಸಿಕ ಖಿನ್ನತೆ ಆಗಬಹುದು, ಸ್ತ್ರೀ ನಿಮಿತ್ತ ಚಿಂತೆ ಉಂಟಾಗಬಹುದು, ವ್ಯವಹಾರದಿಂದ ನಷ್ಟವಾಗಬಹುದು, ಮನೆಬಿಟ್ಟು ಬೀದಿ ಸುತ್ತ ಬಹುದು, ದೂರದೇಶ ಪ್ರಯಾಣ ಉಂಟಾಗಬಹುದು. ರೋಗಸ್ಥಾನ ದಲ್ಲಿರುವ ರಾಹು ಆಕಸ್ಮಿಕ ಅನಾರೋಗ್ಯ ಕೊಡಬಹುದು. **'ಅನನ್ಯಾಶ್ಚಿಂತಯಂತೋ ಮಾಂ'** ಎಂಬಂತೆ ಗೀತಾಪಾರಾಯಣದಿಂದ ಇಷ್ಟಾರ್ಥ ಸಿದ್ಧಿಸುವುದು.



**ಧನುರಾಶಿ** :'ಜನ್ಮಷಷ್ಠ್ಯಾಂತ್ಯಂಬಂಧುಷು' ಎಂಬಂತೆ ಗುರುಬಲವಿರಬಹುದು. ಧನಾಗಮ ಪ್ರಾರಂಭವಾಗಲಿರುವುದು. ಅದರಿಂದಾಗಿ ಸ್ಥಾನಮಾನ ಧೈರ್ಯಗಳುಂಟಾಗಲಿರುವುದು. ನಿಂತುಹೋದ ವ್ಯವಹಾರಾದಿಗಳು ಪ್ರಾರಂಭವಾಗಲಿರುವುದು. ವಿದ್ಯಾರ್ಥಿಗಳಿಗೂ, ವ್ಯವಹಾರಸ್ಥರಿಗೂ, ರಾಜಕೀಯ ಧುರೀಣರಿಗೂ ಅವರವರ ಇಷ್ಟಾರ್ಥ ಸಿದ್ಧಿಸಬಹುದು. ಧೈರ್ಯವಿದ್ದರೆ ಮುನ್ನುಗ್ಗಿರಿ. ಜಯಶೀಲರಾಗುವಿರಿ. ಇಂದಿನ ದಿನ ಸುದಿನವಾಗುವುದು.



**ಮಕರ ರಾಶಿ** : ಸದ್ಯ ನಿಮ್ಮ ರಾಶಿಯಿಂದ ಶನಿಯು ಕುಂಭಕ್ಕೆ ಹೋಗಿರುವನು. ಬಿದಿಗೆಯ ಚಂದ್ರನಂತೆ ಮುಂದಿನ ದಿನಗಳು ಶುಭದಾಯಕವಾಗಲಿರುವುದು. ಆಯುರಾರೋಗ್ಯಭಾಗ್ಯ ವೃದ್ಧಿ ಯಾಗಿ ವ್ಯವಹಾರದಲ್ಲಿ ಜಯಗಳುಂಟಾಗಲಿರುವುದು. ನಿಂತು ಹೋದ ಕಾರ್ಯಕಲಾಪಗಳೆಲ್ಲ ಆರಂಭವಾಗಲಿರುವುದು. ಧಾರ್ಮಿಕ ರಾದ ನಿಮಗೆ ಸ್ತ್ರೀಯರಿಂದ ತೊಂದರೆ ಆಗಬಹುದು. ಸಂಚಾರದಿಂದ ಒಂದು ಕಡೆ ನೆಮ್ಮದಿ, ಇನ್ನೊಂದೆಡೆ ಆಯಾಸ, ಸ್ವಂತ ವ್ಯವಹಾರ ಕುಂಠಿತವಾಗಬಹುದು.



**ಕುಂಭ ರಾಶಿ:** ಗುರುಬಲ ಏನೋ ಚೆನ್ನಾಗಿದೆ. ಇದರಿಂದಾಗಿ ಖುಷಿ ಖುಷಿಯಾಗಿ ಇರಬಹುದು. ಶನಿ ಜನ್ಮಕ್ಕೆ ಬಂದಾಕ್ಷಣ ಹೆದರಬೇಕಾಗಿಲ್ಲ. ಏನಿದ್ದರೂ ಶನಿಪ್ರಭಾವ ರಾಶಿಯ ಅಂತ್ಯದಲ್ಲಿ ಯಾವಾಗಲೋ ಬರುವ ತೊಂದರೆಗೆ ಇಂದು ಚಿಂತಿಸಬೇಕಾಗಿಲ್ಲ. ಆದರೆ ಕುಜನ ಸಂಚಾರದಿಂದ ಆರೋಗ್ಯದ ಬಗ್ಗೆ, ಅರ್ಥದ ಬಗ್ಗೆ, ಕುಟುಂಬ ಸೌಖ್ಯದ ಬಗ್ಗೆ ಜಾಗ್ರತೆ ಇರುವುದು ಉತ್ತಮ. ಕೋರ್ಟ್ ಕಛೇರಿಗೆ ಪ್ರದಕ್ಷಿಣೆ ಬರುವ ಸಂದರ್ಭಕ್ಕೂ ಜಾಗ್ರತೆ ಇರುವುದುತ್ತಮ. **'ಅಶ್ವತ್ಥ ಸೇವಾ ತಿಲಪಾತ್ರದಾನಂ'** ಎಂಬಂತೆ ಅಶ್ವತ್ಥ ಪ್ರದಕ್ಷಿಣೆಯಿಂದ ಇಷ್ಟಾರ್ಥ ಸಿದ್ಧಿಸುವುದು.



**ಮೀನರಾಶಿ** : ಜನ್ಮ ರಾಶಿಯಲ್ಲಿ ಗುರು ವ್ಯಯದಲ್ಲಿ ಕುಜಶನಿಗಳ ಸಂಚಾರದಿಂದ ವ್ಯಕ್ತಿಗೂ ಸಂಚಾರಲಾಭ. ಆರ್ಥಿಕ ತೊಂದರೆ, ಅನಾರೋಗ್ಯ, ಮಾನಸಿಕ ಅಶಾಂತಿ, ಸ್ಥಾನಪಲ್ಲಟ, ವ್ಯವಹಾರ ನಷ್ಟಾದಿಗಳು ಸಂಭವಿಸಬಹುದು. ಕೊಟ್ಟ ಹಣ ಬಾರದಿರ ಬಹುದು, ಶತ್ರುಗಳಿಗಿದು ಸಕಾಲ. ಈ ರಾಶಿಯವರಿಗೆ ಎಲ್ಲದಕ್ಕೂ ಅಕಾಲ. ಒಟ್ಟಿನಲ್ಲಿ ಎಲ್ಲ ವಿಚಾರದಲ್ಲಿಯೂ ಜಾಗ್ರತೆ ಇರುವುದುತ್ತಮ. **'ಸಕಲಗ್ರಹಬಲ ನೀನೇ ಸರಸಿಜಾಕ್ಷ'** ಎಂಬಂತೆ ಇಂದಿರೇಶನ ಮೊರೆ ಹೊಕ್ಕರೆ ಇಷ್ಟಾರ್ಥ ಸಿದ್ಧಿಸುವುದು. ಎಲ್ಲರಿಗೂ ನವಗ್ರಹಗಳು ಅನುಗ್ರಹಿಸಲಿ.

**ಸರ್ವೇಜನಾಃ ಸುಖಿನೋಭವಂತು, ಶುಭಮಸ್ತು.**

# ಅಧ್ಯಕ್ಷರ ನುಡಿ



ಆತ್ಮೀಯ ವಿಪ್ರಬಂಧುಗಳೇ,

**ನಿಮ್ಮೆಲ್ಲರಿಗೂ ಶ್ರೀ ರಾಮಾನುಜಾಚಾರ್ಯ ಮತ್ತು ಶ್ರೀ ಶಂಕರಾಚಾರ್ಯರರ ಜಯಂತಿಯ ಶುಭಕಾಮನೆಗಳು.**

**ಕಳೆದ ತಿಂಗಳು ಸಂಘಟನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ಅನೇಕಾನೇಕ ಪಟ್ಟಣಗಳಿಗೆ ಹಾಗೂ ಗ್ರಾಮಗಳಿಗೆ ಭೇಟಿ ಮಾಡುವ ಅವಕಾಶವನ್ನು ಅ ಭಗವಂತ ಒದಗಿಸಿದನು. ಹೋದಲೆಲ್ಲಾ ಬೆಟ್ಟದಷ್ಟು ನಿರೀಕ್ಷೆ ಮತ್ತು ಅ ನಿರೀಕ್ಷೆಗೆ ಪೂರಕವಾದ ಸಹಕಾರ ಕಂಡು ಬಂದದ್ದು ನಿಜವಾಗಿಯೂ ಅ ಭಗವಂತನ ಕೃಪೆಯಿಂದ ಹಾಗೂ ನಿಮ್ಮೆಲ್ಲರ ಸಹಕಾರದಿಂದ ಎಂದು ಹೇಳಬಹುದು.** ಇಂದಿಗೆ ಸರಿ ಸುಮಾರು ತೊಂಬತ್ತು ದಿನಗಳ ಹಿಂದೆ ಮಹಾಸಭೆಯ ಅಧ್ಯಕ್ಷನಾಗಿ ನನ್ನ ಜವಾಬ್ದಾರಿಯನ್ನು ಸ್ವೀಕರಿಸಿದ್ದೆ. ಅಂದು ಸಂಘಟನೆ ಮತ್ತು ಮಹಾಸಭೆಯ ಕೆಲಸ ವನ್ನು ಎಲ್ಲಿಂದ ಪ್ರಾರಂಭಿಸಬೇಕೆಂಬುದು ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಆದರೆ ವಿಪ್ರನುಡಿ ತಂಡ **"ವಿಕಾಸದತ್ತ ಮಹಾಸಭೆ"** ಎಂಬ ವರದಿಯನ್ನು ಸಿದ್ದಪಡಿಸಿ ನನ್ನ ಮುಂದೆ ಇಟ್ಟಾಗ ತಕ್ಕಮಟ್ಟಿಗೆ ಸಮಾಧಾನವಾಯಿತು. ಆದರೆ ಕ್ರಮಿಸುವ ಹಾದಿ ಇನ್ನು ಬಹಳಷ್ಟಿದೆ ಎಂದು ವಿಪ್ರನುಡಿ ತಂಡದ ಸದಸ್ಯರಿಗೆ ತಿಳಿಸಿದೆ, ಆದರೆ ಕ್ರಮಿಸುತ್ತಿರುವ ದಾರಿ ಸರಿಯಿದೆ ಎಂಬ ಖಾತರಿ ಆ ವರದಿಯನ್ನು ನೋಡಿದ ಮೇಲೆ ಅನಿಸಿದ್ದು ಸುಳ್ಳಲ್ಲ.

ಏಪ್ರಿಲ್ ಹತ್ತರಿಂದ ಏಪ್ರಿಲ್ ಇಪ್ಪತ್ನಾಲ್ಕರವರೆಗೆ ಹರಿಹರಪುರ ದಲ್ಲಿ ಮಹಾಕುಂಭಾಭಿಷೇಕ ನಡೆಯಿತು. ಪವಿತ್ರ ತುಂಗಾನದಿಯ ತೀರದಲ್ಲಿರುವ ಹರಿಹರಪುರವು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ದಿವ್ಯ ಕ್ಷೇತ್ರವಾಗಿದೆ. ಹರಿಹರಪುರ ಶ್ರೀಮಠದ ಪೀಠಾಧಿಪತಿ ಗಳಾಗಿರುವ ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿ ಗಳವರು ಭಗವಂತನ ಪ್ರೇರಣೆಯಂತೆ ಶ್ರೀಕ್ಷೇತ್ರದಲ್ಲಿ ಶ್ರೀ ಶಾರದಾ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳ ಪುನರ್ ನಿರ್ಮಾಣಕ್ಕೆ ಸರಿಸುಮಾರು ಹನ್ನೆರಡು ವರುಷಗಳ ಹಿಂದೆ ಸಂಕಲ್ಪಿಸಿದ್ದರು, **ಅವರ ಸಂಕಲ್ಪದಂತೆ ಶ್ರೀ ಶುಭಕೃತ್ ನಾಮ ಸಂವತ್ಸರದ ಚೈತ್ರ ಶುಕ್ಲ ಚತುರ್ದಶಿಯಂದು (15–04–2022) ಅಗಸ್ತ್ಯ ಮಹರ್ಷಿ ಕರಾರ್ಚಿತ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಗೆ ಮತ್ತು ಜಗದ್ಗುರು ಆದಿಶಂಕರರು ಪ್ರತಿಷ್ಠಾಪಿಸಿರುವ ಶ್ರೀ ಶಾರದಾಪರಮೇಶ್ವರಿ ದೇವಿಗೆ "ಮಹಾಕುಂಭಾಭಿಷೇಕ" ನೆರವೇರಿಸಲಾಯಿತು.**

ಸಾವಿರಾರು ವರ್ಷಗಳ ಭವ್ಯವಾದ ಇತಿಹಾಸ ಮತ್ತು ಶ್ರೇಷ್ಠವಾದ ಗುರುಪರಂಪರೆಯನ್ನು ಹೊಂದಿರುವ ಈ ಧರ್ಮಪೀಠದ ಮಹಾಕುಂಭಾಭಿಷೇಕ ಮಹೋತ್ಸವವು ಶ್ರದ್ಧಾಭಕ್ತಿ, ಸಡಗರ, ಉತ್ಸಾಹದಿಂದ ನಡೆಯಿತು. ಆ ಹದಿನಾಲ್ಕು ದಿನಗಳು ಸಾಕ್ಷಾತ್ ದೇವಲೋಕವೇ ಧರೆಗಿಳಿದಂತೆ ಭಾಸವಾಗುವಷ್ಟರ ಮಟ್ಟಿಗೆ ಕಾರ್ಯಕ್ರಮ ಜರುಗಿತ್ತು.

ಗುರುಗಳ ಆದೇಶದಂತೆ ನಾನು ಕೂಡ ಈ ಕುಂಭಾಭಿಷೇಕ ಮಹೋತ್ಸವದಲ್ಲಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷನಾಗಿ ಅಷ್ಟಿಷ್ಟು ಅಳಿಲು ಸೇವೆಯಲ್ಲಿ ತೊಡಗಿಸಿಕೊಂಡಿದ್ದೆ. ಇದೆಲ್ಲವೂ ಗುರುಗಳ ಅನುಗ್ರಹದಿಂದಲೇ ಆದದ್ದು ಎಂಬುದು ನನ್ನ ಪ್ರಬಲವಾದ ನಂಬಿಕೆ ಹಾಗೂ ಈ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸುವಲ್ಲಿ ಮಹಾಸಭೆಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ರಾಘವೇಂದ್ರ ಭಟ್ ಅವರು ಹಾಗೂ ಕುಂಭಾಭಿಷೇಕದ ಸ್ವಾಗತ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಹೊರನಾಡಿನ ಧರ್ಮಕರ್ತರಾದ ಶ್ರೀ ಭೀಮೇಶ್ವರ ಜೋಷಿ ಅವರ ಪಾತ್ರ ನಿಜವಾಗಿಯೂ ಅವಿಸ್ಮರಣೀಯವಾದುದು.

ಹೀಗೆ ಮುಂದಿನ ದಿನಗಳಲ್ಲಿ ಸಮಸ್ತ ವಿಪ್ರಭಾಂದವರಿಗೆ ಈ ರೀತಿಯ ದೇವತಾಕಾರ್ಯದಲ್ಲಿ ಪಾಲ್ಗೊಳ್ಳುವ ಅವಕಾಶ ಹೆಚ್ಚು ಹೆಚ್ಚು ಸಿಗಲಿ ಎಂದು ಆ ಭಗವಂತನಲ್ಲಿ ಕೇಳಿಕೊಳ್ಳುತ್ತೇನೆ. ಮತ್ತಷ್ಟು ವಿವರಗಳೊಂದಿಗೆ ಮುಂದಿನ ಸಂಚಿಕೆಯಲ್ಲಿ ಮತ್ತೆ ಭೇಟಿಯಾಗೋಣ.

**॥ ಸರ್ವೇಜನಾಃ ಸುಖಿನೋಭವಂತು ॥**

**ವಂದನಗಳೊಂದಿಗೆ,**

**–ಅಶೋಕ ಹಾರನಹಳ್ಳಿ**

**ಸದಾಶಿವಸಮಾರಂಭಾಂ ಶಂಕರಾಚಾರ್ಯಮಧ್ಯಮಾಮ್।**
**ಅಸ್ಮದಾಚಾರ್ಯಪರ್ಯಂತಾಂ ವಂದೇ ಗುರುಪರಂಪರಾಮ್ ॥**

**ಶ್ರುತಿಸ್ಮೃತಿಪುರಾಣಾನಾಮಾಲಯಂ ಕರುಣಾಲಯಮ್ ।**
**ನಮಾಮಿ ಭಗವತ್ಪಾದಶಂಕರಂ ಲೋಕಶಂಕರಮ್ ॥**

## ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ, ವೈಶಾಖ ಶುಕ್ಲ ಚತುರ್ಥಿಯಂದು ಶ್ರೀ ರಾಮಾನುಜಾಚಾರ್ಯರ ಜಯಂತಿಯನ್ನು (ಮೇ 5, 2022), ವೈಶಾಖ ಶುಕ್ಲ ಪಂಚಮಿಯಂದು (ಮೇ 6, 2022) ಶಂಕರಾಚಾರ್ಯರ ಜಯಂತಿಯನ್ನು ಆಸ್ತಿಕರು ಆಚರಿಸುತ್ತಾರೆ. ಈ ಇಬ್ಬರು ಆಚಾರ್ಯರು ಭಾರತೀಯ ವೈದಿಕ ಧರ್ಮವನ್ನು ಪುನರುಜ್ಜೀವನಗೊಳಿಸಿ, ತಮ್ಮ ಮತಕ್ಕನುಸಾರವಾದ ಅದ್ವೈತ, ವಿಶಿಷ್ಟಾದ್ವೈತ ತತ್ವಗಳ ಮೂಲಕ ವಿಶ್ವದಲ್ಲಿರುವ ಪರಮ ಸತ್ಯವೊಂದೇ, ಅದೇ ಉಪನಿಷತ್ತುಗಳಲ್ಲಿ ಪ್ರಸ್ತಾಪಿಸಿರುವ ಪರಬ್ರಹ್ಮ ಅಥವಾ ಸದ್ವಸ್ತು ಎಂದು ಘೋಷಿಸಿ, ಮನುಷ್ಯನ ಅಂತಿಮ ಗುರಿ ಎಂದರೆ ಅ ಬ್ರಹ್ಮಾನುಭವವನ್ನು ಹೊಂದುವುದು, ಇದನ್ನು ಜ್ಞಾನ, ಕರ್ಮ, ಭಕ್ತಿ, ರಾಜಯೋಗದ ಮೂಲಕ ಪಡೆಯಬಹುದು ಎಂದು ವಿವರಿಸಿ, ಅದರಂತೆ ನಡೆದು ಮುಂದಿನ ಪೀಳಿಗೆಗೆ ಮಾಗದರ್ಶಿಗಳಾದರು. ಶೈವ, ಶಾಕ್ತ, ಕಾಪಾಲಿಕ, ವೈಷ್ಣವ, ಪಾಶುಪತ ಮತಗಳನ್ನು ಪ್ರಾಕೃತ ರೀತಿಯಲ್ಲಿ ಆಚರಿಸುತ್ತಿದ್ದವರನ್ನು ಶಂಕರಾಚಾರ್ಯರು ಎದುರಿಸಿ ಮೃದು ಮಾತುಗಳಿಂದ ಒಲಿಸಿಕೊಂಡು ಆ ಮತಗಳನ್ನು ಸಂಸ್ಕರಿಸಿ ಷಣ್ಮತಸ್ಥಾಪನಾಚಾರ್ಯರಾದರು. ಇನ್ನೊಂದು ಕಡೆ ಬೌದ್ಧರು ಇಡೀ ಜಗತ್ತೆಲ್ಲವೂ ಜೀವನ ದುಃಖದಿಂದ ಕೂಡಿದೆ. ಶೂನ್ಯ, ಆತ್ಮವಿಲ್ಲ ಎಂದು ಸಾರುತ್ತಿರಲು ಕೌಟುಂಬಿಕ, ಸಾಮಾಜಿಕ ಜೀವನ ಶಿಥಿಲವಾಗುತ್ತಿತ್ತು. ಶಂಕರಾಚಾರ್ಯರು ತಮ್ಮ ಅಪಾರ ವಿದ್ವತ್ತು, ಶಬ್ದ ಸಂಪತ್ತು, ಪ್ರಚಂಡ ತರ್ಕ, ಬೌದ್ಧಿಕ ಉನ್ನತಿ, ಆದರ್ಶ ಜೀವನದ ಮೂಲಕ ಬೌದ್ಧರನ್ನು ವಾದದಲ್ಲಿ ಸೋಲಿಸಿ, ಸನಾತನ ವೈದಿಕ ಸಂಸ್ಕೃತಿಯ ಪುನರುತ್ಥಾನ ಮಾಡಿದರು. ವಿಷ್ಣು ಪುರಾಣದಲ್ಲಿದ್ದ ಪಂಚೋಪಚಾರ, ಷೋಡಶೋಪಚಾರ ಪೂಜಾ ಪದ್ಧತಿಯನ್ನು ಜಾರಿಗೊಳಿಸಿದರು. ದೇಶಾದ್ಯಂತ ಮೂರು ಬಾರಿ ಕಾಲ್ನಡಿಗೆಯಲ್ಲಿ ಸಂಚರಿಸಿ, ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ, ರಾಷ್ಟ್ರೀಯ ಐಕ್ಯತೆ, ಸಮಗ್ರತೆಯನ್ನು ಸ್ಥಾಪಿಸಿದರು. ವಿಖ್ಯಾತ ತತ್ವಜ್ಞಾನಿಗಳಾದ ಪ್ರೊ.ಎಸ್.ರಾಧಾಕೃಷ್ಣನ್, ಡಾ. ಪಾಲ್‌ಬ್ರಂಟನ್ ರವರ ಪ್ರಕಾರ ಶಂಕರಾಚಾರ್ಯರು ಅವತರಿಸದಿದ್ದರೆ, ಹಿಂದೂ ಧರ್ಮವೇ ಉಳಿಯುತ್ತಿರಲಿಲ್ಲ. ಜ್ಞಾನಮಾರ್ಗದ ಅದ್ವೈತ ತತ್ವವನ್ನು ಅರ್ಥಮಾಡಿಕೊಳ್ಳಲು ಜನಸಾಮಾನ್ಯರಿಗೆ ಕಷ್ಟವೆಂದು ಅರಿತ ಆಚಾರ್ಯರು ನೂರಾರು ದೇವತಾ ಸ್ತೋತ್ರಗಳನ್ನು ರಚಿಸಿ, ಭಕ್ತಿ, ಕರ್ಮಮಾರ್ಗಗಳ ಮೂಲಕ ಭಗವಂತನನ್ನು ಆರಾಧಿಸಿ ಎಂದು ಬೋಧಿಸಿದರು. ಗಿರಿ, ತೀರ್ಥ, ಸರಸ್ವತಿ ಎಂಬ ಹತ್ತು ಹೆಸರುಳ್ಳ ದಶನಾಮೀ ಸನ್ಯಾಸೀ ಪರಂಪರೆಯನ್ನು ಜಾರಿಗೊಳಿಸಿದುದು, ಅದು ಇಂದಿಗೂ ಅವಿಚ್ಛಿನ್ನವಾಗಿ ಮುಂದುವರೆದಿದೆ. ಶ್ರೀ ಶಂಕರಾಚಾರ್ಯರ ಈ ಅದ್ಭುತ ಕೊಡುಗೆಗಳನ್ನು ಮನಗೊಂಡ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ಸೂಚನೆ ಯಂತೆ ಕೇಂದ್ರ ಸರ್ಕಾರವು ಶಂಕರಾಚಾರ್ಯ ಜಯಂತಿಯನ್ನು 'ರಾಷ್ಟ್ರೀಯ ತತ್ತ್ವಜ್ಞಾನಿಗಳ ದಿನ' ಎಂದು 2015ರಲ್ಲಿ ಘೋಷಿಸಿ, ಆಚರಿಸಲು ಕರೆ ನೀಡಿದೆ.

ಶ್ರೀ ರಾಮಾನುಜಾಚಾರ್ಯರು ದೀನರ ಸೇವೆ, ಭಗವಂತನ ಸೇವೆ, ಅವನಲ್ಲಿ ಸಂಪೂರ್ಣ ಶರಣಾಗತಿ (ಪ್ರಪತ್ತಿಃ), ಕರ್ಮಾಚರಣೆಗಳ ಮೂಲಕ ಮೋಕ್ಷ ಪಡೆಯಬಹುದೆಂದು ಘೋಷಿಸಿ, ಪಾಂಚರಾತ್ರಾಗಮ ಗ್ರಂಥಗಳಲ್ಲಿ ಹುದುಗಿದ್ದ ದೈವಾಚರಣೆಗಳನ್ನು ದೇವಸ್ಥಾನಗಳಲ್ಲಿ ಜಾರಿಗೊಳಿಸಿ, ಜಾತಿ-ಕುಲ-ಮತಭೇದವಿಲ್ಲದೆ ಎಲ್ಲರೂ ಭಗವಂತನನ್ನು ಒಂಬತ್ತು ರೀತಿಯಲ್ಲಿ ಭಜಿಸಬಹುದು ಎಂದು ತಿಳಿಸಿದರು. ಅವರ ಕಾಲದಲ್ಲಿದ್ದ ರಾಜರ ಮನ ಒಲಿಸಿ, ಸಮಾಜದ ಉಪಯೋಗಕ್ಕೆ ಕೆರೆ-ಭಾವಿ-ಜಲಾಶಯಗಳನ್ನು ನಿರ್ಮಿಸಿದರು. ಆರೋಗ್ಯ ಶಾಲೆಗಳನ್ನು ನಿರ್ಮಿಸಿ ಅರ್ಹರಾದ ಎಲ್ಲರಿಗೂ 'ಓಂ ನಮೋ ನಾರಾಯಣಾಯ' ಎಂಬ ಅಷ್ಟ ಬೀಜಾಕ್ಷರೀ ಮಂತ್ರವನ್ನು ಉಪದೇಶಿಸಿದರು. ದೇಶಾದ್ಯಂತ ನೂರಾರು ಸನ್ಯಾಸಿಗಳೊಂದಿಗೆ ಮೂರು ಬಾರಿ ಸಂಚರಿಸಿ, ಭಕ್ತಿಮಾರ್ಗ ವಿಸ್ತರಣೆ ಮಾಡಿದರು.

ಈ ಹಿನ್ನೆಲೆಯಲ್ಲಿ ವೇದಕಾಲದಿಂದ ಇಂದಿನವರೆಗೆ ನೂರಾರು ಭಾರತೀಯ ದ್ರಷ್ಟಾರರು, ದಾರ್ಶನಿಕರು ಆಯಾ ಕಾಲಗಳ ಸನ್ನಿವೇಶಕ್ಕೆ ತಕ್ಕಂತೆ ಮಾರ್ಗದರ್ಶಕರಾಗಿದ್ದು ತತ್ತ್ವಜ್ಞಾನ ಪರಂಪರೆಯನ್ನು ಮುಂದುವರೆಸಿದ್ದಾರೆ. ವೇದಗಳ ರಹಸ್ಯವನ್ನು ತತ್ತ್ವಜ್ಞಾನಿಗಳಾದ ಶ್ರೀ ಅರಬಿಂದೋ, ಕಪಾಲೀಶಾಸ್ತ್ರಿ, ಎಂ.ಪಿ. ಪಂಡಿತ್, ಮಹರ್ಷಿ ದೈವರಾತ, ವಾಸಿಷ್ಠ ಗಣಪತಿ ಮುನಿ, ಮಹರ್ಷಿ ಮಹೇಶ್ ಯೋಗಿ, ಸ್ವಾಮಿ ದಯಾನಂದ ಸರಸ್ವತಿ ಪ್ರಚುರಗೊಳಿಸಿದ್ದರೆ, ಡಾ. ಎಸ್. ರಾಧಾಕೃಷ್ಣನ್, ಡಾ॥ಸುರೇಂದ್ರನಾಥ ದಾಸ್‌ಗುಪ್ತ, ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಾತೆ ಶಾರದಾದೇವಿ, ನಿಂಬಾರ್ಕ, ವಲ್ಲಭ, ಶ್ರೀ ಚೈತನ್ಯ, ಶ್ರೀ ಶಿಲಾ ಪ್ರಭುಪಾದ ಮುಂತಾದ ತತ್ತ್ವಜ್ಞಾನಿಗಳು ಭಾರತೀಯ ದರ್ಶನಕ್ಕೆ ಭದ್ರ ಬುನಾದಿ ಹಾಕಿದ್ದಾರೆ. ಹೀಗಾಗಿ ಹಿಂದೂ ಧರ್ಮವು ನೂರಾರು ವರ್ಷಗಳ ಕಾಲ ವಿದೇಶೀ ಆಕ್ರಮಣಕ್ಕೆ ಒಳಗಾದರೂ, ಇಂದಿಗೂ ದೃಢವಾಗಿ ನಿಂತು ತನ್ನ ಅಂತಸ್ಸತ್ತ್ವವನ್ನು ಮೆರೆಯುತ್ತಿದೆ. ಇಂತಹ ಅಭೂತಪೂರ್ವ, ಪ್ರಾಯೋಗಿಕ ತತ್ತ್ವಜ್ಞಾನದ ಎತ್ತರ-ಬಿತ್ತರಗಳನ್ನು ನೀಡಿದ ಎಲ್ಲ ಮಹಾದಾರ್ಶನಿಕರಿಗೆ 'ಈ ರಾಷ್ಟ್ರೀಯ ತತ್ತ್ವಜ್ಞಾನಿಗಳ ದಿನ' ದಂದು ನಮ್ಮ ನಮನ ಸಲ್ಲಿಸೋಣ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
ಪ್ರೊ. ॥ಎಂ.ಕೆ. ಶ್ರೀಧರ್

# ಹರಿಹರಪುರದಲ್ಲಿ ವೈಭವಯುತ ಮಹಾಕುಂಭಾಭಿಷೇಕ ಮಹೋತ್ಸವ

## ಹಠಮಾರಿತನದಿಂದ ಧಾರ್ಮಿಕ ಸಾಮರಸ್ಯಕ್ಕೆ, ವಿಶ್ವಶಾಂತಿಗೆ ಧಕ್ಕೆ-ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು

**ಜಗತ್ತಿನಲ್ಲಿ ಯಾವ ಜನರಿಗೆ ಯಾವ ದೇಶದಲ್ಲಿ ಶ್ರದ್ಧಾಭಕ್ತಿ ಇರುತ್ತದೋ ಅ ದೇವರಲ್ಲಿ ಅವರಿಗೆ ಶ್ರದ್ಧೆಯನ್ನು ನಾವು ದೃಢಪಡಿಸುತ್ತೇವೆ ಎಂದು ಹಿಂದೂ ಧರ್ಮ ಸಾರುತ್ತದೆ. ಈ ವಿಚಾರಗಳನ್ನು ಕುರಾನ್, ಬೈಬಲ್‌ನಲ್ಲಿ ಒಪ್ಪಿದ್ದರೆ ಇಂದು ಜಗತ್ತಿನಲ್ಲಿ ಭಯೋತ್ಪಾದನೆ, ಉಗ್ರವಾದ, ಕೋಮು ಸಂಘರ್ಷ, ಮತಾಂತರದಂತಹ ಸಮಾಜಘಾತುಕ ಚಟುವಟಿಕೆಗಳು ನಡೆಯುತ್ತಿರಲಿಲ್ಲ ಎಂದು ಹರಿಹರಪುರ ಶ್ರೀಮಠದ ಶ್ರೀಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಮಹಾಸ್ವಾಮಿಗಳು ಹೇಳಿದರು.**



ಶ್ರೀಮಠದಲ್ಲಿ ನಡೆಯುತ್ತಿರುವ ಮಹಾಕುಂಭಾಭಿಷೇಕದ 12ನೇ ದಿವಸವಾದ ಗುರುವಾರ ಧಾರ್ಮಿಕ ಸಭೆಯಲ್ಲಿ ಪ್ರವಚನ ನೀಡಿದ ಶ್ರೀ ಶ್ರೀಗಳು ಧೋರಣೆಯೇ ಧಾರ್ಮಿಕ ಸಾಮರಸ್ಯಕ್ಕೆ, ವಿಶ್ವಶಾಂತಿಗೆ ಧಕ್ಕೆ ತಂದಿದೆ ಎಂದರು. ಭಾರತೀಯ ಸಂಸ್ಕೃತಿ ದೈವತ್ವ ಸಾರಿದ ಸಂಸ್ಕೃತಿ, ಏಕತೆಯ ಸೂತ್ರದಲ್ಲಿ ಪೋಣಿಸಲ್ಪಟ್ಟಿದೆ. ನಾವು ಧಾರ್ಮಿಕ ವೈವಿಧ್ಯತೆಯನ್ನು ಒಪ್ಪುತ್ತೇವೆ. ಆದರೆ ಅಸಮಾನತೆಯನ್ನು ಒಪ್ಪುವುದಿಲ್ಲ. ನಾವು ಶ್ರೇಷ್ಠ ಸಂಸ್ಕೃತಿಯ ವಾರಸುದಾರರು. ಭಾರತೀಯ ಸಂಸ್ಕೃತಿಯ ಔನ್ನತ್ಯವನ್ನು ಜಗತ್ತಿಗೆ ಸಾರುವ ಕಾಲ ಸನ್ನಿಹಿತವಾಗಿದೆ. ಎಲ್ಲರೂ ಒಗ್ಗಟ್ಟಿನಿಂದ ಏಕತೆಯಿಂದ ಇರುವ ದೃಢ ಸಂಕಲ್ಪ ಮಾಡೋಣ ಎಂದರು. ಜೀವನದಲ್ಲಿ ಉನ್ನತ ಗುರಿಯನ್ನು ಇಟ್ಟುಕೊಂಡು ಸಾಧನೆ ಮಾಡಿದರೆ ಗುರಿಯನ್ನು ತಲುಪಲು ಸಾಧ್ಯ ಎಂದರು.

## ಆದರ್ಶ ಸಮಾಜ ನಿರ್ಮಾಣಕ್ಕೆ ಭಕ್ತಿಯೇ ಮೂಲ-ಎಸ್. ಬೊಮ್ಮಾಯಿ



**ಆದಿ ಶಂಕರರ ತತ್ವಾದರ್ಶಗಳು ಇಂದಿಗೂ ಪ್ರಸ್ತುತ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ಅವರು ಕೊಪ್ಪ ತಾಲ್ಲೂಕಿನ ಹರಿಹರಪುರದ ಮಠದಲ್ಲಿ ಮಹಾಕುಂಭಾಭಿಷೇಕದ ಪ್ರಯುಕ್ತ ಆಯೋಜಿಸಿದ್ದ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದರು.**

ಆದಿಶಂಕರರ ತತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಕೊಂಡಾಗ ಉತ್ತಮ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಮಾನವನಾಗಿ ಹುಟ್ಟುವುದೇ ದೊಡ್ಡ ಪುಣ್ಯದ ಕೆಲಸವಾಗಿದೆ. ಭಗವಂತ ನಮಗೆ ಏತಕ್ಕಾಗಿ ಇಂತಹ ಅವಕಾಶ ನೀಡಿದ್ದಾನೆ ಎಂದು ಆಂತರಿಕವಾಗಿ ಯೋಚಿಸಿದರೆ ಮಾತ್ರ ಜೀವನ ಸಾರ್ಥಕವಾಗುತ್ತದೆ. ಮೊದಲು ನಾನು ಎಂಬ ಬಾರವನ್ನು ಭಗವಂತನಿಗೆ ಸಮರ್ಪಣೆ ಮಾಡಬೇಕು. ಭಕ್ತಿ ಎಂದರೆ ಉತ್ಕೃಷ್ಟವಾದ, ಪ್ರತಿಫಲಾಪೇಕ್ಷೆಯಿಲ್ಲದ, ಷರತ್ತಿಲ್ಲದ ಪ್ರೀತಿಯಾಗಿದೆ. ಆದರ್ಶ ಸಮಾಜ ನಿರ್ಮಾಣವಾಗಲು ನಮ್ಮೊಳಗೆ ದೇವರು, ಗುರುಭಕ್ತಿ ಮತ್ತು ಆತ್ಮವಿಶ್ವಾಸಬೇಕು. ಸಮಾಜದಲ್ಲಿ ಶಾಂತಿ, ಸಹಬಾಳ್ವೆ ಮೂಡಿಸುವಲ್ಲಿ ಶ್ರೀಮಠದ ಪಾತ್ರ ಬಹುಮುಖ್ಯವಾಗಿದೆ. ಆದ್ದರಿಂದ ಆತ್ಮಶಾಂತಿ ಜೀವಂತವಾಗಿದೆ. ಸರಕಾರ ಶ್ರೀಮಠಕ್ಕೆ ಸಂಪೂರ್ಣ ಬೆಂಬಲ ನೀಡುತ್ತದೆ ಎಂದರು.

## ವಿವಿಧತೆಯಲ್ಲಿ ಏಕತೆ ಸಾರುವ ಹಿಂದೂಧರ್ಮ

- ದತ್ತಾತ್ರೇಯ ಹೊಸಬಾಳೆ

**ಇಂದು ಧರ್ಮದ ಹೆಸರಿನಲ್ಲಿ ಸಂಕುಚಿತ ಭಾವನೆ ಹೆಚ್ಚುತ್ತಿದ್ದು ಧರ್ಮ ಸಂಘರ್ಷಗಳು ನಡೆಯುತ್ತಿವೆ. ದೇಶ ದೇಶಗಳ ಮಧ್ಯೆ ಯುದ್ಧ ನಡೆಯುತ್ತಿವೆ. ಸನಾತನ ಹಿಂದೂ ಧರ್ಮ ವಿವಿಧತೆಯಲ್ಲಿ ಏಕತೆಯನ್ನು ಸಾರು ಜಗತ್ತಿನ ಏಕೈಕ ಧರ್ಮ. ಏಕತ್ವದ ಸಂದೇಶ ಪ್ರತಿ ಮನೆ ಮನಗಳಿಗೆ ತಲುಪಬೇಕು. ಹಿಂದೂ ಜೀವನ ಪದ್ಧತಿಯನ್ನ ನಮ್ಮ ಪ್ರತಿನಿತ್ಯದ ಚಟುವಟಿಕೆಯಲ್ಲಿ ಮೈಗೂಡಿಸಿಕೊಳ್ಳಬೇಕು ಎಂದ ಆರ್.ಎಸ್.ಎಸ್. ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ತಿಳಿಸಿದರು.**

ದೇವರೊಬ್ಬ ನಾಮ ಹಲವು ಎಂಬುದನ್ನು ಹಿಂದೂ ಧರ್ಮ ಒಪ್ಪುತ್ತದೆ. ನೆಲ, ಜಲ, ಕಲ್ಲುಗಳನ್ನು ಸಹ ದೇವರೆಂದು ಆರಾಧಿಸುವ ಧರ್ಮ ನಮ್ಮದು. ಆದ್ದರಿಂದ ಅನೇಕ ದಾಳಿಗಳಿಗೆ ತುತ್ತಾದರೂ



ಹರಿಹರಪುರ ಶ್ರೀಮಠದಲ್ಲಿ ನಡೆಯುತ್ತಿರುವ ಮಹಾಕುಂಭಾಭಿಷೇಕದ 12ನೇ ದಿವಸದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ಎಸ್ ಸಹಕಾರ್ಯವಾಹ ದತ್ತಾತ್ರೇಯ ಹೊಸಬಾಳೆಯವರಿಗೆ ಲಕ್ಷ್ಮೀನರಸಿಂಹ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇಂದಿಗೂ ಹಿಂದೂ ಧರ್ಮ ಗಟ್ಟಿಯಾಗಿ ನಿಂತಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, ಹರಿಹರಪುರ ಸ್ವಾಮಿಜಿಗಳು ಧಾರ್ಮಿಕ ಸೇವೆಯ ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೂ ಹಲವಾರು ಕೊಡುಗೆ ನೀಡಿದ್ದಾರೆ. 20,000ಕ್ಕೂ ಹೆಚ್ಚು ವಚನಗಳನ್ನು ಬರೆದು ಸಮಾಜದಲ್ಲಿ ಧಾರ್ಮಿಕ ಪ್ರಜ್ಞೆ ಪ್ರೇರೆಪಿಸಿದ್ದಾರೆ. ಕೊಪ್ಪದ ಕನ್ನಡ ಭವನಕ್ಕೆ ಆರ್ಥಿಕ ಸಹಕಾರ ನೀಡಿದ್ದಾರೆ ಎಂದರು.

ಸಭೆಯಲ್ಲಿ ಪಾರ್ವತಿ ನಾಗೇಂದ್ರ ರಚಿಸಿರುವ ಸಾಮಾನ್ಯ ಆರೋಗ್ಯಕ್ಕೆ ಆಯುರ್ವೇದ ಕೈಪಿಡಿ ಕೃತಿಯನ್ನು ದತ್ತಾತ್ರೇಯ ಹೊಸಬಾಳೆಯವರು ಬಿಡುಗಡೆ ಮಾಡಿದರು. ಸಂಸದ ಬಿ.ವೈ.ರಾಘವೇಂದ್ರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್, ಶಾಸಕ ಹರತಾಳು ಹಾಲಪ್ಪ, ಡಾ.ಭೀಮೇಶ್ವರ ಜೋಶಿ, ಬಿ.ಎಸ್. ರವಿಶಂಕರ್, ಡಾ|| ಬಿ.ಎಸ್.ರಾಘವೇಂದ್ರ ಭಟ್ಟ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು.

## ಹರಿಹರಪುರ ಕರ್ನಾಟಕದ ಹೆಮ್ಮೆಯ ಕ್ಷೇತ್ರ



**ಮಲೆನಾಡಿನ ಕ್ಷೇತ್ರವಾಗಿ ಬೆಳೆಯುತ್ತಿರುವ ಹರಹರಪುರ ಕರ್ನಾಟಕದ ಹೆಮ್ಮೆಯಾಗಿದೆ. ಶ್ರೀಗಳ ಆಶೀರ್ವಾದ ಭಕ್ತರಿಗೆ, ನಾಡಿನ ಸಮಸ್ತ ಜನತೆಗೂ ಸಿಗಲಿ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು. ಹರಹರಪುರದಲ್ಲಿ ನಡೆಯುತ್ತಿರುವ ಮಹಾಕುಂಭಾಭಿಷೇಕ ಮಹೋತ್ಸವದ 13ನೇ ದಿನದ ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು,** ತುಂಗಾ ತೀರದ ಈ ಪವಿತ್ರ ಕ್ಷೇತ್ರ ವಿಶ್ವ ಪ್ರಸಿದ್ಧವಾಗಿದೆ. ಪೂಜ್ಯ ಶ್ರೀಗಳ ನೇತೃತ್ವದಲ್ಲಿ ಹರಿಹರಪುರ ಕ್ಷೇತ್ರದಲ್ಲಿ ಅಭೂತಪೂರ್ವ ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಸಣ್ಣ ಹಳ್ಳಿಯಲ್ಲಿರುವ ಈ ಕ್ಷೇತ್ರಕ್ಕೆ ದೇಶ, ವಿದೇಶಗಳಿಂದ ಭಕ್ತರು ಪ್ರವಾಸಿಗಳು ಬರುತ್ತಿರುವುದು ಎಲ್ಲರೂ ಹೆಮ್ಮೆಪಡುವ ವಿಚಾರ ಎಂದರು.

ರಾಜ್ಯ ಬಿಜೆಪಿ ಉಸ್ತುವಾರಿ ಅರುಣ ಸಿಂಗ್ ಮಾತನಾಡಿ, ಇಂತಹ ಪವಿತ್ರ ಕ್ಷೇತ್ರದ ದರ್ಶನ, ಸ್ವಾಮೀಜಿಗಳ ಆಶೀರ್ವಾದ ಸಿಕ್ಕಿದ್ದು ನನ್ನ ಸೌಭಾಗ್ಯ. ಪೂಜ್ಯರ ಆಶೀರ್ವಾದದಿಂದ ಇಲ್ಲಿನ ಜನತೆ ಸುಖ, ಸಂತೋಷ, ನೆಮ್ಮದಿ, ಆರೋಗ್ಯದಿಂದ ಪ್ರಸನ್ನರಾಗಬೇಕು ಎಂದರು.

ದುರದೃಷ್ಟವಶಾತ್ ಭಗವದ್ಗೀತೆ ಬಗ್ಗೆ ಮಾತನಾಡಿದಾಗ ಕುರಾನ್ ತರುತ್ತೀರಾ, ಬೈಬಲ್ ತರುತ್ತೀರಾ ಎಂದು ಕೆಲವರು ಕೇಳುತ್ತಾರೆ. ಭಗವದ್ಗೀತೆಯನ್ನು ಬೈಬಲ್ ಮತ್ತು ಕುರಾನ್ ಜೊತೆ ಹೋಲಿಸುವ ಕೆಲಸ ಆಗುತ್ತಿದೆ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಬೇಸರ ವ್ಯಕ್ತಪಡಿಸಿರು. **ಮಠದ ಶ್ರೀ ಸ್ವಯಂಪ್ರಕಾಶ ಸರಸ್ವತಿ ಮಹಾಸ್ವಾಮಿಗಳ ಆಶೀರ್ವಾದ ಪಡೆದ ಯಡಿಯೂರಪ್ಪ ಹಾಗೂ ಅರುಣ್ ಸಿಂಗ್ ಅವರನ್ನು ಶ್ರೀಮಠದಿಂದ ಗೌರವಿಸಲಾಯಿತು.**

ಕಾರ್ಯಕ್ರಮದಲ್ಲಿ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಆರೋಗ್ಯ ಸಚಿವ ಡಾ. ಸುಧಾಕರ್, ರಾಷ್ಟ್ರೀಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಸಂಸದ ತೇಜಸ್ವಿ ಸೂರ್ಯ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್, ಶಾಸಕ ರವಿಸುಬ್ರಹ್ಮಣ್ಯ, ವಿಶ್ವ ಹಿಂದೂ ಪರಿಷತ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ವರ ಕೋಟೆಗಾರ್ ಶರ್ಮ, ಮಹಾಕುಂಭಾಭಿಷೇಕ ಮಹೋತ್ಸವದ ಕಾರ್ಯಾಧ್ಯಕ್ಷ ಡಾ. ಭೀಮೇಶ್ವರ ಜೋಶಿ, ಶ್ರೀಮಠದ ಆಡಳಿತಾಧಿಕಾರಿ ಬಿ.ಎಸ್.ರವಿಶಂಕರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕ ರಾಘವೇಂದ್ರ ಮತ್ತಿತರರಿದ್ದರು.

# ಹೊಸಪೇಟೆಯಲ್ಲಿ ಮಹಾಕುಂಬಾಭಿಷೇಕ:



ಹೊಸಪೇಟೆ ಕೃಷ್ಣಾ ನಗರದಲ್ಲಿ ದಿನಾಂಕ 15.04.2022 ಶುಕ್ರವಾರದಂದು ಬೆಳಗ್ಗೆ ಬ್ರಾಹ್ಮೀ ಶುಭಮುಹೂರ್ತ ಪುಷ್ಕರಾಂಶದಲ್ಲಿ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಹಂಪಿ ವಿರೂಪಾಕ್ಷ ವಿದ್ಯಾರಣ್ಯ ಮಹಾಸಂಸ್ಥಾನ ಶ್ರೀ ಶ್ರೀ ವಿದ್ಯಾರಣ್ಯ ಭಾರತೀ ಮಹಾಸ್ವಾಮಿಗಳ ಅದ್ವಯರಾದಲ್ಲಿ ಶ್ರೀ ಗಾಯತ್ರಿ ದೇವಿ ಶಿಲಾಮೂರ್ತಿ ಮತ್ತು ಪಂಚಾಯತನ ಯಂತ್ರ ಪ್ರತಿಷ್ಠಾಪನೆಯನ್ನು, ಪ್ರಾಣಪ್ರತಿಷ್ಠೆ, ಶಾಂತಿ ಹೋಮಾದಿಗಳು, ಬಲಿಪ್ರದಾನ, ಮಹಾಕುಂಬಾಭಿಷೇಕವನ್ನು ಶ್ರೀ ಗಾಯತ್ರಿ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಸದಸ್ಯರ ಕ್ಷೇಮಾಭಿವೃದ್ಧಿ ಸಂಸ್ಥೆ, ಹೊಸಪೇಟೆ ಹಾಗು ಹೊಸಪೇಟೆ ತಾಲೂಕು ಬ್ರಾಹ್ಮಣ ಸಂಘ ಇವರ ನಿರ್ವಹಣೆಯಲ್ಲಿ ನೆರೆವೇರಿಸಲಾಯಿತು .

ಕುಂಭಾಭಿಷೇಕ ಪೂರ್ಣಾಹುತಿಯಲ್ಲಿ ಗಾಯತ್ರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹನುಮಂತ ರಾವ್ ಹಾಗು ಕುಟುಂಬ ಮತ್ತು ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ದಿವಾಕರ್ ಮತ್ತು ಕುಟುಂಬ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿ ಸದಸ್ಯ ಉಮೇಶ್ ಹಾಗು ಗುರುದತ್ ಅಗ್ನಿಹೋತ್ರಿ, ಬ್ರಾಹ್ಮಣ ಸಂಘದ ಕಾರ್ಯದರ್ಶಿ ಶ್ರೀ ವೇಣುಗೋಪಾಲ್ ವೈದ್ಯ, ಚಿತ್ತವಾಡ್ಗಿ ಬ್ರಾಹ್ಮಣ ಸಂಘದ ಅಧ್ಯಕ್ಷ ಪಿ.ಶ್ರೀನಿವಾಸ್, ಹಾಗೂ ವಿಪ್ರ ಸಮುದಾಯದ ಮುಖಂಡರು, ಮಹಿಳೆಯರು ಮತ್ತು ಗಾಯತ್ರಿ ಪರಿವಾರದವರು ಭಾಗವಹಿಸಿದ್ದರು.



# ಯಲಹಂಕದಲ್ಲಿ ಶ್ರೀ ಶತಚಂಡಿಕಾಯಾಗ ಮಹಾಯಾಗ



ದಿನಾಂಕ 17.04.2022 ನೇ ಭಾನುವಾರ, ಬೆಂಗಳೂರು ಉತ್ತರ ವಲಯ ಯಲಹಂಕ ಉಪನಗರ ಅಟ್ಟೂರು, ಮುನೇಶ್ವರ ಬಡಾವಣೆಯಲ್ಲಿ ಶ್ರೀ ಶತಚಂಡಿಕಾ ಮಹಾಯಾಗವು ಶ್ರೀ ಶ್ರೀ ಶ್ರೀ ಡಾ॥ ಮಧುಸೂದನಾನಂದಪುರಿ ಸ್ವಾಮಿಗಳ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವೈಭವೋಪೇತವಾಗಿ ನಡೆಯಿತು.

ಈ ಮಹಾಪುಣ್ಯಕಾರ್ಯದಲ್ಲಿ ಅರಸೀಕೆರೆಯ ಶ್ರೀ ಮಾರುತಿ ಸಚ್ಚಿದಾನಂದ ಆಶ್ರಮದ ಶ್ರೀ ಶ್ರೀ ಪರಂಪರಾವಧೂತ ಸತೀಶ ಶರ್ಮಾ ಗುರೂಜಿ ಮತ್ತು ಅನೇಕ ವಿಪ್ರ ಸಮುದಾಯದವರು ಕುಟುಂಬ ಸಹಿತವಾಗಿ ಸಕ್ರಿಯವಾಗಿ ಪಾಲ್ಗೊಂಡು ಈ ಮಂಗಳಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿದರು. ಈ ಸಂದರ್ಭದಲ್ಲಿ AKBMS ಕಾರ್ಯಕಾರಿ ಸಮಿತಿಯ ಸದಸ್ಯರಾದ ಕೌಶಿಕ್ ಹಾಗೂ ಉತ್ತರ ವಲಯದ ಸಹ ಸಂಚಾಲಕರಾದ ಶ್ರೀ ಕೆ ಎಸ್ ಶ್ರೀಕಂಠ ಪ್ರಸಾದ್ ಅವರು ಉಪಸ್ಥಿತರಿದ್ದರು. AKBMS ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಂತೆ ಬೆಂಗಳೂರು ನಗರ ಉತ್ತರ ವಲಯದ ಕ್ಷೇತ್ರದಲ್ಲಿ AKBMS ಸದಸ್ಯತ್ವ ಅಭಿಯಾನಕ್ಕೆ ಚಾಲನೆ ಕೊಟ್ಟರು. ಮಹಾಸಭಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಪ್ರರ ಒಳಿತಿಗಾಗಿ ಶ್ರಮಿಸಬೇಕೆಂದು ಕೋರಿದರು.

# ಅಕ್ಷಯ ತೃತೀಯಾ

**ಡಾ.ಮಂಜುನಾಥ ಭಟ್ಟ ವಿನಾಯಕ**

ಭಾರತ ಹಬ್ಬಗಳ ತವರು. ನಾನಾವಿಧ ಹಬ್ಬ ಹರಿದಿನಗಳ ಆಚರಣೆಗಳಿಂದ ಜನರು ತಮ್ಮ ಭಾವನೆಗಳ ಹಂಚಿಕೊಳ್ಳುವಿಕೆಯಿಂದ ಸುಖ ಶಾಂತಿ ನೆಮ್ಮದಿಗಳನ್ನು ಕಂಡುಕೊಳ್ಳುತ್ತಾರೆ. ಹೀಗೆ ವರ್ಷಾರಂಭದ ಯುಗಾದಿಯಿಂದ ಹಿಡಿದು ವರ್ಷದ ಕೊನೆಯಲ್ಲಿ ಬರುವ ಮಹಾಶಿವರಾತ್ರಿವರೆಗೂ ಈ ವಿವಿಧ ಬಗೆಯ ಹಬ್ಬ ಹರಿದಿನಗಳನ್ನು ಆಚರಿಸುವ ಪದ್ಧತಿ ಸನಾತನವಾದದ್ದು. ಇವುಗಳಲ್ಲಿ ಬರುವ ವೈಶಾಖ ಮಾಸದ ಶುಕ್ಲ ತೃತೀಯಾ ದಿನವನ್ನು ಅಕ್ಷಯ ತೃತೀಯಾ ಎಂದು ಭಾರತೀಯರು ಆಚರಿಸುತ್ತಾರೆ.

**ವೈಶಾಖಯೋಃ ಶುಕ್ಲಪಕ್ಷೇತು ತೃತೀಯಾ ರೋಹಿಣೀಯುತಾ ।**

**ವಿನಾಪಿ ರೊಹಿಣೇ ಯಾಗಾತ್ ಪುಣ್ಯಕೋಟಿ ಪ್ರದಾ ಸದಾ ॥**

ನಿರ್ಣಯಸಿಂಧುವಿನ ಈ ವಾಕ್ಯವು ರೋಹಿಣಿ ನಕ್ಷತ್ರ ಇದ್ದ ತೃತೀಯಾ ಅತ್ಯಂತ ಹೆಚ್ಚು ಶ್ರೇಷ್ಠವಾದದ್ದು ಎಂದು ರೋಹಿಣಿ ನಕ್ಷತ್ರವಿಲ್ಲದ ವೈಶಾಖ ಶುಕ್ಲ ತೃತೀಯಾವು ಅತ್ಯಂತ ಪುಣ್ಯಕರವಾದದ್ದೆಂದು ತಿಳಿಸಲ್ಪಟ್ಟಿದೆ.

ಇದು ವರ್ಷದ ಮೂರುವರೆ ಮುಹೂರ್ತದಲ್ಲಿ ಒಂದಾಗಿದ್ದು ವಿಜಯದಶಮಿಯಂತೆ ದಿನಪೂರ್ತಿ ಶ್ರೇಷ್ಠವೆಂದು ಗ್ರಾಹ್ಯ. ಅಂದು ಹತ್ತು ಹಲವು ಹೊಸ ಕಾರ್ಯವನ್ನು ಆರಂಭಿಸುವ ಶುಭದಿನವಾಗಿರುತ್ತದೆ. ರೈತರು ತಮ್ಮ ಹೊಲದಲ್ಲಿ ಮೊಟ್ಟಮೊದಲು ಉತ್ತುವುದಕ್ಕೆ, ಬಿತ್ತುವುದಕ್ಕೆ ಅತ್ಯಂತ ಶ್ರೇಷ್ಠವಾಗಿದ್ದು ——— ಯುಕ್ತವಾದರೆ ಅತ್ಯಂತ ಶುಭಪ್ರದವೆಂದು ಭಾವಿಸುತ್ತಾರೆ. ಅಂದು ಕೊಂಡುಕೊಳ್ಳುವ ಸ್ಥಿರ–ಚಿರಸ್ವತ್ತುಗಳು ಅಕ್ಷಯವಾಗುವುದೆಂಬ ಭಾವನೆಯಿಂದ ಚಿನ್ನ ಮುಂತಾದ ಬೆಲೆಬಾಳುವ ವಸ್ತುವನ್ನು ಕೊಳ್ಳುವುದಕ್ಕೂ, ಬ್ರಹ್ಮೋಪದೇಶ, ವಿವಾಹ, ಗೃಹಪ್ರವೇಶ ಮುಂತಾದ ಶುಭಕರ್ಮವನ್ನು ಆಚರಿಸಲು ಈ ದಿನಕ್ಕಾಗಿ ಕಾಯುತ್ತಾ ಇರುತ್ತಾರೆ.

**ಆಚಾರ ವಿಧಾನ** : ಇಂದು ಮಾಡುವ ಎಲ್ಲ ಪುಣ್ಯ ಕರ್ಮವೂ ಅಕ್ಷಯವಾಗುವುದು ಎನ್ನುವ ಭಾವನೆ ಇದೆ. ಅಂದು ಸ್ನಾನ–ದಾನ, ಜಪ–ತಪ, ಹೋಮ, ನಿಯಮ, ವ್ರತ ಕಥೆ ಎಲ್ಲವೂ ಅಕ್ಷಯ ಪುಣ್ಯ ಫಲಪ್ರದವಾಗಿದೆ. ಅಂದು ಪೂರ್ವಾಹ್ನದಲ್ಲಿ ತದಿಗೆ ತಿಥಿ ಇದ್ದು, ಪ್ರಾತಃಕಾಲ ಸ್ನಾನಾದಿಗಳನ್ನು ಪೂರೈಸಿ ಶ್ರೀ ಲಕ್ಷ್ಮೀನಾರಾಯಣರನ್ನು ಪೂಜಿಸಿ ಸತ್ಪಾತ್ರರಿಗೆ ಜಲಪೂರ್ಣಕಲಶ, ಬೀಸಣಿಗೆ, ವಸ್ತ್ರ, ಕೊಡೆ, ಪಾದುಕೆ, ಬೆಲ್ಲ, ದಕ್ಷಿಣೆ ಮುಂತಾದವುಗಳನ್ನು ದಾನ ಮಾಡಬೇಕು. ನಂತರ ಫಲಾಹಾರವನ್ನು ಸೇವಿಸಿ ಅಕ್ಷಯ ತೃತೀಯಾ ಮಹಾತ್ಮೆಯನ್ನು ಶ್ರವಣ ಮಾಡಿ ಗುರುಹಿರಿಯರ ಆಶೀರ್ವಾದ ಪಡೆಯಬೇಕು.

**ಇತಿಹಾಸ** : ಹಿಂದೆ ಕುಶಾಲನಗರದಲ್ಲಿ ಪ್ರಿಯವಾದಿಯೂ, ಸತ್ಯ



ವಾದಿಯೂ ಶ್ರದ್ಧಾ–ಭಕ್ತಿ ಸಮನ್ವಿತನೂ ಆದ ಧರ್ಮಪಾಲನೆಂಬ ಕಡುಬಡವ ವೈಶ್ಯನಿದ್ದನು. ಆತನದು ಬಹುದೊಡ್ಡ ಕುಟುಂಬ. ಮನೆಯಲ್ಲಿ ನಿತ್ಯ ಏಕಾದಶಿ. ಒಮ್ಮೆ ಆತನ ಮನೆಯವರು ಬೇಡವೆಂದರೂ ಕೇಳದೇ ಅಕ್ಷಯ ತೃತೀಯಾ ಮಹಾತ್ಮೆಯನ್ನು ಕೇಳಿ, ತಿಳಿದು ಶ್ರದ್ಧಾ, ಭಕ್ತಿಯಿಂದ ಆಚರಿಸಿದನು. ತನ್ನಲ್ಲಿರುವ ವಸ್ತುಗಳನ್ನು ಯಥಾಶಕ್ತಿ ದಾನಧರ್ಮವನ್ನು ಮಾಡಿದನು. ಪರಿಣಾಮವಾಗಿ ನೋಡನೋಡುತ್ತಿರುವಂತೆ ಆತನ ಆರ್ಥಿಕ ಸ್ಥಿತಿಗತಿ ಪವಾಡ ಸದೃಶವಾಗಿ ಬದಲಾಗುತ್ತ ಅಪಾರವಾದ ಸುಖ ಸಂಪತ್ತುಗಳನ್ನು ಅನುಭವಿಸಿ ಮುಂದಿನ ಜನ್ಮದಲ್ಲಿ ಕುಶಾವತಿ ನಗರದಲ್ಲಿ ಶ್ರೀಮಂತ ಕ್ಷತ್ರಿಯ ಕುಲದಲ್ಲಿ ರಾಜನಾಗಿ ಜನಿಸಿದ. ಅತ್ಯಂತ ರೂಪವಂತನೂ, ಗುಣವಂತನೂ, ಪರಾಕ್ರಮಿಯೂ ಆಗಿದ್ದು, ಧರ್ಮಪರಾಯಣನೂ, ಅಷ್ಟೈಶ್ವರ್ಯ ಸಂಪನ್ನನೂ ಸಕಲ ಭೋಗಗಳನ್ನು ಅನುಭವಿಸಿದನು. ಅವನ ರಾಜ್ಯದ ಪ್ರಜೆಗಳು ಅಕ್ಷಯ ಸುಖ ಶಾಂತಿ ಸಮೃದ್ಧಿಯಿಂದಿದ್ದರು.

ಅಂದು ಪರಶುರಾಮನ ಜಯಂತಿ. ಅಲ್ಲದೆ ಛತ್ರಪತಿ ಶಿವಾಜಿ, ಬಸವೇಶ್ವರ, ಗುರುನಾನಕ್ ಮುಂತಾದ ನಾಡಿನ ಶ್ರೇಷ್ಠರ ಜನ್ಮದಿನವೂ ಆಗಿದೆ.



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಛೇರಿಯ ಗಾಯತ್ರೀ ಭವನದಲ್ಲಿ ನಡೆದ ಶಂಕರರ ಹಾಗೂ ರಾಮಾನುಜಾಚಾರ್ಯರ ಜಯಂತಿ**

# ಮಹಾದಾರ್ಶನಿಕ: ಶ್ರೀರಾಮಾನುಜಾಚಾರ್ಯರು-ಒಂದು ತಾತ್ವಿಕ ಚಿಂತನೆ

-ಡಾ. ಲಕ್ಷ್ಮೀಕಾಂತ.ವಿ.ಮೊಹರೀರ
ಸಂಸ್ಕೃತಿ ಚಿಂತಕರು, ರಾಯಚೂರು

ಪರಮ ಪವಿತ್ರವಾದ ನಮ್ಮ ಭರತ ಭೂಮಿಯಲ್ಲಿ ಅಧ್ಯಾತ್ಮಿಕ ತತ್ವಗಳನ್ನು ಪ್ರಕಾಶಪಡಿಸುವ ಅನೇಕ ದರ್ಶನಗಳಿವೆ. ಅವುಗಳಲ್ಲಿ 'ಶ್ರೀವಿಶಿಷ್ಟಾದ್ವೈತ ದರ್ಶನವು ವೇದ-ವೇದಾಂಗ ಆಗಮಾದಿಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವ ತತ್ತ್ವ ವಿಶೇಷಗಳಿಂದ ಅತ್ಯಂತ ವಿಶಿಷ್ಟಯುತವಾಗಿ ಪರಮಾರ್ಥಪ್ರದವಾಗಿ ಬೆಳಗುತ್ತಿದೆ. ವಿಶಿಷ್ಟರಿಂದ ವಿಶಿಷ್ಟ ಕ್ರಮದಲ್ಲಿ ಉಪದೇಶಿಸಲ್ಪಟ್ಟ ಉಪನಿಷತ್ತುಗಳ ಸಾರವನ್ನು ಬೋಧಿಸುವ ಅದ್ವೈತವಾದ್ದರಿಂದ ಇದು 'ವಿಶಿಷ್ಟಾದ್ವೈತ' ಎಂದು ಹೆಸರವಾಸಿಯಾಗಿದೆ. ಈ ದರ್ಶನಕ್ಕೆ 'ಶ್ರೀ ಸಂಪ್ರದಾಯ' ವೆಂತಲೂ, 'ಶ್ರೀ ವೈಷ್ಣವ ಸಂಪ್ರದಾಯ' ವೆಂತಲೂ ಶ್ರೀರಾಮಾನುಜ ದರ್ಶನ' ವೆಂಬ ಅನೇಕಾನೇಕ ಹೆಸರುಗಳಿವೆ. ಶ್ರೀವೈಷ್ಣವ ದರ್ಶನಕ್ಕೆ ಪಾಂಚರಾತ್ರಾಗಮವೇ ಪ್ರಧಾನ ಆಧಾರವಾಗಿರುವುದರಿಂದ ಇದನ್ನು 'ಪಂಚರಾತ್ರ ಧರ್ಮ' ವೆಂತಲೂ ಸಂಬೊಧಿಸುತ್ತಾರೆ.

ಇಂತಹ ಶ್ರೀವೈಷ್ಣವ ಸಂಪ್ರದಾಯವನ್ನು ಮುನ್ನಡೆಸಿದ ಕೀರ್ತಿಗೆ ಭಾಜನರಾದ ಶ್ರೀರಾಮಾನುಜಾಚಾರ್ಯರ ಹೆಸರು ಇತಿಹಾಸದ ಪುಟಗಳಲ್ಲಿ ಅಜರಾಮರವಾಗಿದೆ. ಮಾನವ ಸಮಾಜದ ಅಭ್ಯುದಯಕ್ಕಾಗಿಯೇ ತನು-ಮನ-ಧನದ ಜೊತೆಗೆ ನಿಸ್ವಾರ್ಥ ಸೇವೆಯಿಂದ ಭಗವಂತನನ್ನು ಆರಾಧಿಸಿ ಅವನನ್ನು ಹಾಡಿ ಹೊಗಳುವ, ಅವನನ್ನು ಒಲಿಸಿಕೊಳ್ಳುವ ಶಾಸ್ತ್ರಗಳನ್ನು ತಮ್ಮ ತತ್ವ ಸಿದ್ಧಾಂತಗಳಲ್ಲಿ ಹಾಗೂ ಸಾಮಾಜಿಕ ನೆಲೆಗಟ್ಟುಗಳಲ್ಲಿ ಅಭಿವ್ಯಕ್ತಿಗೊಳಿಸಿ ಅವುಗಳ ಸಾಮರಸ್ಯವನ್ನು ತಿಳಿಸಿಕೊಟ್ಟ ಸರ್ವ ಶ್ರೇಯಸ್ಸು ಶ್ರೀರಾಮಾನುಜಾಚಾರ್ಯರಿಗೆ ಸಲ್ಲುತ್ತದೆ.

ತಮಿಳುನಾಡಿನ ಕಂಚಿಪಟ್ಟಣದ ಹತ್ತಿರ ಇರುವ ಶ್ರೀಪೆರಂಬೂರಿನ ಶ್ರೀ ಅಸುರಿ ಕೇಶವ ಸೋಮಯಾಜಿ ದೀಕ್ಷಿತ ಹಾಗೂ ಶ್ರೀಮತಿ ಕಾಂತಿಮತಿ ಎಂಬ ಪುಣ್ಯದಂಪತಿಗಳ ಪುಣ್ಯ ಗರ್ಭದಲ್ಲಿ 1017ರ ವೈಶಾಖ ಶುದ್ಧ ಪಂಚಮಿಯಂದು ಆರ್ದ್ರ ನಕ್ಷತ್ರದಲ್ಲಿ ಶ್ರೀರಾಮಾನುಜರ ಜನ್ಮವಾಗುತ್ತದೆ. ಕಾಲ ಕಾಲಕ್ಕೆ ಅನುಗುಣವಾಗಿ ಚೌಲ, ಉಪನಯನ, ವೇದಾಭ್ಯಾಸಗಳು ಆರಂಭವಾಗಿ, ಅವರ 16ನೇ ವಯಸ್ಸಿಗೆ ವಿವಾಹವಾಗುತ್ತದೆ. ಅದೇ ಸಮಯದಲ್ಲಿ ಅವರಿಗೆ ಪಿತೃವಿಯೋಗವಾಗುತ್ತದೆ. ಅವರ ಕರ್ಮಾದಿಗಳನ್ನೆಲ್ಲಾ ಮುಗಿಸಿ ತಮ್ಮ ಮುಂದಿನ ಅಧ್ಯಯನಕ್ಕಾಗಿ ಸೂಕ್ತ ಗುರುಗಳನ್ನು ಅರಿಸುತ್ತಿದ್ದಾಗ, ಕಾಂಚಿಪುರದಲ್ಲಿರುವ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುತ್ತಿದ್ದ ಶ್ರೀಯಾದವ ಪ್ರಕಾಶ ರೆಂಬ ಪ್ರಸಿದ್ಧ ವಿದ್ವಾಂಸರ ಬಳಿ ಶಿಷ್ಯತ್ವವನ್ನು ಸ್ವೀಕರಿಸಿ, ಅನೇಕ ಸದ್ಗುಣಗಳಲ್ಲಿ ವಿನೀತರಾಗಿ, ಭಗವಂತನ ಪರಮಭಕ್ತನಾಗಿ, ತನ್ನ ಸಮಾಜದ ಜನಗಳಲ್ಲಿ ಅಂತಃಕರಣವುಳ್ಳವರಾಗಿ ಪರಮ ಸತ್ಯದ ಸ್ಪಷ್ಟ ದಾರ್ಶನಿಕರಾಗಿ ಅದುವರೆವಿಗೂ ರಾಮಾನುಜರಾಗಿದ್ದವರು ಅಲ್ಲಿಂದ ಮುಂದೆ ಆಚಾರ್ಯ, ರಾಮಾನುಜಾಚಾರ್ಯರಾಗಿ ಅನಾವರಣಗೊಳ್ಳುತ್ತಾರೆ. ಇದೇ ದಿನಗಳಲ್ಲಿ ರಾಮಾನುಜರು ತಮ್ಮ ಗುರುಗಳ ಅದ್ವೈತದ ನಿಲುವಿನ ವಿರುದ್ಧ ನಿಂತು, ಪರಿಪೂರ್ಣ ಅದ್ವೈತ ವೇದಾಂತ ಅಂದರೆ ವಿಶಿಷ್ಟಾದ್ವೈತವನ್ನು ಬೋಧಿಸತೊಡಗಿದರು. ಶ್ರೀಮನ್ನಾರಾಯಣನೇ ವಿಶಿಷ್ಟಾದ್ವೈತದ ಪ್ರಕಾರ ಪರಮಾತ್ಮ ಎಂದರೆ ಶ್ರೀಮನ್ನಾರಾಯಣ.



ಕಾಂಚಿಪುರದಲ್ಲಿ ಶ್ರೀಯಾದವ ಪ್ರಕಾಶರೊಂದಿಗಿನ ವೈಮನಸ್ಸಿನಿಂದ ಮತ್ತೆ ಶ್ರೀರಾಮಾನುಜಾಚಾರ್ಯರು ಗುರುವನ್ನು ಅರಸುತ್ತಾ ಶ್ರೀರಂಗಂ ತಲುಪಿ ಅಲ್ಲಿಂದ ಕಾಲ್ನಡಿಗೆಯ ಮೂಲಕ **'ತಿರುಕೋಶ್ಟಿಯೂರು'** ಎಂಬುಲ್ಲಿದ್ದ ಶ್ರೀನಂಬಿಯವರಲ್ಲಿ ಶಿಷ್ಯನನ್ನಾಗಿ ಸ್ವೀಕರಿಸಿ, ತಮಗೆ ಮಂತ್ರ ಸಿದ್ಧಾಂತವನ್ನು ಬೋಧಿಸುವಂತೆ ವಿನಂತಿಸಿಕೊಳ್ಳುತ್ತಾರೆ. ಮೊದಲು ಅವರು ಮಂತ್ರ ಉಪದೇಶಿಸುವುದಿಲ್ಲ; ಕೊನೆಯಲ್ಲಿ ಭಕ್ತನ ಕೋರಿಕೆಯನ್ನು ಮನ್ನಿಸಿ ; **'ಓಂ ನಮೋ ನಾರಾಯಣ'** ಎಂಬ 'ಅಷ್ಟಾಕ್ಷರಿ' ಮಂತ್ರವನ್ನು ಬೋಧಿಸುತ್ತಾರೆ. ಈ ಮಂತ್ರವನ್ನು ಲಕ್ಷಾಂತರ ಜನರಿಗೆ ಉಪದೇಶಿಸಿ, ವಿಶಿಷ್ಟಾದ್ವೈತ ಧರ್ಮವನ್ನು ಪ್ರಚಾರಮಾಡುತ್ತ ಹಲವಾರು ಪುಣ್ಯಕ್ಷೇತ್ರಗಳಲ್ಲಿ ಗೋವಿಂದ ನಾಮವನ್ನು ಭಕ್ತಮಾನಸಕ್ಕೆ ನೀಡಿ ತಮ್ಮ ಜೀವಿತದ ಉತ್ತರಾರ್ಧದ ಐವತ್ತು ವರ್ಷಗಳ ಕಾಲ 'ಶ್ರೀರಂಗಂ' ದಲ್ಲಿಯೇ ನೆಲೆಸಿ, ಅಲ್ಲಿ ನೂರಾರು ಕೃತಿರತ್ನಗಳನ್ನು ರಚಿಸಿ ತಮ್ಮ 120ನೇ ವಯಸ್ಸಿನಲ್ಲಿ ಅಂದರೆ 1137ನೇ ಶನಿವಾರ ಮಧ್ಯಾಹ್ನ ಮಾಘಶುದ್ಧ ಸಪ್ತಮಿಯಂದು ಇಚ್ಛಾಮರಣಿಯಾಗಿ ತಮ್ಮ ಶಿಷ್ಯಂದಿರಿಗೆ ಮುಂಚಿತವಾಗಿಯೇ ತಿಳಿಸಿ ಭಗವಂತನ ಪಾದಾರವಿಂದ ಸೇರಿದರು.

120 ವರ್ಷಗಳ ಸಾಧನೆಯ ದೀರ್ಘಾಯುಷ್ಯವನ್ನು ಪೂರೈಸಿ ಶ್ರೀವೈಕುಂಠವನ್ನು ತಲುಪಿ ಶ್ರೀಮನ್ನಾರಾಯಣನನ್ನು ಸೇರಿ ಸಾವಿರ ವರ್ಷಗಳಾದರೂ ಇಂದಿಗೂ ಸಹಾ ಅವರ ಭೌತಿಕ ದೇಹ ಯಾವುದೇ ರಾಸಾಯನಿಕ ಕ್ರಿಯೆಯೇ ನಡೆಯದೇ ಇನ್ನೂ ದರ್ಶನಕ್ಕೆ ಯೋಗ್ಯವಾಗಿದೆ.

ತಮ್ಮ ತತ್ವಚಿಂತನೆ, ನಡೆ-ನುಡಿಗಳ ಮೂಲಕ ಶ್ರೇಷ್ಠ ಸಂತರಾಗಿ, ಮಹಾನ್ ದಾರ್ಶನಿಕರಾಗಿ ಶ್ರೀರಂಗಂ, ಕಾಂಚೀಪುರಂ, ತಿರುಮಲ ಹಾಗೂ ಮೇಲುಕೋಟೆಗಳಲ್ಲಿ ನಡೆಯುವ ಪೂಜಾ ವಿಧಾನಗಳನ್ನು ಹಾಕಿಕೊಟ್ಟ ಮಹಾನ್ ದಾರ್ಶನಿಕರೇ ಶ್ರೀರಾಮಾನುಜಾ ಚಾರ್ಯರು. ಇಂತಹ ಮಹಾತಪಸ್ವಿಗಳ ಜನ್ಮದಿನದಂದು ಅವರ ಕಾರ್ಯಗಳನ್ನು ನೆನೆದು ಸ್ಮರಿಸೋಣ.

# ಪ್ರಗತಿ ಪಥದಲ್ಲಿ ಮಹಾಸಭೆ ರಥ

ಕಾರ್ತಿಕ್ ಬಾಬಟ್
ಜಂಟಿ ಕಾರ್ಯದರ್ಶಿ

**ಸಮರ್ಥ ನಾಯಕತ್ವದ ಆಯ್ಕೆ**

ಅಂದು ಡಿಸೆಂಬರ್ ಹತ್ತೊಂಬತ್ತು 2021. ಇನ್ನೇನು ಸಂಜೆ ಏಳು ಗಂಟೆ. ಮಹಾಸಭಾ ಚುನಾವಣೆಯ ಮತಗಳ ಎಣಿಕೆ ಕಾರ್ಯಕ್ರಮ ಪ್ರಾರಂಭವಾಗುವದರಲ್ಲಿತ್ತು. ಎಲ್ಲರೂ ಫಲಿತಾಂಶಕ್ಕಾಗಿ ಕಾಯುತ್ತ ಕುಳಿತಿದ್ದರು. ಬಹುಶಃ ಅಂದು ನಾನು ಜನನಾಯಕ ಒಬ್ಬನಿಗೆ ಯಾವ ಅಪೇಕ್ಷೆಯಿಲ್ಲದೆ ಸ್ವಪ್ರೇರಿತವಾಗಿ ಬಂದ ಬೆಂಬಲಿಗರ ಬಣ ಹಾಗೂ ಅವರ ಮನಸ್ಥಿತಿ ಹೇಗಿರುತ್ತದೆ ಎಂದು ಹತ್ತಿರದಿಂದ ಕಂಡು ಚಕಿತನಾಗಿದ್ದೆ. ಅಂತೂ ಇಂತೂ ಚುನಾವಣೆಯ ಎಣಿಕೆ ಕಾರ್ಯ ರಾತ್ರಿ ಹತ್ತು ಗಂಟೆ ಸುಮಾರಿಗೆ ಮುಗಿದು ಅಶೋಕ ಹಾರನಹಳ್ಳಿಯವರು ವಿಜಯಶಾಲಿ ಯಾಗಿದ್ದಾರೆಂದು ಘೋಷಿಸಿದಾಗ ಅಲ್ಲಿ ನೆರೆದಿದ್ದ ಜನಸ್ತೋಮದ ಹರುಷಕ್ಕೆ ಪಾರವಿಲ್ಲ. ಕರ್ನಾಟಕದ ನಾನಾ ಭಾಗದಿಂದ ಬಂದಂತಹ ಬೆಂಬಲಿಗರೆಲ್ಲರೂ ಹೇಳಿದ್ದು ಒಂದೇ ಮಾತು "ಇನ್ನೇನಿದ್ದರೂ ಡೆವಲೆಂಪ್‌ಮೆಂಟ್". ಹಾರನಹಳ್ಳಿಯವರು ಮಹಾಸಭೆಯನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲಿದ್ದಾರೆ. ಇದರಲ್ಲಿ ಯಾವ ಅನುಮಾನವೇ ಇಲ್ಲ ಎಂಬುದು, ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದ ನನಗೆ ಒಂದು ಕ್ಷಣ ಒಂದು ಬಗೆಯ ಆತಂಕವಾಗುತ್ತಿತ್ತು. ಕಾರಣವಿಷ್ಟೇ ಇಟ್ಟ ನಂಬಿಕೆ ಮತ್ತು ನಿರೀಕ್ಷೆ ಹುಸಿಯಾಗಬಾರದೆಂದು.

**ಮಹಾಸಭೆಯ ಆಡಳಿತಾತ್ಮಕ ಹಾಗೂ ಸಂಘಟನೆಯ ಕಾರ್ಯಕ್ರಮಗಳ ಡಿಜಿಟಲೀಕರಣ :**

ಎಣಿಕೆಯಂತೆ ನೂತನವಾಗಿ ಅಯ್ಕೆಯಾದ ಅಧ್ಯಕ್ಷರು ಯಾವುದೇ ಪ್ರತಿಷ್ಠಿತ ಕಂಪೆನಿಯ ಸಿ.ಇ.ಓ.ಗೆ ಕಡಿಮೆ ಇಲ್ಲದಂತೆ ಮಹಾಸಭೆಯ ಉನ್ನತಿಗಾಗಿ ಗೆದ್ದ ಮರುದಿನದಿಂದಲೇ ಉನ್ನತ ವಾದ ತಂಡವನ್ನು ಕಟ್ಟತೊಡಗಿದ್ದರು. ಎಲ್ಲರ ಎಣಿಕೆಯನ್ನು ಬುಡಮೇಲು ಮಾಡಿ ಪ್ರಪ್ರಥಮವಾಗಿ ಮಹಾಸಭೆಗೆ ಕರೆತಂದಿದ್ದು ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪೆನಿಗಳಲ್ಲಿ ಕೆಲಸ ಮಾಡುವ ಯುವಕರನ್ನು. ಆಯಾಕಟ್ಟಿನ ಜಾಗದಲ್ಲಿ ಯಾವ ಹುದ್ದೆ, ಪ್ರಚಾರಗಳ ಅಪೇಕ್ಷೆ ಇಲ್ಲದ "ಡಿಜಟಲ್ ಟ್ರಾನ್ಸ್‌ಫರ್ಮೇಶನ್" ತಂಡವನ್ನು ಕಟ್ಟಿದರು. ಐ.ಟಿ ತಂಡ ಹಗಲಿರಳು ಕೆಲಸ ಮಾಡಿ ಕೇವಲ ಇಪ್ಪತ್ತು ದಿನಗಳ ಅಂತರದಲ್ಲಿ ನೆನೆಗುದಿಗೆ ಬಿದ್ದಿದ್ದ ಮಹಾಸಭೆಯ ವೆಬ್‌ಸೈಟ್ ನವೀಕರಣಗೊಂಡು ಜನವರಿ 26ರಂದು ಲೋಕಾರ್ಪಣೆಗೊಂಡಿತು. ಅಷ್ಟೇ ಅಲ್ಲ, ಸದಸ್ಯತ್ವವನ್ನು ಆನ್‌ಲೈನ್ ಮೂಲಕ, ಸುಲಭವಾಗಿ ಪಡೆಯುವಂತೆ ಮಹಾಸಭೆಗೆ ಡಿಟಿಜಿಲ್ ಸ್ಪರ್ಶ ಕೊಡುವತ್ತ ಮುನ್ನುಡಿ ಬರೆದರು. ಆನ್‌ಲೈನ್‌ನಲ್ಲಿ ಸದಸ್ಯತ್ವ ನೋಂದಾವಣೆಗೆ ಚಾಲನೆ, ಮಹಾಸಭೆಯ ಕಾರ್ಯಕ್ರಮಗಳು ಹಾಗೂ ಸಮಾಜಿಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳ ಬಗ್ಗೆ ಜಾಲ ತಾಣದಲ್ಲಿ ತಕ್ಷಣ ಮಾಹಿತಿ ವದಗಿಸುವುದು. ದೇಣಿಗೆ ಸಂಗ್ರಹವೇ ವಿದ್ಯಾರ್ಥಿ ವೇತನ ಮುಂತಾದ ಕಲ್ಯಾಣ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು ವುುಂತಾದವುಗಳು ಜಾಲ ತಾಣದ ಮುಖಾಂತರ ನಡೆಯುತ್ತಿರುವುದನ್ನು ಎಲ್ಲರ ಗಮನಕ್ಕೆ ಬಂದಿರುತ್ತದೆ.

**ವಿವಿಧ ಯೋಜನೆ – ಹಲವು ಕಾರ್ಯತಂಡಗಳು :**

ಇದೆಲ್ಲಕ್ಕೂ ಮಿಗಿಲಾದ ಸವಾಲಿದಿದ್ದದ್ದು ಕರ್ನಾಟಕದಾದ್ಯಂತ ನೆಲೆಸಿರುವ ಸಮುದಾಯದ ಪ್ರಭಾವಿ ಮುಖಂಡರನ್ನು ಒಳಗೊಂಡ ತಂಡ ಕಟ್ಟುವುದು. ಈ ಹಿಂದೆ ಕೆಲವು ಕಾರಣಗಳಿಂದಾಗಿ ಬೆಂಗಳೂರಿಗರಿಗೆ ಹೆಚ್ಚು ಪ್ರಾತಿನಿಧ್ಯ ಕೊಡುತ್ತಾರೆಂಬ ಆಪಾದನೆ ಆದರೆ ಆಗ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮಹಾಸಭಾ ಅಷ್ಟಾಗಿ ಬೇರೂರಿರಲಿಲ್ಲ. ಆದರೆ ಈ ಬಾರಿಯ ಚುನಾವಣೆಯ ನಂತರ ಮಹಾಸಭೆಗೊಂದು ತಾರಾ ವರ್ಚಸ್ಸು ಬಂದಿದ್ದು ಸುಳ್ಳಲ್ಲ.

ಆ ನಿಟ್ಟಿನಲ್ಲಿ ಆಸಕ್ತಿಗಳು, ನಿರೀಕ್ಷೆಗಳು ಕರ್ನಾಟಕದ ನಾನಾ ವಲಯಗಳಿಂದ ಬಂದಿದ್ದು ಆಶ್ಚರ್ಯವೇನಲ್ಲ. ಮಹಾಸಭೆಗೆ ಬೆಂಗಳೂರಿನ ಮಹನೀಯರನ್ನೆಲ್ಲಾ ಕರೆದು ಮುಂದಿರುವ ಸವಾಲುಗಳು ಮತ್ತು ಕರ್ನಾಟಕದ ಉದ್ದಗಲಕ್ಕೂ ನೆಲೆಸಿರುವ ಬ್ರಾಹ್ಮಣರ ಸಂಘಟನೆಯ ಅಗತ್ಯತೆಯ ಬಗ್ಗೆ ವಿವರಿಸಿದಾಗ, ಹಲವಾರು ಮುಖಂಡರು ಎಲ್ಲ ವಲಯಗಳಿಗೆ ಪ್ರಾತಿನಿಧ್ಯ ಕೊಡಲು ಒಪ್ಪಿಕೊಂಡರು. ಅದರಂತೆ, ಯಾವುದೇ ಪದವಿಗಳ ಅಪೇಕ್ಷೆ ಇಲ್ಲದೆ ಅಧ್ಯಕ್ಷರೊಂದಿಗೆ ಸದಾ ಮಹಾಸಭೆಯ ಒಳಿತಿಗೆ ಶ್ರಮಿಸುವ ಭರವಸೆಯನ್ನೂ ಕೊಟ್ಟರು. ಹೀಗೆ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಮಹಾಸಭೆಯ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಹನ್ನೊಂದು ಜನ ಉಪಾಧ್ಯಕ್ಷರಲ್ಲಿ ಎಂಟು ಜನ ಉಪಾಧ್ಯಕ್ಷರು ಬೆಂಗಳೂರಿನಿಂದಾಚೆಯಿಂದ ನಾಮಾಂಕಿತರಾದರು. ಅದೇ ರೀತಿ ಗುಲ್ಬರ್ಗಾವಿಭಾಗದಿಂದಲೂ ಒಬ್ಬ ಸಹಕಾರ್ಯದರ್ಶಿ ಯನ್ನು ನೇಮಿಸಿದರು. ನಂತರ ಬೆಂಗಳೂರು ನಗರದ ಆಗಾಧತೆಯನ್ನು ಮನಗೊಂಡು ಬೆಂಗಳೂರು ಉತ್ತರ ವಲಯಕ್ಕೆ ಚಾಲನೆ ನೀಡಿ ಸಂಚಾಲಕರನ್ನು ನೇಮಿಸಿದರು. ಅತೀ ಶೀಘ್ರದಲ್ಲಿ ಇನ್ನಷ್ಟು ವಲಯಗಳು ಕಾರ್ಯನಿರ್ವಹಿಸಲಿವೆ. ತದನಂತರ ಮಹಿಳಾ ಸಂಘಟನೆ ಹಾಗೂ ಯುವ ಸಂಘಟನೆಯ ಅಗತ್ಯವನ್ನು ಮನಗೊಂಡು, ರಾಜ್ಯ ಮಹಿಳಾ ವಿಭಾಗ ಹಾಗೂ ರಾಜ್ಯ ಯುವ ಘಟಕಕ್ಕೆ ಚಾಲನೆ ನೀಡಿ ಸಂಚಾಲಕರನ್ನು ನೇಮಿಸಿದರು.

**ವಿವಿಧ ಸಮಿತಿಗಳು :**

ವಿಪ್ರಬಾಂಧವರ ದಿನನಿತ್ಯದ ನಾನಾ ವಿಭಾಗಗಳ ಸಮಸ್ಯೆಯನ್ನು ಆಲಿಸಲು ಮತ್ತು ಆಯ ವಿಭಾಗಗಳಲ್ಲಿ ಸಹಾಯ ಬಯಸಿ ಬರುವ ಬಾಂಧವರಿಗೆ ಸಹಾಯಹಸ್ತ ಚಾಚಲು ಪರಿಣಿತರ ತಂಡವನ್ನು ಕಟ್ಟಿದರು. ಅವುಗಳಲ್ಲಿ ಪ್ರಮುಖವಾಗಿ :–

1. ಆರೋಗ್ಯ ಮತ್ತು ವೈದ್ಯಕೀಯ ಸಲಹಾ ಸಮಿತಿ
2. ಕಾನೂನು ಸಲಹಾ ಸಮಿತಿ
3. ಆಪ್ತ ಸಲಹಾ / ಸಮಾಧಾನ ಸಂಕಲ್ಪ ಸಮಿತಿ
4. ವಿದ್ಯಾವಾಸಿನಿ ವಸತಿ ನಿಲಯ ಸಮಿತಿ
5. ವಿದ್ಯಾನಿಧಿ ಸಮಿತಿ
6. ಸದಸ್ಯತ್ವ ಪರಿಷ್ಕರಣೆ ಸಮಿತಿ
7. ವಧು–ವರಾನ್ವೇಷಣಾ ಸಮಿತಿ
8. ಸಾಂಸ್ಕೃತಿಕ ಚಟುವಟಿಕೆ ಸಮಿತಿ
9. ಕಟ್ಟಡ ಸಮಿತಿ
10. ಡಿಜಿಟಲ್ ಟ್ರಾನ್ಸ್‌ಫರ್ಮೇಷನ್ ಸಮಿತಿ

ಹೀಗೆ ಹತ್ತು ಹಲವು ಸಲಹಾ ಸಮಿತಿಗಳನ್ನು ರಚಿಸಿ ಅವುಗಳ ಹೆಲ್ಪ್‌ಲೈನ್ ಅನ್ನು ರಚಿಸಿ, ಸದಸ್ಯರು ಆಯಾ ಸಮಿತಿಗಳನ್ನು ಸಂಪರ್ಕಿಸಿ, ಮಹಾಸಭೆಯ ಸೇವೆಯನ್ನು ಪಡೆಯಲು ಅನುವು ಮಾಡಿಕೊಟ್ಟರು.

**ಸಹಾಯಯಾಚಿ ಬಂದವರಿಗೆ ನೆರವು :**

ಅದರಲ್ಲಿ ವೈದ್ಯಕೀಯ ಮತ್ತು ಸಲಹಾ ಸಮಿತಿಯ ಅಡಿಯಲ್ಲಿ ಈಗಾಗಲೇ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿಶೇಷವಾಗಿ ಇಂಜನಿಯರಿಂಗ್ ಓದುತ್ತಿದ್ದ ತರುಣನಿಗೆ ಕಣ್ಣಿನ ತೊಂದರೆ ನಿವಾರಿಸುವಲ್ಲಿ ಮತ್ತು ಮತ್ತೊಬ್ಬ ಯುವಕನಿಗೆ ಕೃತಕ ಕಾಲಿನ ಅಗತ್ಯತೆಯನ್ನು ಪೂರೈಸುವಲ್ಲಿ ವೈದ್ಯಕೀಯ ಸಲಹಾ ಸಮಿತಿ ಅತ್ಯಂತ ಶ್ಲಾಘನೀಯ ಕಾರ್ಯವನ್ನು ಮಾಡಿದೆ.

ಅದಷ್ಟೇ ಅಲ್ಲ, ಪ್ರಪ್ರಥಮ ಬಾರಿಗೆ ಪ್ರತಿಷ್ಠಿತ ಆಸ್ಪತ್ರೆಗಳೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ರಿಯಾಯಿತಿ ದರದಲ್ಲಿ ಮಹಾಸಭೆಯು ಸದಸ್ಯರಿಗೆ ವೈದ್ಯಕೀಯ ಸೌಲಭ್ಯವನ್ನು ಕೊಡುವ ಮಹತ್ತರವಾದ ಕಾರ್ಯಕ್ಕೆ ಚಾಲನೆ ನೀಡಿದೆ.

ಆಪ್ತ ಸಲಹಾ ಸಮಿತಿ ಮತ್ತು ಕಾನೂನು ಸಲಹ ಸಮಿತಿಗಳು ಕೂಡ ಅತ್ಯಂತ ಉಪಯುಕ್ತವಾದ ಸೇವೆಯನ್ನು ಉಚಿತವಾಗಿ ಒದಗಿಸುತ್ತಿದೆ ಎಂದು ಈ ಸಂದರ್ಭದಲ್ಲಿ ಉಲ್ಲೇಖಿಸುವುದು ಅತ್ಯಗತ್ಯ.

ವಿದ್ಯಾನಿಧಿ ಅಡಿಯಲ್ಲಿ ಬಂದ ಹಲವು ಅರ್ಜಿಗಳನ್ನು ಪರಿಶೀಲಿಸಿ ಆರ್ಥಿಕ ಹಿನ್ನೆಲೆಯನ್ನು ಮಾನದಂಡವಾಗಿರಿಸಿ ಈಗಾಗಲೇ ಮಹಾಸಭೆ ವಿದ್ಯಾರ್ಜನೆಗೆ ಸಹಾಯ ಬಯಸಿ ಬರುವವರಿಗಾಗಿ ಸಹಾಯ ಹಸ್ತವನ್ನು ಚಾಚಿದೆ. ಸಮುದಾಯದ ಯಾವುದೇ ಸಂತ್ರಸ್ಥ ವ್ಯಕ್ತಿ ಸಹಾಯ ಯಾಚಿಸಿ ಮಹಾಸಭೆಗೆ ಬಂದವರಿಗೆ ಒಂದಲ್ಲ ಒಂದು ರೀತಿಯಲ್ಲಿ ಸಹಾಯಹಸ್ಥವನ್ನು ಹೊಸ ಆಡಳಿತ ಮಂಡಳಿಯಲ್ಲಿ ನೀಡುತ್ತ ಬಂದಿದೆ. ಇದಕ್ಕೆ ಒಂದು ಉದಾಹರಣೆಯಾಗಿ ಒಂದು ಘಟನೆಯನ್ನು ಉಲ್ಲೇಖಿಸುವುದಾದರೆ ಏಪ್ರಿಲ್ 20ರಂದು ಮದುವೆಯ ಮುಹೂರ್ತವನ್ನು ನಿಶ್ಚಿಯಿಸಿ ಕೊಂಡು ಒಬ್ಬ ಬಡ ಮಹಿಳೆಯೊಬ್ಬರು ಏಪ್ರಿಲ್ 13ರಂದು ಮಾಂಗಲ್ಯ ಹಾಗೂ ವಧುವಿನ ಸೀರೆಗಾಗಿ ಅಧ್ಯಕ್ಷರಲ್ಲಿ ಬಂದು ವಿನಂತಿಸಿದಾಗ ಆ ಕ್ಷಣದಲ್ಲೇ ಸ್ಪಂದಿಸಿದ ಅಧ್ಯಕ್ಷರು ಮೂರು ದಿನಗಳಲ್ಲಿ ಸುಮಾರು 25,000 ರೂಗಳ ಮಾಂಗಲ್ಯ ಹಾಗೂ ಸೀರೆಗೆ ವ್ಯವಸ್ಥೆ ಮಾಡಿದರು. ಹೀಗೆ ಹಲವು ಸಲಹಾ ಸಮಿತಿಯನ್ನು ರಚಿಸಿ ಖುದ್ದು ಅಧ್ಯಕ್ಷರೇ ಪ್ರತಿ ಸಮಿತಿಯ ಮೇಲ್ವಿಚಾರಣೆಯನ್ನು ನಡೆಸುತ್ತಿದ್ದಾರೆ.

**ಪದಾಧಿಕಾರಿಗಳೊಡನೆ ನಿರಂತರ ಸಂಪರ್ಕ :**

ಇನ್ನೊಂದು ಕೌತುಕವೆಂದರೆ "ಟಾಸ್ಕ್ ಮಾಸ್ಟರ್" ನಂತೆ ಪ್ರತಿ ದಿನ ಬೆಳ್ಳಂಬೆಳಿಗ್ಗೆ ಸಹಕಾರ್ಯದರ್ಶಿಗಳಿಗೆ, ಕಾರ್ಯದರ್ಶಿಗಳಿಗೆ, ಸಂಚಾಲಕರಿಗೆ ಕರೆ ಮಾಡಿ ನಿಮ್ಮ ಆ್ಯಕ್ಷನ್ ಪ್ಲಾನ್ ಏನು ಎಂದು ಕೇಳುವುದು ಮತ್ತು ಆಯಾ ಸಂದರ್ಭಕ್ಕೆ ಅನುಗುಣವಾಗಿ ಸಲಹೆಯನ್ನು ನಿರಂತರವಾಗಿ ನೀಡುತ್ತಾ ಪ್ರತಿಯೊಬ್ಬರನ್ನು ಹುರಿದುಂಬಿಸುತ್ತಿರುತ್ತಾರೆ. ಆದಷ್ಟೋ ಮಹಾಸಭೆಯ ಸ್ನೇಹಿತರು ಅಧ್ಯಕ್ಷರು ಬೆಳ್ಳಂಬೆಳ್ಳಗೆ ದೂರವಾಣಿ ಮಾಡುತ್ತಾರೆ ಎಂಬ ಕಾರಣಕ್ಕಾದರೂ ದಿನಂಪ್ರತಿ ಬೇಗ ಏಳುವ ಹವ್ಯಾಸವನ್ನು ಮೈಗೂಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆಂದರೆ ಅಧ್ಯಕ್ಷರ ಕಾರ್ಯದಕ್ಷತೆ ಮತ್ತು ಹಿಡಿದ ಕೆಲಸ ಸಾಧಿಸುವ ಬಗೆಯನ್ನು ನೀವೇ ಊಹಿಸಿ.

**ಬಿಡುವಿಲ್ಲದ ಕಾರ್ಯಕ್ರಮಗಳು ಹಾಗೂ ರಾಜ್ಯಾದ್ಯಂತ ಪ್ರವಾಸ :**

ಇದಿಷ್ಟು ಆಡಳಿತಾತ್ಮಕ ಕಾರ್ಯವೈಖರಿಯಾದರೆ, ಇನ್ನು ಸಂಘಟನೆಯ ವಿಷಯ ಬಂದಾಗ ಒಂದೇ ದಿನದಲ್ಲಿ ಕರ್ನಾಟಕದ ಉತ್ತರದ ತುತ್ತ ತುದಿಯಿಂದ ದಕ್ಷಿಣದ ತುತ್ತ ತುದಿಯವರೆಗೆ ಸಂಚರಿಸಿದ ನಿದರ್ಶನಗಳಿವೆ. ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಯುವ ಘಟಕವೇ ನಾಚುವಂತೆ ಸಂಚರಿಸಿದ್ದಾರೆ.

ಸುಮ್ಮನೆ ಅವರ ಕಾರ್ಯಕ್ರಮಗಳ ಪಟ್ಟಿಯ ವಿವರಣೆಗಳನ್ನು ಗಮನಿಸಿ, ನೋಡಿ ಚಕಿತಗೊಳ್ಳದಿದ್ದರೆ ಹೇಳಿ.

**1.24.12.2021ರಂದು ಗಾಯತ್ರಿ ಭವನದಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಅಭಿನಂದನಾ ಸಂಜೆ ಹಾಗೂ ಸಭೆಯ ನಂತರ ಮುಖಂಡರೊಡನೆ ಮಾತುಕತೆ.**

**2. 30–12–21 ರಂದು**

ಅ) ಶೃಂಗೇರಿಗೆ ಭೇಟಿ ಕೊಟ್ಟು ತಾಯಿ ಶಾರದಾಂಬೆಯ ದರ್ಶನ ಪಡೆದು ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮೀಜಿ ಅವರಿಂದ ಆಶೀರ್ವಚನ ಹಾಗೂ ಮಹಾಸಭೆಯ ಸಂಘಟನೆಯ ಬಗ್ಗೆ ಸಲಹೆಗಳನ್ನು ಪಡೆದರು.

ಆ) ಅಂದೇ ಶೃಂಗೇರಿ ಹಾಗೂ ತಾಲ್ಲೂಕು ಬ್ರಾಹ್ಮಣ ಮಹಾಸಭಾ ಕೊಪ್ಪ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪದಾಧಿಕಾರಿಗಳೊಂದಿಗೆ ಸಂಘಟನೆ ಬಗ್ಗೆ ಚರ್ಚೆ.

**3. 31.12.21ರಂದು** ತಾಯಿ ಶಾರದಾಂಬೆಯ ದರ್ಶನ ಹಾಗೂ ಜಗದ್ಗುರು ಶ್ರೀ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮೀಜಿಯವರ ಆಶೀರ್ವಾದ ಪಡೆದು ಮಹಾಸಭೆಯ

ಆಗುಹೋಗುಗಳ ಹಾಗೂ ಒಳಿತಿಗಾಗಿ ಸಲಹೆ–ಸೂಚನೆ ಸ್ವೀಕಾರ.

ಅದೇ ದಿನದಂದು ಚಿಕ್ಕಮಗಳೂರು ಬ್ರಾಹ್ಮಣ ಮಹಾಸಭೆ ಏರ್ಪಡಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಪದಾಧಿಕಾರಿಗಳೊಂದಿಗೆ ಸಂಘಟನೆ ಬಗ್ಗೆ ಚರ್ಚೆ.

**4. 01.01.22ರಂದು** ಮುಳುಬಾಗಿಲಿನ ಕುರುಡುಮಲೆಗೆ ಭೇಟಿ – ಶ್ರೀಪಾದಮಠಕ್ಕೆ ತೆರಳಿ ಯೋಗಾನರಸಿಂಹದೇವರು ಮತ್ತು ಶ್ರೀಪಾದರಾಜರ ದರ್ಶನ ಹಾಗೂ ಶ್ರೀ ಸುಜಯನಿಧಿತೀರ್ಥರ ಆಶೀರ್ವಾದ ಪಡೆದು ಮಹಾಸಭೆಗೆ ಸಲಹೆಗಳನ್ನು ಪಡೆದು ಹಲವು ಮುಖಂಡರ ಭೇಟಿ. ಕೋಲಾರದಲ್ಲಿ ಜಿಲ್ಲಾ ಬ್ರಾಹ್ಮಣ ಸಂಘದಿಂದ ಅಭಿನಂದನೆ ಸ್ವೀಕಾರ ಹಾಗೂ ಸಂಘಟನೆ ಬಗ್ಗೆ ಚರ್ಚೆ.

5. **02.01.22ರಂದು** ಮಂಡ್ಯ ಜಿಲ್ಲಾ ಬ್ರಾಹ್ಮಣ ಸಭಾ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಭಾಗಿ ಹಾಗೂ ಹಲವು ಮುಖಂಡರೊಡನೆ ಚರ್ಚೆ.

6. ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳರವರ ಆರಾಧನಾ ಮಹೋತ್ಸವದಲ್ಲಿ ಭಾಗಿ.

7. **06.01.22** – ಗಾಯತ್ರಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಹಾಸಭಾಧ್ಯಕ್ಷರಾಗಿ ಅಧಿಕಾರ ಸ್ವೀಕಾರ.

8. **14.01.22** – ಶ್ರೀ ರೆಸಿಡೆನ್ಸಿಗೆ ಭೇಟಿ, ಮಹಾಸಭೆಗೆ ದೇಣಿಗೆ ಸಂಗ್ರಹ

9. **26.01.22** – ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಹಾಗೂ ಮಹಾಸಭಾ ವೆಬ್‌ಸೈಟ್ ಲೋಕಾರ್ಪಣೆ.

10. **06.02.22** – ಮೈಸೂರಿನಲ್ಲಿ ಅಭಿನಂದನಾ ಸಮಾರಂಭ ಹಾಗೂ ಸಂಘಟನಾ ಸಭೆ

11. **07.02.22** – ಮಾಲೂರಿನ ಎ.ಕೆ.ಎಸ್. ವಿದ್ಯಾಮಾನ್ಯ ಲೋಕಮಾನ್ಯ ಫೌಂಡೇಷನ್ ಗುರುಕುಲಕ್ಕೆ ಭೇಟಿ ವಿದ್ಯಾರ್ಥಿಗಳೊಡನೆ ವಿಚಾರ ವಿನಿಮಯ

12. **10.02.22** – ಉನ್ನತ ಶಿಕ್ಷಣ ಇಲಾಖೆಯ ಸಚಿವರ ಭೇಟಿ

13. **11.02.22** – ವಿಪ್ರನುಡಿ ಮರುಚಾಲನೆ

14. **13.02.22** – ಅರಸೀಕೆರೆಯಲ್ಲಿ ಅಭಿನಂದನಾ ಸಮಾರಂಭ ಹಾಗೂ ಸಭೆ

15. **20.02.22** – ರಾಜ್ಯ ಮಹಿಳಾ ವಿಭಾಗ ಉದ್ಘಾಟನೆ

16. **22.02.22** – ಅಧ್ಯಕ್ಷರ ನೇತೃತ್ವದ ನಿಯೋಗ ಮಾನ್ಯ ಮುಖ್ಯಮಂತ್ರಿಗಳ ಭೇಟಿ

17. **24.02.22** – Free Super Medical Camp Inauguration Organised by United Hospital, Jayanagar

18. **27.02.22** – ಹರಿಹರಪುರದಲ್ಲಿನ ಕುಂಭಾಭಿಷೇಕದ ಬಗ್ಗೆ ಶ್ರೀ ಶ್ರೀಗಳ ಸಮ್ಮುಖದಲ್ಲಿ ಚರ್ಚೆ

19. **28.02.22** – ಚಿಕ್ಕಬಳ್ಳಾಪುರ ತಾಲ್ಲೂಕು ಬ್ರಾಹ್ಮಣ ಸಂಘ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರದಲ್ಲಿ ಭಾಗಿ ಹಾಗೂ ಸದಸ್ಯತ್ವ ಅಭಿಯಾನಕ್ಕೆ ಚಾಲನೆ.

20. **01.03.22** – ಮಹಾಶಿವರಾತ್ರಿಯಂದು ಸದ್ಗುರು ವೇದಿಕೆ, ಪ್ರಮೋದ ಲೇಔಟ್, ಬೆಂಗಳೂರಿನಲ್ಲಿ ನಾಲ್ಕು ಯಾಗಗಳು, ಈಶ್ವಾರಾಧನೆಯಲ್ಲಿ ಭಾಗಿ.

21. **04.03.22** – ನೂತನ ಲಿಫ್ಟ್ ಉದ್ಘಾಟನಾ ಸಮಾರಂಭ

22. **06.03.22** – ಬೆಂಗಳೂರು ಉತ್ತರ ವಲಯದ ಪ್ರಾರಂಭೋತ್ಸವ ಪಿ.ಇ.ಎಸ್. ಕಾಲೇಜಿನಲ್ಲಿ ಹೆಲ್ತ್ ಕ್ಯಾಂಪ್ ಉದ್ಘಾಟನೆ

23. **08.03.22** – ಕಣ್ಣಿನ ಪರೀಕ್ಷೆ ಶಿಬಿರ ಮಹಿಳಾ ದಿನದಂದು ಶೇಖರ್ ಐ ಆಸ್ಪತ್ರೆ ಸಹಯೋಗದೊಡನೆ

24. **09.03.22** – ರಾಯಚೂರು ಭೇಟಿ

ಅ) ಬ್ರಾಹ್ಮಣ ಮುಖಂಡರಾದ ಶ್ರೀ ನರಸಿಂಗರಾವ್ ದೇಶಪಾಂಡೆ ಅವರ ನಿವಾಸಕ್ಕೆ ಭೇಟಿ ಹಾಗೂ ಶ್ರೀ ಸತ್ಯಾತ್ಮತೀರ್ಥ ಶ್ರೀಗಳಿಂದ ಆಶೀರ್ವಾದ

ಆ) ವೀರಾಂಜನೇಯ ಗುಡಿಯಲ್ಲಿ ಉತ್ತರ ಕರ್ನಾಟಕ ಜಿಲ್ಲಾ ಕಾರ್ಯಕಾರಿಣಿ ಸಭೆ

ಇ) ಸಂಜೆ ಜೇಡು ವೀರಾಂಜನೇಯ ಗುಡಿಯಲ್ಲಿ ಜನ ಸಂಪರ್ಕ ಸಭೆ

**25. 13.03.22** ಅ) ಮಹಿಳಾ ಘಟಕ ನೂತನವಾಗಿ ಆಯೋಜಿಸಿದ್ದ ಬೃಹತ್ ಬೈಕ್ ರ್‍ಯಾಲಿಗೆ ಚಾಲನೆ ಚಾಮರಾಜ ಪೇಟೆ ಶ್ರೀ ಶಂಕರ ಮಠದಲ್ಲಿ.

ಆ) ಶ್ರೀ ಶಂಕರ ಸೇವಾ ಸಮಿತಿ ಜಾಲಹಳ್ಳಿಗೆ ಭೇಟಿ

ಇ) ಶ್ರೀ ಸಹಜಾನಂದ ಧ್ಯಾನಗಂಗಾ ಆಶ್ರಮ, ದೊಡ್ಡಮುದ ವಾಡಿಗೆ ಭೇಟಿ

ಈ) ಮಹಿಳಾ ಘಟಕದ ವಿಪ್ರ ಮಹಿಳೆಯರಿಗೆ ಸನ್ಮಾನ ಗಾಯನ ಸಮಾಜ

**26. 15.03.22** – ಹರಿಹರಪುರಕ್ಕೆ ಭೇಟಿ ಕುಂಭಾಭಿಷೇಕದ ತಯಾರಿಯ ಬಗ್ಗೆ

**27. 19.03.22** – ಚನ್ನರಾಯಪಟ್ಟಣ ತಾಲ್ಲೂಕು ಬ್ರಾಹ್ಮಣ ಮಹಾಸಭಾಗೆ ಭೇಟಿ

**28. 20.03.22** – ಶ್ರೀ ಧನ್ವಂತರಿ ಸೇವಾ ಪ್ರತಿಷ್ಠಾನ ಲೋಕಾರ್ಪಣಾ ಸಮಾರಂಭದಲ್ಲಿ ಭಾಗಿ

**29. 20.03.22** – ಶ್ರೀ ಹವ್ಯಕ ಮಹಾಸಭಾದ ವಿಜಯೀಭವ ಕಾರ್ಯಕ್ರಮದ ಉದ್ಘಾಟನೆ

**30. 20.03.22** – ಆನಂದ ಬಳಗ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗಿ

**31. 23.03.22** – ವ್ಯಾಸರಾಜರ ಉತ್ತಾರಾಧನೆ ಪ್ರಯುಕ್ತ ನವವೃಂದಾವನ ಗಂಗಾವತಿಗೆ ಭೇಟಿ

**32. 25.03.22** – ದಿ ಕಾಶ್ಮೀರ್ ಫೈಲ್ಸ್" ವಿಶೇಷ ಪ್ರದರ್ಶನದಲ್ಲಿ ಭಾಗಿ

**33. 26.03.22** – ಡಾ॥ ಬಿ.ಎನ್.ವಿ. ಜ್ಯೋತಿರತ್ನ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಭಾಗಿ

**34. 27.03.22** – ಮಹಾಲಕ್ಷ್ಮೀಪುರಂನ 18ನೇ ಬ್ರಾಹ್ಮಣ ಸಭಾದ ವಾರ್ಷಿಕೋತ್ಸವದಲ್ಲಿ ಭಾಗಿ

**35. 27.03.22** – ಕಣಕಟ್ಟೆ ಗ್ರಾಮಕ್ಕೆ ಭೇಟಿ (ಅರಸೀಕೆರೆ)

**36. 28.03.22** – ಚಿಕ್ಕಮಗಳೂರಿನಲ್ಲಿ ಶೃಂಗೇರಿ ಮಠದ ಆಡಳಿತ ಅಧಿಕಾರಿಯಿಂದ ಗೌರವ ಸಮರ್ಪಣೆ

**37. 02.04.22 – ಅ) ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಭಾಗಿ**

**ಆ) ವಿಪ್ರನುಡಿ ಆಂಗ್ಲ ಆವೃತ್ತಿ ಬಿಡುಗಡೆ**

**38. 03.04.22** – ಚಿಂತಾಮಣಿಯಲ್ಲಿ ಅಭಿನಂದನಾ ಸಮಾರಂಭ, ಸಂಘಟನಾ ಸಭಾ ಮತ್ತು ಸದಸ್ಯತ್ವ ಅಭಿಯಾನ

**39. 06.04.22** – ಹೊಸಪೇಟೆಯಲ್ಲಿ ಕಂಚಿಶ್ರೀಗಳ ಭೇಟಿ ಹಾಗೂ ಶ್ರೀಗಳಿಂದ ಮಹಾಸಭಾಗೆ ಸಲಹೆ ಸೂಚನೆಗಳ ಸ್ವೀಕಾರ.

**40. 08.04.22** – ಕಾಶ್ಮೀರ ನರಮೇಧದ ಕುರಿತು ಏರ್ಪಡಿಸಿದ್ದ ಸಂವಾದದಲ್ಲಿ ಭಾಗಿ

**41. 10.04.22** – ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಭಾಗಿ

**42. 19 ರಿಂದ 29 ಏಪ್ರಿಲ್ 22** – ಹರಿಹರಪುರದಲ್ಲಿ ಕುಂಭಾಭಿಷೇಕದಲ್ಲಿ ಭಾಗಿ

**43. 17.04.22** – ರಟ್ಟೀಹಳ್ಳಿಗೆ ಭೇಟಿ ನೀಡಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

**44. 17.04.22** – ಹಾವೇರಿ ಜಿಲ್ಲೆಯ ಅಗಡಿ ಆನಂದಾಶ್ರಮಕ್ಕೆ ಭೇಟಿ

**45. 27.04.22** – ಶಿವಮೊಗ್ಗದ ವಿಪ್ರ ಯುವ ಪರಿಷತ್ ಏರ್ಪಡಿಸಿದ್ದ ಮಹಾಗಣಪತಿ ಯಾಗದಲ್ಲಿ ಭಾಗಿ.

**46. 23.04.22** –ಮತ್ತೂರಿನಲ್ಲಿ ವಿಪ್ರರ ಭೇಟಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯರ ಭೇಟಿ (ಮತ್ತೂರು ಪಟ್ಟಾಭಿರಾಮ)

**47. 23.04.22** – ಹೊಸಹಳ್ಳಿಯಲ್ಲಿ ಪದ್ಮಶ್ರೀ ಪುರಸ್ಕೃತರಾದ ಗಮಕ ವಿದ್ವಾನ್ ಶ್ರೀ ಹೆಚ್.ಆರ್. ಕೇಶಮೂರ್ತಿ ಅವರ ಭೇಟಿ ಹಾಗೂ ಗೌರವ ಸಮರ್ಪಣೆ.

48. ಮತ್ತೂರಿನ ಅವಧೂತರ ಭೇಟಿ ಹಾಗೂ ಭಾಜಪ ನಾಯಕರಾದ ಭಾನುಪ್ರಕಾಶ ಶರ್ಮ ಹಾಗೂ ನಟರಾದ ಭಾಗವತರ ಭೇಟಿ ಮತ್ತು ಸಂಘಟನೆಯ ಬಗ್ಗೆ ಸಮಾಲೋಚನೆ.

49. ಹಾಸನ ಜಿಲ್ಲೆ, ಹಾಸನ ತಾಲ್ಲೂಕಿನ ಕಿತ್ತಾನೆ ಗ್ರಾಮದಲ್ಲಿ ವಿಪ್ರ ಭವನ ಉದ್ಘಾಟನೆ












**ವಿಪ್ರನುಡಿ ಮರುಚಾಲನೆ :** ಕಳೆದೆರಡು ವರುಷಗಳಿಂದ ನಿಂತು ಹೋಗಿದ್ದ ವಿಪ್ರನುಡಿಗೆ ಮರುಚಾಲನೆ ಕೊಡುವ ಅತೀ ದೊಡ್ಡ ಸವಾಲು ಅಧ್ಯಕ್ಷರ ಮೇಲಿತ್ತು. ಆದರೆ ಮಹಾಸಭಾದ ಮುಖವಾಣಿ ಹತ್ತರಲ್ಲಿ ಹನ್ನೊಂದು ಎಂಬಂತೆ ಆಗಬಾರದು ಹಾಗೂ ವಿಪ್ರನುಡಿ ವಿಪ್ರರ ಹೆಮ್ಮೆಯ ಸಂಗ್ರಾರ್ಹ ಪತ್ರಿಕೆಯಾಗಬೇಕು, ಎಂಬ ಉದ್ದೇಶದಿಂದ ಹೆಸರಾಂತ ಪತ್ರಕರ್ತರು ವಿದ್ವಾಂಸರು ಹಾಗೂ ಉದಯೋನ್ಮುಖ ಬರಹಗಾರರು ಹಾಗೂ ನುರಿತ ಮುದ್ರಕರ ಹೊಸ ತಂಡವನ್ನು ನಿಯೋಜಿಸಿದರು.

ಈ ಹೊಸ ತಂಡದಿಂದ ಮೂಡಿಬರುತ್ತಿರುವ ವಿಪ್ರನುಡಿ ಪತ್ರಿಕೆಯು ಸಮುದಾಯಕ್ಕೆ ಸಂಬಂಧಿಸಿದ ರಾಜ್ಯಾದ್ಯಂತ ಪ್ರಚಲಿತ ವಿದ್ಯಮಾನಗಳ ವರದಿ, ವಿಪ್ರಸಾಧಕರ ಪರಿಚಯ, ಅಪಾರ ಸೇವೆ ಸಲ್ಲಿಸುತ್ತಿರುವ ವಿಪ್ರ ಸಂಘಟನೆಗಳ ಬಗ್ಗೆ ಮಾಹಿತಿ, ಮಹಾಸಭೆಯ ಧ್ಯೆಯಗಳೊಲ್ಲೊಂದಾದ 'ಸಂಸ್ಕಾರ'ಕ್ಕೆ ಸಂಬಂಧಿಸಿದಂತೆ ಶಾಸ್ತ್ರ ಚಿಂತನೆ, ಸಮಾಜದ ವರ್ತಮಾನದ ಸಮಸ್ಯೆಗಳನ್ನು ಕುರಿತ ಲೇಖನಗಳಿಂದ ಕೂಡಿ ಮೌಲ್ಯಯುತವಾಗಿ ವರ್ತಮಾನ ಸಮಾಜದ ಕ್ರಿಯಾಶೀಲತೆಯನ್ನು ಬಿಂಬಿಸುವಲ್ಲಿ ಪತ್ರಿಕೆಯು ಪ್ರಾಮಾಣಿಕ ಪ್ರಯತ್ನಮಾಡುತ್ತಿರುವುದು ಸ್ವಾಗತಾರ್ಹ.

ಮಹಾಸಭಾ ಹೊರದೇಶದಲ್ಲೂ ತನ್ನ ಕಾರ್ಯಬಾಹುಳ್ಯವನ್ನು ವಿಸ್ತರಿಸಬೇಕೆಂದು ಮನಗೊಂಡು, ಸತೀಶ್ ಬೆಳ್ಳೂರು ಅವರ ನೇತೃತ್ವದಲ್ಲಿ ವಿಪ್ರನುಡಿ ಇಂಗ್ಲೀಷ್ ಜರ್ನಲ್‌ಗೂ ಚಾಲನೆ ನೀಡಿದರು. ಹೆಸರಾಂತ ಲೇಖಕರ ವಿದ್ವತ್ ಬರಹಗಳಿಂದ ಪತ್ರಿಕೆಯು ಮೌಲ್ಯಯುತವಾಗಿ ಬರುತ್ತಿರುವುದು ಗಮನಿಸಬೇಕಾದ ಅಂಶ.

ಹೀಗೆ ನೀವು ಗಮನಿಸುತ್ತಾ ಹೋದರೆ ಅಧ್ಯಕ್ಷರು ನೂತನ ಯೋಚನೆ ಮತ್ತು ಯೋಜನೆಗಳ ಮೂಲಕ ಮಹಾಸಭೆಗೊಂದು ಮೆರಗು ತರುತ್ತಿದ್ದಾರೆ. ಅದಲ್ಲದೆ ಅವರ ಮೇಲ್ಕಂಡ ಪ್ರವಾಸದ ಪಟ್ಟಿಯಲ್ಲಿ ತೊಂಭತ್ತರಿಂದ ನೂರು ದಿನಗಳ ಅಂತರದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ದಿನಗಳನ್ನು ಸಂಘಟನೆಗಾಗಿ ಸಂಚಾರದಲ್ಲೇ ತಮ್ಮನ್ನು ತಾವೇ ತೊಡಗಿಸಿಕೊಂಡಿದ್ದಾರೆ. ಅಲ್ಲಿ ಇದೆಲ್ಲದರ ಪರಿಣಾವಾಗಿ ಬ್ರಾಹ್ಮಣರಲ್ಲಿ ಒಂದು ಬಗೆಯ ಏಕತೆ, ಹೊಸ ಹುರುಪು ಸ್ಪಷ್ಟವಾಗಿ ಗೋಚರಿಸುತ್ತಿದೆ. ಹೀಗಿರುವಾಗ ಮಹಾಸಭಾದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಕೂಡ ಒಂದೊಂದೇ ಜವಾಬ್ದಾರಿಯನ್ನು ತೆಗೆದುಕೊಂಡು ಮಹಾಸಭೆಯ ಉನ್ನತಿಗೆ ಶ್ರಮಿಸುವುದು ಮತ್ತು ಆ ಮೂಲಕ ವಿಪ್ರರ ಅಭ್ಯುದಯಕ್ಕೆ ನೂತನ ಅವಕಾಶಗಳನ್ನು ಸೃಷ್ಟಿಸುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ ಎಂದು ಭಾವಿಸುತ್ತೇನೆ. ನೀವು ನನ್ನ ಈ ಅಭಿಪ್ರಾಯಕ್ಕೆ ಪುಷ್ಟೀಕರಿಸುತ್ತೀರೆಂದು ಭಾವಿಸಿದ್ದೇನೆ.

ನಿಮ್ಮ,

**ಕಾರ್ತಿಕ್ ಎಸ್. ಬಾಪಟ್**

ಜಾಹಿರಾತು

digital
AddSense

# 244/C, 2nd Main, 32nd Cross
7th Block, Jayanagar, Bangalore-560 082
Mob. : +91 98863 17070
Email : karthikmuniraju@digitaladdsense.com
karthikmuniraju@gmail.com

## ಮಹಾಲಕ್ಷ್ಮಿ ಬಡಾವಣೆ ಬ್ರಾಹ್ಮಣ ಸಭಾ ವಾರ್ಷಿಕೋತ್ಸವ



ಮಹಾಲಕ್ಷ್ಮೀಪುರ ಬಡಾವಣೆಯ ಬ್ರಾಹ್ಮಣ ಸಭಾದ 18ನೇ ವಾರ್ಷಿಕೋತ್ಸವ ಸಮಾರಂಭ ಅದ್ದೂರಿಯಾಗಿ ನಡೆಯಿತ. ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರಿಗೆ ಸಭಾ ವತಿಯಿಂದ ಅಭಿನಂದನಾ ಸಮಾರಂಭವು ನಡೆಯಿತು. ಕಾರ್ಯಕ್ರಮದಲ್ಲಿ ಅಬಗಾರಿ ಸಚಿವರಾದ ಸನ್ಮಾನ್ಯ ಗೋಪಾಲಯ್ಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಶುಭ ಕೋರಿದರು. 10 ಜನ ಪ್ರತಿಭಾವಂತರಿಗೆ ಪುರಸ್ಕರಿಸಿದಲ್ಲದೆ 35 ಜನರಿಗೆ ತಲಾ ರೂ.5,000/=ದಂತೆ ವಿದ್ಯಾರ್ಥಿವೇತನವನ್ನು ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮವನ್ನು 3000 ಪಂಚಾಂಗವನ್ನು ಉಚಿತಾಗಿ ವಿತರಿಸಲಾಯಿತು. ಬಡಾವಣೆಯ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ವೆಂಕಟೇಶಶಾಸ್ತ್ರಿಗಳು ಹಾಗೂ ಕಾರ್ಯದರ್ಶಿಗಳಾದ ಬಿ.ರಾಘವೇಂದ್ರ ಭಟ್‌ರವರ ನೇತೃತ್ವದಲ್ಲಿ ಕಾರ್ಯಕ್ರಮವು ಅದ್ದೂರಿಯಾಗಿ ನೆರವೇರಿತು.



**ಗುರುವಚನ ಉಪದೇಶ । ಗುರುವಚನವೇ ಭಕ್ತಿ । ಗುರುವಚನ ಮೋಕ್ಷ ಪರಮಾರ್ಥ । ಇವು ತಾನೇ ಪರಮಪದ ಕಾಣಾ ಸರ್ವಜ್ಞ**

## ರಾಯಚೂರಿನ ಜಿಲ್ಲಾ ಬ್ರಾಹ್ಮಣ ಸಭಾದ ನೂತನ ಪದಾಧಿಕಾರಿಗಳು



ದಿನಾಂಕ 3.4.22 ರಂದು ಶಾರದಾ ವಿದ್ಯಾನಿಕೇತನ ಶಾಲೆಯಲ್ಲಿ ನಡೆದ ಹಾಗು ಪಂಚಾಂಗ ಶ್ರವಣ ಕಾರ್ಯಕ್ರಮ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜದ ಪ್ರಧಾನ ಸಂಚಾಲಕರು ಹಾಗು ಸಂಚಾಲಕರ ನೇಮಕವಾಯಿತು. ಅದರಲ್ಲಿ ರಾಯಚೂರು ಜಿಲ್ಲಾ ಬಿಜೆಪಿ ಮುಖಂಡರಾದ ನಾರಾಯಣರಾವ ಪುರತಿಪ್ಲಿಯವರು ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜದ ಜಿಲ್ಲೆಯ ಸಂಚಾಲಕರಾಗಿ ಆಯ್ಕೆಯಾಗಿದ್ದಾರೆ

## ಹುಬ್ಬಳ್ಳಿಯಲ್ಲಿ ಸದಸ್ಯತ್ವ ಅಭಿಯಾನ



ದಿನಾಂಕ 14.04.2022 ರಂದು ಹುಬ್ಬಳಿಯ ಶಿರೂರು ಪಾರ್ಕ್ ಎಕ್ಸಟೆನ್ಶನ್‌ನಲ್ಲಿ ಸದಸ್ಯತ್ವ ಅಭಿಯಾನ:

ಈ ಸಂದರ್ಭದಲ್ಲಿ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಪ್ರಿಯ ಪುರಾಣಿಕ್, ನ್ಯಾಯವಾದಿಗಳಾದ ದೇಶಪಾಂಡೆಯವರು ಹಾಗು ಹಲವಾರು ವಿಪ್ರಬಂಧುಗಳು ಪಾಲ್ಗೊಂಡಿದ್ದರು, ಶ್ರೀಮತಿ ಹೇಮಾ ದೇಸಾಯಿ ಹಾಗು ಸಂಧ್ಯಾ ದೇಶಪಾಂಡೆ ಅವರು ಕಾರ್ಯಕ್ರಮವನ್ನು ನಿಯೋಜಿಸಿದ್ದರು.

## ಚಿಂತಾಮಣಿಯಲ್ಲಿ ಅಭಿನಂದನಾ ಸಮಾರಂಭ



ಅಧ್ಯಕ್ಷರಿಗೆ ಸ್ವಾಗತ

ಚಿಕ್ಕಬಳ್ಳಾಪುರ: 350 ನೂತನ ಸದಸ್ಯರ ದಾಖಲೆಯ ಸದಸ್ಯತ್ವ ನೊಂದಾವಣೆ ಪ್ರಕಟಣೆ. ಈ ಕಾರ್ಯಕ್ರಮದಲ್ಲಿ ನಡೆದದ್ದು ಅಭಿನಂದನೀಯ ಸಾಧನೆಯಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀಯುತ ಅಶೋಕ ಹಾರನಹಳ್ಳಿ ಅವರಿಗೆ ದಿನಾಂಕ 3.4.22 ಭಾನುವಾರದಂದು ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲೂಕು ಬ್ರಾಹ್ಮಣ ಸಭಾದ ವತಿಯಿಂದ ಅಭಿನಂದನಾ ಕಾರ್ಯಕ್ರಮವನ್ನು ಬಹಳ ಅಚ್ಚುಕಟ್ಟಾಗಿ ಏರ್ಪಡಿಸಿದ್ದರು. ಈ ಕಾರ್ಯಕ್ರಮದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷರಾದ ಶ್ರೀ ಅಟ್ಟೂರು ವೆಂಕಟೇಶ್ ಅಯ್ಯನವರ ಘನ ಅಧ್ಯಕ್ಷತೆಯಲ್ಲಿ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಿರಿಯರಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿಗಳು ಮತ್ತು ಶ್ರೀ ಬಿ ಎಸ್ ರಾಘವೇಂದ್ರ ಭಟ್, ಶ್ರೀ ಕಾರ್ತಿಕ್ ಬಾಪಟ್ ಹಾಗೂ ಶ್ರೀ ಸಂದೀಪ್ ರವಿ ಶ್ರೀಮತಿ ರೂಪ ಶಾಸ್ತ್ರಿ ಶ್ರೀ ನಾಗಭೂಷಣರವರು ಶ್ರೀ ಪಿ.ಆರ್. ಪ್ರಕಾಶ್‌ರವರು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಮಂಜುನಾಥ್ ಶಾಸ್ತ್ರಿ, ಶ್ರೀ ವೆಂಕಟೇಶ ದ್ವಾರಕಾನಾಥ್, ಶ್ರೀ ಉಮೇಶ್, ಶಾಸ್ತ್ರಿ, ಶ್ರೀ ಅನಂತ್ ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಮಹಾಸಭಾದ ಚಿಕ್ಕಬಳ್ಳಾಪುರ ಜಿಲ್ಲಾ ಪದಾಧಿಕಾರಿಗಳಾದ ಶ್ರೀ ಶ್ರೀನಾಥ್ ಹಾಗೂ ಶ್ರೀ ನಾಗೇಶ್, ಶ್ರೀ ವಿಶ್ವನಾಥ್, ಶ್ರೀಕಾಂತ್ ಹಾಗೂ ಅನೇಕ ಮುಖಂಡರ ಜೊತೆಗೂಡಿ ಮಹಾಸಭಾದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಮುರಳಿಧರ್ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆಸಲಾಯಿತು.



**ನೂತನ ಸದಸ್ಯರ ಅರ್ಜಿಗಳನ್ನು ಅಧ್ಯಕ್ಷರಿಗೆ ಸಲ್ಲಿಕೆ**

## "ವಿಶ್ವ ಮಹಿಳಾ ದಿನಾಚರಣೆ"



ದಿನಾಂಕ 23.03.2022ರಂದು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಮಲ್ಲೇಶ್ವರ ಮಂಡಲ ಮಹಿಳಾ ಮೋರ್ಚಾ ವತಿಯಿಂದ ಏರ್ಪಡಿಸಲಾಗಿದ್ದ "ವಿಶ್ವ ಮಹಿಳಾ ದಿನಾಚರಣೆ"ಯ ಸಂದರ್ಭದಲ್ಲಿ ಉತ್ತರ ರಾಜಾಜಿನಗರ ಬ್ರಾಹ್ಮಣಸಭಾದ ಮಾಜಿ ಅಧ್ಯಕ್ಷಿಣಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ಘಟಕದ ಮಾಜಿ ಅಧ್ಯಕ್ಷಿಣಿಯವರಾದ ಶ್ರೀಮತಿ ಬಿ.ಎಸ್. ಸುಬ್ಬಲಕ್ಷ್ಮಿ ಶರ್ಮರವರ ಸಮಾಜ ಸೇವೆಯನ್ನು ಗುರುತಿಸಿ ಅವರನ್ನು ನೆಚ್ಚಿನ ಶಾಸಕರಾದ ಹಾಗೂ ಮಾನ್ಯ ಸಚಿವರಾದ ಡಾ॥ ಸಿ.ಎನ್. ಅಶ್ವಥ್‌ನಾರಾಯಣ್ ರವರು "ಮಹಿಳಾ ಸಾಧಕಿ" ಪ್ರಶಸ್ತಿ ನೀಡಿ ಸನ್ಮಾನಿಸಿದರು.

### ಚಾಮರಾಜನಗರ ಜಿಲ್ಲೆಯಲ್ಲಿ ಮಹಾಸಭಾ ಸದಸ್ಯತ್ವಕ್ಕೆ ಚಾಲನೆ

ಚಾಮರಾಜನಗರ: ಚಾಮರಾಜನಗರ ತಾಲ್ಲೂಕು ಆಲೂರು ಗ್ರಾಮದ ಶ್ರೀರಾಮ ಸೇವಾ ಮಂಡಳಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನವನ್ನು ನಡೆಸಲಾಯಿತು. ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಜಿ.ಎನ್.ಹೆಗ್ಡೆ, ಕಾರ್ಯದರ್ಶಿ ಸುರೇಶ್ ಎನ್. ಋಗ್ವೇದಿ, ಸೇವಾ ಮಂಡಳಿಯ ಶೇಖರ್, ಶ್ರೀರಂಗರಾಜು, ಪ್ರಸಾದ್ ಮತ್ತು ರಘು ಇದ್ದರು.



## ಹುಬ್ಬಳ್ಳಿ ಲಕ್ಷ್ಮೀನರಸಿಂಹ ದೇವಸ್ಥಾನಕ್ಕೆ ಸರ್ಕಾರದಿಂದ ಸಹಾಯಧನ



ಹುಬ್ಬಳಿ: ದಿನಾಂಕ 06.04.2022 ರಂದು ಕರ್ನಾಟಕ ಸರ್ಕಾರದ ಆರಾಧನಾ ಸಮಿತಿಯಿಂದ ದೇವಾಲಯದ ಜೀರ್ಣೋದ್ಧಾರಕ್ಕೆ ಕೊಡುವ ನಿಧಿಯನ್ನು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಅವರು ಶ್ರೀ ಲಕ್ಷ್ಮಿ ನರಸಿಂಹ ದೇವಸ್ಥಾನಕ್ಕೆ ಚೆಕ್ ನೀಡಿದ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಅವರನ್ನು ಸನ್ಮಾನ ಮಾಡಿದರು. ಈ ಸಂದರ್ಭದಲ್ಲಿ ಹೂಡಾ ಅಧ್ಯಕ್ಷರಾದ ನಾಗೇಶ್ ಕಲಬುರ್ಗಿಯವರು ವೀರಣ್ಣ ಸವಡಿ, ಶ್ರೀಮುರಳಿ ಕರಜಗಿ ದೇವಸ್ಥಾನದ ಸಮೀರಾಚಾರ್, ಮಣ್ಣೂರ್ ರಾಘವೇಂದ್ರಾಚಾರ್ ಮಣ್ಣೂರು, ಆರಾಧನಾ ಸಮಿತಿ ಅಧ್ಯಕ್ಷ ಮೋಹನ್ ಬಡಿಗೇರ್, ಶಂಕರ್ ಪಾಟೀಲ್, ಸಿದ್ದು ಮೊಗಲಿ ಶೆಟ್ಟರ್ ಮುಂತಾದವರು ಹಾಜರಿದ್ದರು.

## ರಾಜಾಜಿನಗರದಲ್ಲಿ ಪ್ರತಿಭಾ ಪುರಸ್ಕಾರ



ದಿನಾಂಕ 03.10.2022 ರಂದು ಉತ್ತರ ರಾಜಾಜಿನಗರ ಬ್ರಾಹ್ಮಣ ಸಭಾ (ರಿ) ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಎದುರಿಸುವ ಸವಾಲುಗಳು ಮತ್ತು ಅವುಗಳನ್ನು ಹೇಗೆ ಮೆಟ್ಟಿ ನಿಲ್ಲಬೇಕೆಂದು ವಿಸ್ತಾರವಾಗಿ ಮಾತನಾಡಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

## ಹುಕ್ಕೇರಿ – ಪಾಶ್ಚಪುರದಲ್ಲಿ ವಿಪ್ರ ಸಮಾಲೋಚನಾ ಸಭೆ




ರಾಜ್ಯವ್ಯಾಪಿ ಬ್ರಾಹ್ಮಣ ಸಂಘಟನೆಯನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ಹುಕ್ಕೇರಿ ತಾಲೂಕಿನ ಪಾಶ್ಚಾಪುರದಲ್ಲಿ ಬ್ರಾಹ್ಮಣ ಸಮುದಾಯದವರ ಸಭೆ ನಡೆಸಲಾಯಿತು. ಸಭೆಯಲ್ಲಿ ಮಾತನಾಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕೇಂದ್ರ ಸಮಿತಿ ಸದಸ್ಯ ವಿಲಾಸ ಜೋಶಿ ಸಂಘಟನೆ ಮತ್ತು ಮಹಾಸಭಾ ಉದ್ದೇಶಗಳನ್ನು ವಿವರಿಸಿದರು. ಅಶೋಕ ಹಾರನಹಳ್ಳಿಯವರು ಮಹಾಸಭಾ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ನಂತರ ಸಮಾಜ ಗುರುತಿಸುವಂತಹ ಕೆಲಸಗಳು ಆಗುತ್ತಿವೆ. ಈಗ ನಮ್ಮ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರು ಮಹಾಸಭಾ ಸದಸ್ಯತ್ವವನ್ನು ಪಡೆದುಕೊಳ್ಳಬೇಕು ಎಂದು ವಿಲಾಸ ಜೋಶಿ ಮನವಿ ಮಾಡಿದರು. ಬೆಳಗಾವಿಯಲ್ಲಿಯೂ ಕೂಡ ಬ್ರಾಹ್ಮಣರ ಹೆಸರಾಂತ ಉದ್ದಿಮೆದಾರರ ಸಭೆಯನ್ನು ಎಲ್ಲರ ಸಹಕಾರದಿಂದ ನಡೆಸಲಾಗುತ್ತಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದು ಸೇರಿದಂತೆ ಆರ್ಥಿಕವಾಗಿ ಹಿಂದುಳಿದ ಸಮಾಜ ಬಾಂಧವರಿಗೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನು ಸಹ ಸಭೆಯಲ್ಲಿ ಅವರು ವಿವರಿಸಿದರು. ಇದೇ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜದ ಬಡ ವಿದ್ಯಾರ್ಥಿಗಳಿಗೆ ಕೊಡಮಾಡುವ EWS ಪ್ರಮಾಣ ಪತ್ರವನ್ನು ಯಾವ ರೀತಿ ಪಡೆದುಕೊಳ್ಳಬಹುದು ಎನ್ನುವುದರ ಬಗ್ಗೆಯೂ ವಿಲಾಸ ಜೋಶಿ ವಿವರಿಸಿದರು. ಬ್ರಾಹ್ಮಣ ಸಂಘಟನೆ ಬಗ್ಗೆ ಅಧ್ಯಕ್ಷರಾದ ಅಶೋಕ ಹಾರನಹಳ್ಳಿಯವರು ಕಂಡ ಕನಸುಗಳನ್ನು ವಿಲಾಸ ಜೋಶಿ ಸಭೆಯಲ್ಲಿ ವಿವರಿಸಿದರು. ಮೇ ತಿಂಗಳ ಮೊದಲ ವಾರದಲ್ಲಿ ಬೆಳಗಾವಿಗೆ ಆಗಮಿಸುವ ಅಧ್ಯಕ್ಷ ಅಶೋಕ ಹಾರನಹಳ್ಳಿಯವರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿಕೊಳ್ಳಲಾಯಿತು.

## ವೈದ್ಯಕೀಯ ವಿಭಾಗದಿಂದ ಸಮಾಲೋಚನಾ ಸಭೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವೈದ್ಯಕೀಯ ವಿಭಾಗದ ವತಿಯಿಂದ ವೈದ್ಯಕೀಯ ಪ್ರಕೋಷ್ಠದ ರೂವಾರಿಗಳಾದ ಡಾ ಕಿಶೋರ್ ಸಿ.ಎ ಅವರು ಅವರು ಹುಬ್ಬಳ್ಳಿಗೆ ಆಯುರ್ವೇದಿಕ್ ಮಹಾವಿದ್ಯಾಲಯ ದಲ್ಲಿ ವಿಪ್ರ ವೈದ್ಯರಿಂದ ಸಮಾಜಕ್ಕೆ ಯಾವ ರೀತಿ ವೈದ್ಯಕೀಯ ಹಾಗೂ ಆರೋಗ್ಯ ಸೌಲಭ್ಯವನ್ನು ಬ್ರಾಹ್ಮಣ ಮಹಾಸಭಾ ಮೂಲಕ ಕೊಡಬಹುದು ಎಂಬುವುದರ ಬಗ್ಗೆ ಹುಬ್ಬಳ್ಳಿಯ ಪ್ರಖ್ಯಾತ ವೈದ್ಯರ ಜೊತೆಗೆ ಚರ್ಚಿಸಿದರು ಹಾಗೂ ಬ್ರಾಹ್ಮಣ ಮಹಾಸಭೆಯಿಂದ ಈಗಾಗಲೇ ಅನೇಕ ಆಸ್ಪತ್ರೆಗಳು ಹಾಗೂ ವೈದ್ಯರು ವಿಪ್ರರಿಗಾಗಿ ನೀಡುತ್ತಿರುವ ಸೌಲಭ್ಯಗಳನ್ನು ವಿವರಿಸಿದರು. ಮಹಾಸಭಾದ ಉಪಾಧ್ಯಕ್ಷರಾದ ಪ್ರಮೋದ ಮನೋಳಿ ಅವರು ಮಹಾಸಭಾದ ಹಲವಾರು ಯೋಜನೆಗಳ ಬಗ್ಗೆ ವಿವರ ನೀಡಿದರು, ಸದಸ್ಯತ್ವದ ಬಗ್ಗೆ ಚರ್ಚಿಸಿ ಅಲ್ಲಿ ಸೇರಿದ ವಿಪ್ರ ಬಾಂಧವರಿಗೆ ಸದಸ್ಯರಾಗಲು ಕೇಳಿಕೊಂಡರು, ಖ್ಯಾತ ವೈದ್ಯರಾದ S K. ಬನ್ನಿಗೋಳ, ಡಾ ಪ್ರಹ್ಲಾದ್ ಕಂಚಿ, ಬಿ ಬಿ ಪಾಟೀಲ್, ಎಂ ಪಿ ದೇಶಪಾಡೆ, ಡಾಕ್ಟರ್ ಜಯತೀರ್ಥ ಜೋಶಿ, ಡಾಕ್ಟರ್ ಪ್ರದೀಪ್ ದೇಸಾಯಿ, ಮಹೇಶ್ ದೇಸಾಯಿ, ಡಾಕ್ಟರ್ ಅಗ್ನಿಹೋತ್ರಿ, ಡಾಕ್ಟರ್ ಸೌರಭ ನಂದಿನಿ, ದೀಕ್ಷಿತ್, ಡಾ. ವರ್ಷಾ ಮಳಗಿ, ಲಕ್ಷ್ಮಿ ಪಾಟೀಲ್, ಶ್ರೀಕಾಂತ ದೇಶಪಾಂಡೆ ಹಾಗೂ ಅನೇಕ ವೈದ್ಯರು ಭಾಗವಹಿಸಿ ವಿಪ್ರ ಸಮಾಜಕ್ಕೆ ತಮ್ಮ ಹೆಚ್ಚಿನ ಸೇವೆಯನ್ನು ನೀಡುವುದಾಗಿ ತಿಳಿಸಿದರು. ಮಹಾವಿದ್ಯಾಲಯದ ಪ್ರಾಚಾರ್ಯರು ಡಾಕ್ಟರ್ ಪ್ರಶಾಂತ್ ಎ.ಎಸ್ ಅವರು ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ನಿರ್ವಹಿಸಿದರು.

## ವೈದ್ಯಕೀಯ ವಿಭಾಗದಿಂದ ಉಚಿತ ವೈದ್ಯಕೀಯ ಶಿಬಿರ




### ವಿಪ್ರನುಡಿಗೆ ಚಂದಾದಾರರಾಗಲು ಮನವಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ತಮಗೆ ತಲುಪಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂಈ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಸದಸ್ಯರಾಗಬೇಕಾಗಿ ಕೋರಿಕೆ. ಈ ವಿಪ್ರನುಡಿ ಸದಸ್ಯರ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು**

ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.
ಲೇಖನ ವರದಿಗಳನ್ನು ಕಳುಹಿಸಬೇಕಾದ
ಇ–ಮೇಲ್ : e mail : vipranudi@gmail.com

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

## ವಿದುರಾಶ್ವತ್ಥದಲ್ಲಿ ಪ್ರತಿಭಾ ಪುರಸ್ಕಾರ



ವಿದುರಾಶ್ವತ್ಥ, ಗೌರಿಬಿದನೂರು ತಾಲೂಕು: ದಿನಾಂಕ 16.04.2022 ರಂದು ಶ್ರೀ ವಿದುರಾಶ್ವತ್ಥಸ್ವಾಮಿ ಬ್ರಾಹ್ಮಣ ಸೇವಾ ಟ್ರಸ್ಟ್ ವಿದುರಾಶ್ವತ್ಥ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಮುದಾಯ ಪ್ರತಿಭಾವಂತ 30 ಮಕ್ಕಳಿಗೆ ಪುರಸ್ಕಾರವನ್ನು ನೀಡಲಾಯಿತು. ಅದೇ ಸಂದರ್ಭದಲ್ಲಿ ಮಹಾಸಭೆ ಸದಸ್ಯತ್ವ ಅಭಿಯಾನಕ್ಕೂ ಚಾಲನೆ ನೀಡಲಾಯಿತು. ಈ ಸಂಧರ್ಭದಲ್ಲಿ ಮಹಾಸಭಾ ಉಪಾಧ್ಯಕ್ಷರಾದ ಡಿ ವಿ ರಾಜೇಂದ್ರ ಪ್ರಸಾದ್, ಶಾಸಕರು ಹಾಗೂ ಮಾಜಿ ಕೃಷಿ ಸಚಿವರಾದ ಎನ್ ಎಚ್ ಶಿವಶಂಕರ ರೆಡ್ಡಿ , ಟಿ ಲಕ್ಷ್ಮಿಕಾಂತ್ ರಾವ್ , ಎಂ ಎನ್ ಸುಬ್ಬ ರಾವ್ , ಡಿ ಎಸ್ ವೆಂಕಟ ರಾವ್, ಬಿ ಏ ಅಶ್ವಥ ನಾರಾಯಣ ರಾವ್ , ಶ್ರೀಕಂಠಮೂರ್ತಿ ಹಾಗು ಸಮಾಜದ ಹಲವು ಮುಖಂಡರು ಭಾಗಿಯಾಗಿದ್ದರು.

## ರಟ್ಟೀಹಳ್ಳಿಯಲ್ಲಿ ಸದಸ್ಯತ್ವ ಅಭಿಯಾನ



ದಿನಾಂಕ 17.04.2022 ರಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ರಟ್ಟೀಹಳ್ಳಿಗೆ ಭೇಟಿ ನೀಡಿ ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು ಹಾಗೂ ಸಭೆಯಲ್ಲಿ ರಟ್ಟಿಹಳ್ಳಿ ವಿಪ್ರ ಸಮಾಜದವರು ಹಾಗೂ ರಾಣೆಬೆನ್ನೂರಿನ ಸಮಾಜದ ಮುಖಂಡರು ಭಾಗವಹಿಸಿದ್ದರು.

## ಗದಗದಲ್ಲಿ ವಿಪ್ರ ಸಮಾಲೋಚನಾ ಸಭೆ



ದಿನಾಂಕ 14.4.22 ರಂದು ಮಧ್ಯಾಹ್ನ 12 ಗಂಟೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಗದಗ ನಗರದಲ್ಲಿ ಗದಗ ಜಿಲ್ಲೆಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಸಂಘಟನಾತ್ಮಕ ವಿಷಯಗಳನ್ನು ಮತ್ತು ಸದಸ್ಯತ್ವದ ಬಗ್ಗೆ ಚರ್ಚೆ ಮಾಡಿ ಎಲ್ಲ ತಾಲೂಕಿನ ಅಧ್ಯಕ್ಷರ ನೇಮಕ ಮತ್ತು ಜಿಲ್ಲಾ ಅಧ್ಯಕ್ಷರ ನೇಮಕದ ಬಗ್ಗೆ ಚರ್ಚೆ ಮಾಡಲಾಯಿತು. ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾದ ವಸಂತ ನಾಡಜೋಶಿಯವರು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ಕೊಟ್ಟರು. ಶ್ರೀ ಡಿ ಪಿ ಪಾಟೀಲ್ ಮಾತನಾಡಿ ಹೆಚ್ಚು ಸದಸ್ಯರನ್ನಾಗಿ ಮಾಡಲು ಕರೆಕೊಟ್ಟರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿ ಸದಸ್ಯರು, ಗದಗ ಜಿಲ್ಲಾ ಉಸ್ತುವಾರಿಗಳಾದ ವಿಜಯ ನಾಡಜೋಶಿ ಮಾತನಾಡಿ ರಾಜ್ಯಾಧ್ಯಕ್ಷರಾದ ಮಾನ್ಯ ಶ್ರೀ ಅಶೋಕ ಹಾರನಹಳ್ಳಿ ಅವರು ಮತ್ತು ಹಿರಿಯರಾದ ಮಾನ್ಯ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿಗಳು ಕೆಲವೇ ದಿನಗಳಲ್ಲಿ ಗದಗ್ ಜಿಲ್ಲೆಗೆ ಆಗಮಿಸುತ್ತಿದ್ದು, ಆಗ ಗದಗ್ ಜಿಲ್ಲಾ ಅಧ್ಯಕ್ಷರ ಘೋಷಣೆ ಮತ್ತು ತಾಲೂಕ್ ಅಧ್ಯಕ್ಷರ ಘೋಷಣೆ ಅವರಿಂದಲೇ ಮಾಡಿಸಲಾಗುವುದು ಎಂದರು ಅಧ್ಯಕ್ಷತೆಯನ್ನು ಶ್ರೀ ಶ್ರೀನಿವಾಸ್ ಹುಯಿಲಗೋಳ ವಹಿಸಿದ್ದರು ವೇದಿಕೆ ಮೇಲೆ ಶ್ರೀ ಇನಾಮದಾರ್, ಶ್ರೀ ಗುಡಿ, ಶ್ರೀ ಗಿರೀಶ್ ಕುಲಕರ್ಣಿ, ಡಾಕ್ಟರ್ ಪಾಟೀಲ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಶ್ರೀ ದತ್ತಣ್ಣ ಜೋಶಿ ನಡೆಸಿದರು. ವಿಪ್ರ ಪ್ರಮುಖರು ಮತ್ತು ವಿಪ್ರ ಮಹಿಳೆಯರು, ತಾಯಂದಿರು, ಯುವಕರು ಎಲ್ಲರೂ ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.




ದಿನಾಂಕ 12.04.2022 ರಂದು ಬೆಳಗಾವಿಯಲ್ಲಿ ಮಹಿಳಾ ವಿಭಾಗದಿಂದ ನಡೆದ ಮಹಿಳಾ ಸಂಘಟನೆ ಹಾಗು ಸದಸ್ಯತ್ವ ಅಭಿಯಾನದ ಪೂರ್ವಭಾವಿ ಸಿದ್ಧತಾ ಸಭೆ.

## ಶಿವಮೊಗ್ಗದಲ್ಲಿ ಮಹಾಗಣಪತಿ ಯಾಗ




ದಿನಾಂಕ 17.04.2022 : ಶಿವಮೊಗ್ಗ ನಗರದಲ್ಲಿ ಯುವ ಪರಿಷತ್ ಅವರು 17 ಮತ್ತು 18 ಏಪ್ರಿಲ್‌ನಲ್ಲಿ ಲೋಕಕಲ್ಯಾಣಾರ್ಥವಾಗಿ ಮಹಾಗಣಪತಿ ಯಾಗ ಹಮ್ಮಿಕೊಂಡಿದ್ದಾರೆ. ಈ ಸಮಾರಂಭದ ಪ್ರಾರಂಭದ ಸಮಯದಲ್ಲಿ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಭಾಗವಹಿಸಿ ಯಾಗಕ್ಕೆ ಶುಭವನ್ನು ಕೋರಿದರು. ಈ ಸಂದರ್ಭದಲ್ಲಿ ಶ್ರೀ ರಾಘವೇಂದ್ರ ಉಡುಪ ಮತ್ತು ಇತರ ವಿಪ್ರ ಯುವ ಪರಿಷತ್ತಿನ ಪದಾಧಿಕಾರಿಗಳು ಹಾಜರಿದ್ದರು.

## ಅಗಡಿಯಲ್ಲಿ ಶ್ರೀ ಶೇಷಾಚಲ ಭಗವಾನರ ಆರಾಧನೆ




ದಿನಾಂಕ 17.04.2022 ರಂದು ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಹಾವೇರಿ ಜಿಲ್ಲೆಯ ಅಗಡಿ ಆನಂದ ಆಶ್ರಮದಲ್ಲಿ ನಡೆದ ಶೇಷಾಚಲ ಭಗವಾನರ ಆರಾಧನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಭಕ್ತಾದಿಗಳನ್ನುದ್ದೇಶಿಸಿ ಮಾತನಾಡಿದರು.

## ಬೆಳಗಾವಿಯಲ್ಲಿ ಸದಸ್ಯತ್ವ ಅಭಿಯಾನ



ಬೆಳಗಾವಿ ಘಟಕದ ನೇತೃತ್ವದಲ್ಲಿ ನಡೆದ ಎಕೆಬಿಎಂಎಸ್ ಸದಸ್ಯತ್ವ ಅಭಿಯಾನಕ್ಕೆ ಬೆಳಗಾವಿಯ ಹನುಮಾನ ನಗರ, ಸಹ್ಯಾದ್ರಿ ನಗರ, ಕುಮಾರಸ್ವಾಮಿ ಲೇಔಟ್ ಸೇರಿದಂತೆ ಇನ್ನಿತರ ಪ್ರದೇಶದಲ್ಲಿ ಅಭೂತ ಪೂರ್ವ ಬೆಂಬಲ ದೊರೆಯಿತು.

## ಮಹಾಸಭೆಯ ಅಧ್ಯಕ್ಷರು ನೂತನವಾಗಿ ನೇಮಕ ಮಾಡಿರುವ ಪದಾಧಿಕಾರಿಗಳು.

**ಶ್ರೀ ರಂಗನಾಥ ದೇಸಾಯಿ, ಕಲ್ಬುರ್ಗಿ**

ರಾಜ್ಯ ಉಪಾಧ್ಯಕ್ಷರು

**ಶ್ರೀಮತಿ ಶುಭಮಂಗಳ ಸುನೀಲ್**

ಸಂಚಾಲಕಿ, ಬೆಂಗಳೂರು ದಕ್ಷಿಣ ಕ್ಷೇತ್ರದ ಮಹಿಳಾ ವಿಭಾಗ

**ಶಿಕ್ಷಣ ಹಾಗೂ ವಿದ್ಯಾರ್ಥಿ ಸೇವಾ ಸಮಿತಿ**

**ಶ್ರೀ ಹೆಚ್.ಎಂ. ಹಿರಿಯಣ್ಣಯ್ಯ**, ಸಂಚಾಲಕರು

**ಶ್ರೀ ಭಾರತೀಶರಾವ್**, ಸದಸ್ಯರು

**ಶ್ರೀ ಗಿರೀಶ್ ಎಸ್.**, ಸದಸ್ಯರು

**ಶ್ರೀ ಗಿರೀಶ್‌ಕುಮಾರ್ ಎನ್.ಎಸ್.**, ಸದಸ್ಯರು

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆಯು ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

# ಋಷಿಗಳ ಸಂದೇಶ

ಎಸ್. ಶ್ರೀಧರಮೂರ್ತಿ
(ಲೇಖಕರು ಮಹಾಸಭಾ ಪ್ರಧಾನ ಕಾರ್ಯದರ್ಶಿಗಳು)

ಉಪನಿಷತ್ತುಗಳು ಕೆಲವು ಆಖ್ಯಾಯಿಕೆಗಳ ಮೂಲಕ ಮನುಜಕುಲಕ್ಕೆ ದಿವ್ಯ ಸಂದೇಶಗಳನ್ನು ನೀಡಿವೆ.

ಅವುಗಳಲ್ಲಿ ಬೃಹದಾರಣ್ಯಕ ಉಪನಿಷತ್ತಿನ ಒಂದು ಸಂದೇಶ ನೆನಪಿಸಿಕೊಳ್ಳೋಣ.

ದೇವತೆಗಳು, ಮನುಷ್ಯರು, ರಾಕ್ಷಸರು ತಮ್ಮ ತಂದೆಯಾದ ಪ್ರಜಾಪತಿಯ ಬಳಿ ಬ್ರಹ್ಮಚರ್ಯವ್ರತದಿಂದ ವಾಸ ಮಾಡಿದ ನಂತರ ತಮಗೆ ಉಪದೇಶಿಸಬೇಕೆಂದು ಬೇಡಿದರು. ತಂದೆಯು ಈ ಮೂವರನ್ನೂ ಪ್ರತ್ಯೇಕವಾಗಿ ಕರೆದು 'ದ' ಎಂದು ಉಪದೇಶಿಸಿದನು. ನಂತರ ಈ ಮೂವರೂ 'ದ' ಎಂಬ ಮಂತ್ರದ ಮೇಲೆ ಧ್ಯಾನಿಸಿದರು.

ದೇವತೆಗಳಿಗೆ 'ದ' ಎಂದರೆ 'ದಮಯತ್' ಎಂದರೆ 'ನಿಯಂತ್ರಿಸಿ' ಎಂಬ ಬೋಧೆಯಾಯಿತು. ದೇವತೆಗಳು ಸಹಜ ವಾಗಿ ಭೋಗ ಜೀವಿಗಳು ಅವರು ತಾವು ಭೋಗಲಾಲಸೆಯಲ್ಲೆ ಮುಳಗಬಾರದೆಂದು ಈ ಎಚ್ಚರಿಕೆ ನೀಡಿದ್ದಾನೆಂದು ಅರ್ಥೈಸಿದರು.

ಮನುಷ್ಯರು 'ದ' ಎಂಬ ಉಪದೇಶ ವಾಕ್ಯದ ಮೇಲೆ ಧ್ಯಾನಿಸಲು, ಅವರಿಗೆ 'ದತ್ತವಾನ್' ಎಂದರೆ 'ದಾನವಂತರಾಗಿ' ಎಂಬ ಸ್ಫುರಣೆಯಾಯಿತು. ಮನುಷ್ಯರು ಸ್ವಭಾವತಃ ಸ್ವಾರ್ಥಪರರು. ಯಾವುದೇ ವಿಷಯವಾಗಲಿ, ವಸ್ತುವಾಗಲೀ ಅವರು ಎಲ್ಲರೊಡನೆ ಹಂಚಿಕೊಂಡು ಬಾಳುವ ಪ್ರವೃತ್ತಿಯವರಲ್ಲ (ತಮಗೆ ಮತ್ತು ತಮ್ಮವರಿಗೆ ಬಿಟ್ಟು). ಅದರಿಂದ ಅವರಿಗೆ ಗುರುವಿನ ಉಪದೇಶ ನಿಮ್ಮಲ್ಲಿರುವುದನ್ನು ಹಂಚಿಕೊಂಡು ಬಾಳಿ ಎಂದರೆ ದಾನ ಪ್ರವೃತ್ತಿ ಹೆಚ್ಚಿಸಿಕೊಳ್ಳಿ ಎಂದು ಮನವರಿಕೆಯಾಯಿತು.

ರಾಕ್ಷಸರು ಅಥವಾ ದಾನವರು 'ದ' ಎಂಬ ಮಂತ್ರದ ಮೇಲೆ ಧ್ಯಾನಿಸಲು ಅವರಿಗೆ 'ದಯಾವಾನ್' ಎಂದರೆ ದಯಾವಂತರಾಗಿ ಎಂದ ಗೋಚರವಾಯಿತು.

ರಾಕ್ಷಸರು ಸ್ವಭಾವತಃ ಕ್ರೂರಿಗಳು ಸದಾ ಇತರರ ಕೇಡಿನಲ್ಲೇ ಆನಂದಿಸುವರು. ಅದರಿಂದ ಅವರು 'ದಯೆಯುಳ್ಳವರಾಗಿ' ಎಂದು ಉಪದೇಶವನ್ನು ಅರ್ಥೈಸಿಕೊಂಡರು.

**ಈ ಆಖ್ಯಾಯಿಕೆ ಸಂದೇಶ:**

1. ಗುರು ಒಬ್ಬನೇ ಆದರೂ ಉಪದೇಶಿಸಿದ ಮಂತ್ರ. ಒಂದೇ ಆದರೂ, ಒಂದೇ ತಂದೆಯ ಮಕ್ಕಳಾದರೂ ಅವರವರ ಗುಣ ಸ್ವಭಾವಕ್ಕೆ ತಕ್ಕಂತೆ ಗುರು ಉಪದೇಶದ ಸತ್ಯ ವ್ಯಕ್ತವಾಗುತ್ತದೆ.

2. ಈ ದೇವತೆಗಳು, ಮನುಷ್ಯರು, ರಾಕ್ಷಸರು ಬೇರೆಬೇರೆ ಎಂದು ತಿಳಿಯದೇ ನಮ್ಮದೇ ಸ್ವಭಾವಸಿದ್ದ ಗುಣಗಳು ಎಂದು ಭಾವಿಸಬೇಕು.

ನಾವು ಪೂರ್ಣ ಸತ್ವಗುಣದಲ್ಲಿದ್ದಾಗ ನಮಗೆ ದೈವೀ ಗುಣಗಳ ಜ್ಞಾನವಿರುತ್ತದೆ. ಆಗ ನಾವು ಇಂದ್ರಿಯ ಲೋಲುಪರಾಗದೆ ಸದಾ ನಮ್ಮ ಚಿತ್ರವನ್ನು ಲಕ್ಷ್ಯದತ್ತ ಒಯ್ಯಬೇಕು. (ಎಂದರೆ ನಮ್ಮ ದೈವತ್ವವನ್ನು ಮರೆಯಬಾರದು).



3. ಇನ್ನು ಕೆಲವು ವೇಳೆ ನಾವು ರಜೋಗುಣದಿಂದ ಪ್ರಭಾವಿತರಾಗಿರುತ್ತೇವೆ. ಆಗ ನಾವು ಸದಾ ನಮ್ಮ ಸುಖ ಚಿಂತನೆ ಯಲ್ಲೇ ಮಗ್ನರಾಗುತ್ತೇವೆ. ಇತರರ ದುಃಖಕ್ಕೆ ಸ್ಪಂದನೆ ಅಥವಾ ಇತರರೊಂಡನೆ ಹಂಚಿಕೊಂಡು ಬಾಳಲು ಸಿದ್ಧರಿರುವುದಿಲ್ಲ. ಈ ನಮ್ಮಲ್ಲಿರುವ ವಸ್ತುಗಳನ್ನಾಗಲೀ, ಜ್ಞಾನವನ್ನಾಗಲೀ ಅಥವ ಸಮಯವನ್ನಾಗಲೀ ಇತರರ ಅವಶ್ಯಕತೆಗೆ ತಕ್ಕಂತೆ ಎಲ್ಲವನ್ನೂ ಹಂಚಿಕೊಂಡು ಬಾಳಿ ಎಂದು ಈ ಉಪದೇಶ ಸಾರುತ್ತದೆ.

ಇದನ್ನು "ಪ್ರಸ್ತುತ ಸಮಾಜದ ಸಾಮಾಜಿಕ ಹೊಣೆಗಾರಿಕೆ" ಅಥವಾ (Corporate Social Responsibility) ಎಂದು ಅರ್ಥೈಸ ಬಹುದು. ಅಥವಾ ಎಲ್ಲಾ ಜೀವಿಗಳಲ್ಲೂ ಭಗವಂತನೇ ಇದ್ದಾನೆ ಎಂಬ ಭಾವನೆಯಿಂದ ಸೇವಾ ಮನೋಭಾವ ಬೆಳೆಸಿಕೊಳ್ಳ ಬಹುದು.

4. ಕೆಲವು ವೇಳೆ ನಾವು 'ತಮೋಗುಣ' ದಿಂದ ಪ್ರೇರಿತರಾದಾಗ ಎಂದರೆ ಕಾಮ, ಕ್ರೋಧ, ಲೋಭ .. . . ಮುಂತಾದವುಗಳಿಂದ ಪ್ರೇರಿತರಾಗಿ ಕ್ರೂರತನ ನಮ್ಮಲ್ಲಿ ಎದ್ದು ಕುಣಿಯುತ್ತಿರುತ್ತದೆ. ನಾವು ಮನುಷ್ಯರಾಗಿ ಇತರರೊಡನೆ ಕಾಯಾ, ವಾಚಾ, ಮನಸಾ ಕ್ರೂರತೆ ಯಿಂದ ವ್ಯವಹರಿಸಬಾರದು, ಮನುಷ್ಯರಾಗಿ ಕ್ರೂರಿಗಳಾಗಬೇಡಿ 'ದಯಾಗುಣ' ಸಂಪಾದಿಸಿ ಎಂದು ಉಪದೇಶದ ಸಾರ. ದಯೆ ಎಂಬುದು ಒಂದು ವಿಶಿಷ್ಠ ಗುಣ. ಈ ರೀತಿ ನಾವು ಈ ಜಗತ್ತಿನಲ್ಲಿ ಜೀವಿಸುವಾಗ, ದಾಂತರಾಗಿ, ದಾನವಂತರಾಗಿ, ದಯವಂತರಾಗಿ ಎಲ್ಲರೊಡನೆ ಶಾಂತಿಯಿಂದ ಕೂಡಿಬಾಳಬೇಕೆಂಬುದೇ ಈ ಆಯ್ಕೆಯ ಸಾರ.

ಈ ಸತ್ಯವನ್ನು ನಾವು ಮರೆಯದಿರಲೆಂದು ಪ್ರಕೃತಿ ಮಾತೆಯು ಮಳೆಗಾಲದ ಗುಡುಗಿನ ಶಬ್ದ ದ..ದ..ದ... ಮೂಲಕ ದಾಂತರಾಗಿ, ದಾನವಂತರಾಗಿ, ದಯಾವಂತರಾಗಿ ಎಂದು ನೆನಪಿಸುತ್ತಲೇ ಇದ್ದಾಳೆ.

# ಸಾಧಕರಿಗೆ ಡಾ॥ ಬಿ.ಎನ್.ವಿ. ಜ್ಯೋತಿರತ್ನ ಪ್ರಶಸ್ತಿ ಪ್ರದಾನ



"ಡಾ॥ ಬಿ.ಎನ್.ವಿ. ಜ್ಯೋತಿ ರತ್ನ ಪ್ರಶಸ್ತಿ" ರಾಜ್ಯದ ಪ್ರಶಸ್ತಿಯಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ, ಜ್ಯೋತಿ ಸಮೂಹ ಸಂಸ್ಥೆಗಳ ಸಂಸ್ಥಾಪಕರಾಗಿ, ಹಲವಾರು ಧಾರ್ಮಿಕ ಸಂಸ್ಥೆಗಳಿಗೆ ಸಹಾಯ ಮಾಡಿ ವಿಪ್ರ ಸಮುದಾಯದ ಏಳಿಗೆಗಾಗಿ ತಮ್ಮ ಜೀವನವನ್ನು ಸಮರ್ಪಿಸಿದ ಮಹಾನ್ ವ್ಯಕ್ತಿ ಧಾರ್ಮಿಕ ಪ್ರವರ ಡಾ॥ ಬಿ. ಎನ್. ವಿ. ಸುಬ್ರಹ್ಮಣ್ಯ ಅವರು ಎಂದು ಮಾಜಿ ಸಚಿವರಾದ ಸುರೇಶ್ ಕುಮಾರ್ ಅವರು ಹೇಳಿದರು, ಕೃಷಿ ಕ್ಷೇತ್ರದಲ್ಲಿ ಸಾಧಕರಾದ ಕೃಷ್ಣ ಅನಂತರಾವ್ ಕೆಂಭಾವಿ ಹಾಗೂ ಕಲೆಯಲ್ಲಿ ಅಕ್ಷಯ ಜಲಿಹಾಲ್ ಅವರಿಗೆ ರಾಜ್ಯ ಮಟ್ಟದ ಡಾ॥ ಬಿ.ಎನ್.ವಿ. ಜ್ಯೋತಿ ರತ್ನ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು, ಜ್ಯೋತಿ ಚಾರಿಟಬಲ್ ಟ್ರಸ್ಟ್ ಹಾಗೂ ಧಾರ್ಮಿಕ ಪ್ರವರ ಡಾ।। ಬಿ.ಎನ್.ವಿ. ಸುಬ್ರಹ್ಮಣ್ಯ ಅಭಿಮಾನಿಗಳ ಬಳಗದವರು ಯಾವುದೇ ರೀತಿಯಲ್ಲಿ ಅರ್ಜಿ ಸ್ವೀಕರಿಸದೆ ಸಾಧಕರನ್ನು ರಾಜ್ಯಾದ್ಯಂತ ಸ್ವತಃ ಹುಡುಕಿ ಕಳೆದ ಐದು ವರ್ಷದಿಂದ ಪ್ರಶಸ್ತಿಯನ್ನು ಕೊಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿ ಅವರ ಜೊತೆಯಲ್ಲಿ ಇದ್ದ ಒಡನಾಟವನ್ನು ಸ್ಮರಿಸಿ ಬಿ.ಎನ್.ವಿ ಯವರು ಕಡು ಬಡತನದಿಂದ ಬಂದು ಕೈಗಾರಿಕೆ, ಶಿಕ್ಷಣ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತವಾದ ಸಾಧನೆ ಮಾಡಿದ್ದಾರೆ, ಸಾವಿರಾರು ಜನರ ಜೀವನಕ್ಕೆ ದಾರಿದೀಪ ಆಗಿದ್ದಾರೆ, ಅವರು ಪ್ರಾತಃಸ್ಮರಣೀಯರು. ಅವರು ಸಮಾಜಕ್ಕೆ ಸರ್ವವನ್ನು ಸಮರ್ಪಿಸಿದ ವ್ಯಕ್ತಿ, ಬಿ.ಎನ್.ವಿ. ಅಂತಹ ವ್ಯಕ್ತಿ ಮತ್ತೆ ಸಮಾಜಕ್ಕೆ ದುರ್ಲಭ ಎಂದು ತಿಳಿಸಿದರು, ಅತಿಥಿಯಾಗಿ ಭಾಗವಹಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ರಾಜ್ಯಾದ್ಯಂತ ಇವತ್ತು ಸಹ ಡಾ॥ ಬಿ. ಎನ್. ವಿ. ಸುಬ್ರಹ್ಮಣ್ಯ ಅವರ ಸೇವೆಯನ್ನು ಸದಾ ಸ್ಮರಿಸಿಕೊಳ್ಳುತ್ತಾರೆ, ಅವರ ಬಗ್ಗೆ ಅಪಾರವಾದ ಗೌರವ, ಅಭಿಮಾನ ಅವರು ಇಲ್ಲದಿದ್ದರೂ ಸಹ ಇರುವುದನ್ನು ನೋಡಿದರೆ ಅವರು ಸಮಾಜಕ್ಕೆ ಮಾಡಿರುವ ಸೇವೆ ತಿಳಿಯುತ್ತದೆ ಎಂದು ತಿಳಿಸಿ ಅವರು ಕಂಡ ಕನಸನ್ನು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಮಾಡುವೆ ಹಾಗೂ ರಾಜ್ಯಾದ್ಯಂತ ಬ್ರಾಹ್ಮಣ ಸಂಘಟನೆ ಮಾಡಿ ಬಿ.ಎನ್.ವಿ. ಯವರು ಮಾಡಿದ್ದ ಕೆಲಸವನ್ನು ಮುಂದುವರೆಸುವೆ ಎಂದು ತಿಳಿಸಿದರು. ಪ್ರಶಸ್ತಿಗಳಿಗೆ ಮೌಲ್ಯ ಬರುವುದು ಯಾವತ್ತೂ ಸಹ ಪ್ರಶಸ್ತಿಯನ್ನು ಪಡೆಯದ ಸಾಧಕರಿಗೆ ಗೌರವ ನೀಡಿದಾಗ ಮಾತ್ರ ಅಂತಹ ಉನ್ನತ ಪ್ರಶಸ್ತಿ ಬಿ.ಎನ್.ವಿ. ಜ್ಯೋರತ್ನ ಪುರಸ್ಕಾರ ಆಗಿದೆ ಎಂದ ಹೇಳಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಟ್ರಸ್ಟಿ ಎಂ. ನರಸಿಂಹನ್ ಮಾತನಾಡಿ ಪ್ರತಿ ವರ್ಷದಂತೆ ಪ್ರಶಸ್ತಿಯನ್ನು ಅರ್ಹ ಸಾಧಕರಿಗೆ ನೀಡುತ್ತಿದ್ದು ಪ್ರಚಾರ ಇಲ್ಲದೆ ಸಾಧನೆ ಮಾಡುವವರನ್ನು ಸ್ವತಃ ಸಂಸ್ಥೆ ಹುಡುಕಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ತಿಳಿಸಿ ಬಿ.ಎನ್.ವಿ. ಯವರು ಜೀವಂತ ಇಲ್ಲದಾಗೂ ಸಹ ಇಷ್ಟೊಂದು ಜನ ಬಂದು ಸಹಕರಿಸುತ್ತಿರುವುದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು, ಕಾರ್ಯಕ್ರಮದಲ್ಲಿ ಜ್ಯೋತಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಸೀತಾ ಸುಬ್ರಹ್ಮಣ್ಯ, ಪ್ರಾಸ್ತಾವಿಕ ನುಡಿಯನ್ನು ಪ್ರಾಂಶುಪಾಲರಾದ ಶ್ರೀಮತಿ ಸುಮ ಜಗದೀಶ್ ಅವರು ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ ಡಾ॥ ಬಿ.ಎನ್.ವಿ.ಸುಬ್ರಹ್ಮಣ್ಯ ಅಭಿಮಾನಿಗಳ ಬಳಗದ ಹೆಚ್.ಎನ್. ಹಿರಿಯಣ್ಣಸ್ವಾಮಿ, ಡಿ.ಎಸ್.ಹೊನ್ನಪ್ಪ, ರಥಯಾತ್ರೆ ಸುರೇಶ್ ಹಾಗೂ ಅಭಿಮಾನಿಗಳು ಭಾಗವಹಿಸಿದ್ದರು.



ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
"ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**



ಜಾಹಿರಾತು

# ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ,
ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ
ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ,
ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

# ಕಾಶ್ಮೀರ ಹಿಂದೂ ನರಮೇಧ ಕುರಿತು ಸಂವಾದ

## ರಾಜ್ಯ ಯುವ ಘಟಕದ ಚೊಚ್ಚಲ ಕಾರ್ಯಕ್ರಮಕ್ಕೆ ಅಭೂತಪೂರ್ವ ಪ್ರತಿಸ್ಪಂದನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾಶ್ಮೀರ ನರಮೇಧದ ಕುರಿತು ಸಂವಾದ ಏರ್ಪಡಿಸುವ ಮೂಲಕ ಬ್ರಾಹ್ಮಣ ಸಮುದಾಯವು ಪೂಜೆ ಪುನಸ್ಕಾರ, ಯಜ್ಞ-ಯಾಗಗಳ ಜೊತೆಯಲ್ಲಿ ಸಾಮಾಜಿಕ, ರಾಜಕೀಯ ಕಾಳಜಿಯನ್ನು ಹೊಂದಿದೆ ಎಂಬುದಕ್ಕೆ ಕಾರ್ಯಕ್ರಮ ಸಾಕ್ಷಿಯಾಯಿತು. ಕಾಶ್ಮೀರದಲ್ಲಿ ಇಸ್ಲಾಮಿಕ್ ಭಯೋತ್ಪಾದಕರಿಂದ ಹತ್ಯೆಯಾಗಿ, ಆಸ್ತಿ, ಮನೆ ಕಳೆದುಕೊಂಡ ಹಿಂದೂ ಸಂತ್ರಸ್ತರ ಕುಟುಂಬಗಳಿಗೆ ನ್ಯಾಯ ಒದಗಿಸಲು ನ್ಯಾಯಾಂಗ ಆಯೋಗ ರಚನೆಯಾಗಬೇಕು ಎಂದು ಮಾಜಿ ಅಡ್ವೊಕೇಟ್ ಜನರಲ್, ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಒತ್ತಾಯಿಸಿದ್ದಾರೆ.

ಕಾಶ್ಮೀರಿ ಪಂಡಿತರ ನರಮೇಧದ ಕುರಿತ ಸಂವಾದ ಶೀರ್ಷಿಕೆಯಡಿ ನಗರದ ಎನ್.ಆರ್. ಕಾಲೋನಿಯ ಸಿ. ಅಶ್ವತ್ಥ್ ಸಭಾಂಗಣದಲ್ಲಿ ಬ್ರಾಹ್ಮಣ ಮಹಾಸಭಾ ಯುವ ಘಟಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂವಾದಕರಾಗಿ ಮಾತನಾಡಿದ ಅಶೋಕ ಹಾರನಹಳ್ಳಿ, ಕಾಶ್ಮೀರಿ ಪಂಡಿತರ ಸಂತ್ರಸ್ತ ಕುಟುಂಬಗಳಿಗೆ ಅನ್ಯಾಯವಾಗಿ ದಶಕಗಳು ಕಳೆದಿರುವುದರಿಂದ ನ್ಯಾಯಕ್ಕಾಗಿ ಕೋರ್ಟ್‌ಗೆ ಮೊರೆ ಹೋದರೆ, ಸಾಕ್ಷ್ಯಾಧಾರಗಳ ಕೊರತೆ ಎದುರಾಗಬಹುದಾದ ಕಾರಣದಿಂದ ಕೋರ್ಟ್ ಕೂಡ ಅರ್ಜಿಗಳನ್ನು ಪರಿಗಣಿಸದ ಉದಾಹರಣೆಗಳಿವೆ. ಆದ್ದರಿಂದ ಕೇಂದ್ರ ಸರ್ಕಾರ ಕಾಶ್ಮೀರ ನರಮೇಧದ ಸಂತ್ರಸ್ತರ ಕುಟುಂಬಗಳಿಗೆ ನ್ಯಾಯ ಒದಗಿಸಲು ನ್ಯಾಯಾಂಗ ಆಯೋಗವನ್ನು ರಚಿಸಿ, ಆಯೋಗದ ಮೂಲಕ ನ್ಯಾಯ ಒದಗಿಸುವ ಕೆಲಸ ಮಾಡಬೇಕಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಹಿಂದೂಗಳಲ್ಲಿ ಎಲ್ಲರಿಗೂ ಒಳಿತನ್ನು ಬಯಸುವ ಮನಸ್ಥಿತಿ ಇದೆ. ಕಾಶ್ಮೀರಿ ಪಂಡಿತರು ಎಲ್ಲಾ ಮತಗಳನ್ನೂ ಗೌರವಿಸುತ್ತಿದ್ದರು. ಆದರೆ ಅವರ ಮೇಲೆ ದಾಳಿ ನಡೆಸಿದವರಿಗೆ ಅವರ ಮತವಷ್ಟೇ ಶ್ರೇಷ್ಠ ಎಂದು ನಂಬಿದ್ದಾರೆ. ಆದ್ದರಿಂದ ಹಿಂದೂಗಳು ಬಹುಸಂಖ್ಯಾತರಾಗಿದ್ದರಷ್ಟೇ ಸಂವಿಧಾನ, ಕಾನೂನಿಗೆ ಗೌರವ ಸಿಗುತ್ತದೆ. ಅನ್ಯಧರ್ಮೀಯರು ಬಹುಸಂಖ್ಯಾತರಾದರೆ ಏನಾಗುತ್ತದೆ ಎಂಬುದಕ್ಕೆ ಕಾಶ್ಮೀರ ಅತ್ಯುತ್ತಮ ಉದಾಹರಣೆ ಎಂದು ಹೇಳಿದ್ದಾರೆ.

ಪತ್ರಕರ್ತ, ಕಾಶ್ಮೀರಿ ಪಂಡಿತರೂ ಆಗಿರುವ ಆರ್.ಕೆ ಮಟ್ಟು ಅವರು ಮಾತನಾಡಿ, ಶತಶತಮಾನಗಳಿಂದ ಅನ್ಯಧರ್ಮೀಯರ ದಾಳಿಯು ಕಾಶ್ಮೀರದಲ್ಲೇ ಏಕೆ ಆಯಿತು ಎನ್ನುವುದಕ್ಕೆ ಕಾರಣ ನೀಡುತ್ತಾ, ಸನಾತನ ಧರ್ಮದ ಅತ್ಯಂತ ಶ್ರೇಷ್ಠ ವಿದ್ಯಾ ಕೇಂದ್ರದ ಶಾರದೆಯ ಕ್ಷೇತ್ರವನ್ನು ನಾಶ ಮಾಡಿದರೆ ಸನಾತ ಧರ್ಮದ ಬುಡಕ್ಕೆ ಕೊಡಲಿ ಏಟು ನೀಡುವ ಉದ್ದೇಶದಿಂದಲೇ ಎಂಬುದನ್ನು ಮಾರ್ಮಿಕವಾಗಿ ನುಡಿದರು. ಕಾಶ್ಮೀರೀ ಫೈಲ್ಸ್ ಚಿತ್ರ ಉಗ್ರವಾದದ ಕಾರಣಕ್ಕಾಗಿ ತಮ್ಮ ನೆಲೆಗಳನ್ನು ಕಳೆದುಕೊಂಡು 5 ಲಕ್ಷ ಪಂಡಿತರ ಕಥೆಯಾಗಿದೆ. ಹಲವು ಮಂದಿ ಕಾಶ್ಮೀರಿ ಪಂಡಿತರದ್ದು ವಲಸೆ ಎನ್ನುತ್ತಾರೆ. ವಲಸೆ ಎನ್ನುವುದು ಉದ್ಯೋಗಕ್ಕಾಗಿಯೋ ಅಥವಾ ಬೇರೆ ಇನ್ನು ಯಾವುದೋ ಕಾರಣಕ್ಕೋ ಊರಿಂದ ಮತ್ತೊಂದು ಊರಿಗೆ ಹೋಗುವುದಕ್ಕೆ ಹೇಳಲಾಗುತ್ತದೆ. ಆದರೆ ಕಾಶ್ಮೀರಿ ಪಂಡಿತರಿಗೆ ಕಾಶ್ಮೀರದಲ್ಲಿ 16 ಕೊಠಡಿಗಳ ಮನೆಗಳಿದ್ದವು, ಆಸ್ತಿ ಇತ್ತು. ಜೀವನೋಪಾಯಕ್ಕೆ ಸಮಸ್ಯೆ ಇರಲಿಲ್ಲ. ಆದರೂ ಜನನ ಪ್ರಮಾಣಪತ್ರ, ಜಾತಕಗಳನ್ನೂ ಇದ್ದಲ್ಲಿಯೇ ಬಿಟ್ಟು, ಉಟ್ಟ ಬಟ್ಟೆಯಲ್ಲಿ ಹೊರಡುವುದಕ್ಕೆ ಅವರಿಗೇನು ಹುಚ್ಚೇ? ಎಂದು ಪ್ರಶ್ನಿಸಿದ್ದಾರೆ. ಕಾಶ್ಮೀರಿ ಪಂಡಿತರಿಗೆ ತಮ್ಮ ನೆಲದಲ್ಲಿ ಸಹಸ್ರಾರು ವರ್ಷಗಳ ಇತಿಹಾಸವಿದೆ. ಅವರದ್ದು ಆಗಿದ್ದು ವಲಸೆಯಲ್ಲ ಕಾಶ್ಮೀರಿ ಪಂಡಿತರ ನರಮೇಧ, ಪಂಡಿತರಿಗೆ ಶೀಘ್ರ ನ್ಯಾಯ ಸಿಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಚಿತ್ರನಟಿ ಮಾಳವಿಕಾ ಅವಿನಾಶ್, ಮಾಜಿ ಐಪಿಎಸ್ ಅಧಿಕಾರಿ ಗೋಪಾಲ್ ಹೊಸೂರು, ಬ್ರಾಹ್ಮಣ ಮಹಾಸಭಾದ ಕಾರ್ಯದರ್ಶಿ ಕಾರ್ತಿಕ್ ಬಾಪಟ್, ಸಂಚಾಲಕ ಸಂದೀಪ್ ರವಿ ಉಪಸ್ಥಿತರಿದ್ದರು. ಗೌರವ ಅತಿಥಿಗಳಾಗಿ ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ, ಮಾಜಿ ಮಹಾಪೌರರಾದ ಕಟ್ಟೆ ಸತ್ಯ, ನಿವೃತ್ತ ಪೊಲೀಸ್ ಅಧಿಕಾರಿ ಟೈಗರ್ ಬಿದ್ದಂಡ ಅಶೋಕ್ ಕುಮಾರ್ ಸೇರಿದಂತೆ ಹಲವರು ಭಾಗಿಯಾಗಿದ್ದರು.



# ಅದ್ವೈತಮಕರಂದ

-ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

ಹಿಂದಿನ ಸಂಚಿಕೆಯಿಂದ. . . . .

**ಸ್ವರೂಪಮೇವ ಮೇ ಜ್ಞಾನಂ ನ ಗುಣಃ ಸ ಗುಣೋ ಯದಿ।**

**ಅನಾತ್ಮತ್ವಮಸತ್ವಂ ವಾ ಜ್ಞೇಯಾಜ್ಞೇಯತ್ವಯೋಃ ಪತೇತ್॥23॥**

**ಅನುವಾದ :** ಜ್ಞಾನವು ನನ್ನ ಸ್ವರೂಪವೇ ಹೊರತು ಗುಣವಲ್ಲ. ಅದು ಗುಣವಾಗಿದ್ದರೆ, ಆತ್ಮನು ಅದರಿಂದ ತಿಳಿಯಲ್ಪಡುವವನಾಗಿದ್ದರೆ ಅನಾತ್ಮತ್ವವೂ, ತಿಳಿಯಲ್ಪಡದಿದ್ದರೆ ಅಸತ್ಯವೂ ಉಂಟಾಗುತ್ತಿತ್ತು.

**ವಿವರಣೆ:** ಜ್ಞಾನ ಅಥವಾ ಚೈತನ್ಯವು ಆತ್ಮನ ಸ್ವರೂಪವೇ ಆಗಿದೆ. ಆದರೆ ಕೆಲವರು ದಾರ್ಶನಿಕರು ಆತ್ಮನು ದ್ರವ್ಯವಾಗಿದ್ದು ಚೈತನ್ಯವು ಅದರಲ್ಲಿರುವ ಗುಣ ಎಂದು ಪ್ರತಿಪಾದಿಸುತ್ತಾರೆ. ಅವರನ್ನು ಈ ರೀತಿ ಪ್ರಶ್ನಿಸಬೇಕು: ಚೈತನ್ಯವೆಂಬ ಗುಣದಿಂದ ಆತ್ಮನು ಅರಿಯಲ್ಪಡುವನೋ? ಅಥವಾ ಇಲ್ಲವೋ?

ಆತ್ಮನು ಅರಿಯಲ್ಪಡುತ್ತಾನೆ ಎಂದರೆ ಘಟಾದಿಗಳಂತೆ ಆತ್ಮನೂ ಜಡವೆನ್ನುವ ಪ್ರಸಂಗ ಬರುವುದು. ಜಡವಾದದ್ದು ಆತ್ಮನಾಗಿರಲು ಸಾಧ್ಯವಿಲ್ಲ. ಹಾಗಾಗಿ ಆತ್ಮನು ಅನಾತ್ಮವೇ ಎನ್ನುವ ಅನಿಷ್ಟವುಂಟಾಗುತ್ತದೆ. ಯಾವುದು ಅರಿಯಲ್ಪಡುವುದೋ, ಅದು ಅನಾತ್ಮವೇ.

ಆತ್ಮನು ಅರಿಯಲ್ಪಡುವುದಿಲ್ಲ ಎಂದರೆ ಆತ್ಮನು ಇಲ್ಲವೆಂದು ಹೇಳಬೇಕಾಗುವುದು. ಯಾಕೆಂದರೆ ಅರಿಯಲ್ಪಡದ ವಸ್ತುವಿನ ಅಸ್ತಿತ್ವವನ್ನು ಅಂಗೀಕರಿಸಲು ಸಾಧ್ಯವಿಲ್ಲ. ಹಾಗಾಗಿ ಚೈತನ್ಯವೆಂಬುದು ಆತ್ಮನ ಸ್ವರೂಪವೇ ಆಗಿದ್ದು ಆತ್ಮನು ಸ್ವಯಂಪ್ರಕಾಶ ಚಿತ್‌ಸ್ವರೂಪನು ಎಂಬ ವೇದಾಂತದ ತತ್ವವೇ ಸರಿ.

**ಅಹಮೇವ ಸುಖಂ ನಾನ್ಯದನ್ಯಚ್ಚೇನ್ನೈವ ತತ್ ಸುಖಮ್।**

**ಅಮದರ್ಥಂ ನ ಹಿ ಪ್ರೇಯೋ ಮದರ್ಥಂ ನ ಸ್ವತಃ ಪ್ರಿಯಮ್॥24॥**

**ಅನುವಾದ:** ನಾನೇ ಸುಖ. ಸುಖವು ನನಗಿಂತ ಬೇರೆಯಾದ ವಸ್ತುವಲ್ಲ. ಅದು ನನಗಿಂತ ಬೇರೆಯಾಗಿದ್ದರೆ ಅದು ಸುಖವಲ್ಲ. ಯಾಕೆಂದರೆ ಆ ಬೇರೆಯ ವಸ್ತು ನನಗಾಗಿ ಇಲ್ಲದಿದ್ದರೆ ಅದು ನನಗೆ ಪ್ರಿಯವಾಗುವುದಿಲ್ಲ. ಅದು ನನಗಾಗಿ ಇದ್ದರೆ ಅದು ಸ್ವತಃ ಪ್ರಿಯವಾಗಿರುವುದಿಲ್ಲ.

**ವಿವರಣೆ:** ಸುಖವೂ ಆತ್ಮನ ಸ್ವರೂಪವೇ ಹೊರತು ಆತ್ಮನಿಗಿಂತ ಭಿನ್ನವಾದ ದ್ರವ್ಯವಾಗಲೀ, ಆತ್ಮನಲ್ಲಿರುವ ಗುಣವಾಗಲೀ ಅಲ್ಲ. ಆತ್ಮನಿಗಿಂತ ಭಿನ್ನವಾದ ಪದಾರ್ಥವು ಸುಖವಾಗಿರಲು ಸಾಧ್ಯವಿಲ್ಲ ಎನ್ನುವುದನ್ನು ಯುಕ್ತಿಯಿಂದ ಸಾಧಿಸಬಹುದು. ಯಾವುದು ಸ್ವತಃ ಪ್ರಿಯವಾಗಿದೆಯೋ,ಅದು ಸುಖ. ಬೇರೆ ವಸ್ತು ಸುಖಸಾಧನವಾದಾಗ ಪ್ರಿಯವಾಗುತ್ತದೆಯೇ ಹೊರತು ಸ್ವತಃ ಪ್ರಿಯವಲ್ಲ.

ಸುಖವೆಂಬುದು ಆತ್ಮನಿಗಿಂತ ಭಿನ್ನವಾದ ವಸ್ತುವೆಂಬವನನ್ನು ಈ ರೀತಿ ಪ್ರಶ್ನಿಸಬೇಕು: ಸುಖವು ನನಗೆ ಎಂದರೆ ಆತ್ಮಕ್ಕೆ ಸಂಬಂಧಿಸಿ ಇರುವುದೋ, ಅಥವಾ ಆತ್ಮನಿಗೆ ಸಂಬಂಧಿಸದೆ ಇರುವುದೊ? ಎಂದು. ಆತ್ಮನಿಗೆ ಸಂಬಂಧಿಸದೆ ಇರುವುದರಲ್ಲಿ ಪ್ರೀತಿಯೇ ಇರಲು ಸಾಧ್ಯವಿಲ್ಲ. ಹಾಗಾಗಿ ಅದು ಸುಖವಾಗಲಾರದು.

ಆತ್ಮನಿಗೆ ಸಂಬಂಧವಿರುವ ಪದಾರ್ಥವಾದರೆ ಅದು ಸ್ವತಃ ಪ್ರಿಯವಾಗಿರುವುದಿಲ್ಲ. ಅದು ಆತ್ಮನ ಮೇಲಿರುವ ಪ್ರೀತಿಯಿಂದಾಗಿ ಪ್ರಿಯವಾಗಿರುತ್ತದೆ. ತನಗೆ ಸಂಬದ್ಧವಾದ ಪುತ್ರಮಿತ್ರಾದಿಗಳು ಸ್ವತಃ ಪ್ರಿಯರಾಗಿರದೆ ತನಗೆ ಅನುಕೂಲವಾಗಿದ್ದಾಗ ಮಾತ್ರ ಪ್ರಿಯರಾಗಿರುತ್ತಾರೆ.

ಹಾಗಾಗಿ ಸುಖವು ಆತ್ಮನಿಗಿಂತ ಭಿನ್ನವಾದ ಪದಾರ್ಥವಾಗಿರಲು ಸಾಧ್ಯವಿಲ್ಲ. ಸ್ವತಃ ಪ್ರೀತಿವಿಷಯನಾದ ಆತ್ಮನೇ ಸುಖರೂಪನು ಅಥವಾ ಆನಂದರೂಪನು.

**ನ ಹಿ ನಾನಾಸ್ವರೂಪಂ ಸ್ಯಾದೇಕಂ ವಸ್ತು ಕದಾಚನ।**

**ತಸ್ಮಾದಖಣ್ಡ ಏವಾಸ್ಮಿ ವಿಜಹಜ್ಜಾಗತೀಂ ಭಿದಾಮ್॥25॥**

**ಅನುವಾದ :** ಒಂದೇ ಆದ ವಸ್ತು ಯಾವ ಕಾಲಕ್ಕೂ ನಾನಾಸ್ವರೂಪವಾಗುವುದಿಲ್ಲ. ಹಾಗಾಗಿ ನಾನು ಜಗತ್ತಿಗೆ ಸೇರಿದ ಭೇದವನ್ನು ಬಿಟ್ಟು ಅಖಂಡನೇ ಆಗಿರುವೆನು.

**ವಿವರಣೆ :** ಆತ್ಮನು ಸತ್, ಚಿತ್ ಮತ್ತು ಆನಂದ ಎಂಬುದು ಹಿಂದಿನ ಶ್ಲೋಕಗಳಲ್ಲಿ ಸಿದ್ಧವಾಗಿದೆ. ಸತ್, ಚಿತ್ ಮತ್ತು ಆನಂದ ಎಂಬುದು ಬೇರೆಬೇರೆಯಾದ್ದರಿಂದ ಆತ್ಮನಲ್ಲೂ ಮೂರು ಬೇರೆ ಬೇರೆಯಾದ ಸ್ವರೂಪಗಳಿರಬಹುದು. ಹಾಗಿದ್ದರೆ ಆತ್ಮನು ಏಕರೂಪನು, ಅಖಂಡನು ಎನ್ನುವ ವೇದಾಂತವಾಕ್ಯಗಳ ಗತಿಯೇನು? ಎಂದು ಯಾರಾದರೂ ಆಶಂಕಿಸಬಹುದು.

ಅದಕ್ಕೆ ಉತ್ತರ ಹೀಗಿದೆ. ಜಗತ್ತಿನ ದೃಷ್ಟಿಯಿಂದ ಸತ್ ಇತ್ಯಾದಿಗಳು ಬೇರೆಬೇರೆಯೆಂದು ಕಲ್ಪಿಸಲ್ಪಟ್ಟಿವೆ. ಆದರೆ ಪಾರಮಾರ್ಥಿಕ ದೃಷ್ಟಿಯಿಂದ ಅವು ಬೇರೆಬೇರೆಯಾಗಿರಲು ಸಾಧ್ಯವಿಲ್ಲ. ಸತ್ ಎಂದರೆ ಅಸ್ತಿತ್ವ. ಚೈತನ್ಯ ಮತ್ತು ಆನಂದ ಸತ್ತಿನಿಂದ ಭಿನ್ನವೆಂದರೆ ಅವುಗಳು ಅಸತ್ತು ಅಥವಾ ಮಿಥ್ಯೆಯೆನ್ನಬೇಕಾಗುವುದು. ಹಾಗಾಗಿ ಅವು ಸತ್ತಿಗಿಂತ ಭಿನ್ನವಾದ ಪದಾರ್ಥಗಳಲ್ಲ. ಆನಂದವೂ ಚೈತನ್ಯಕ್ಕಿಂತ ಭಿನ್ನವೆಂದರೆ ಅದು ಜಡವಾಗುವುದು. ಆದರೆ ಘಟಾದಿಗಳಂತೆ ಜಡವಾದ ವಸ್ತು ಆನಂದವಾಗಿರಲು ಸಾಧ್ಯವೇ? ಈ ರೀತಿಯ ಯುಕ್ತಿಗಳಿಂದ ಸತ್,

ಚಿತ್ ಹಾಗೂ ಆನಂದ ಎಂಬ ಶಬ್ದಗಳು ಅಖಂಡವೂ ಏಕರಸವೂ ಆದ ಒಂದೇ ತತ್ತ್ವವನ್ನು ಲಕ್ಷಿಸುತ್ತವೆ ಎಂಬುದು ಸಿದ್ಧವಾಗುತ್ತದೆ.

ಅಷ್ಟೇ ಅಲ್ಲದೆ, ನಿರಂಶವಾದ ಆತ್ಮನಲ್ಲಿ ಬೇರೆ ಬೇರೆ ಸ್ವರೂಪಗಳು ಇರಲೂ ಸಾಧ್ಯವಿಲ್ಲ. ಹಾಗಾಗಿ ಸತ್ ಇತ್ಯಾದಿ ಶಬ್ದಗಳು ತಮ್ಮ ವಾಚ್ಯಾರ್ಥಗಳಾದ ಜಗತ್ತಿನಲ್ಲಿ ಭಿನ್ನವಾಗಿ ಅರಿಯಲ್ಪಡುವ ಅಸ್ತಿತ್ವಾದಿಗಳ ಭೇದವನ್ನು ಬಿಟ್ಟು ಅಖಂಡ ಆತ್ಮನನು ಲಕ್ಷಿಸುತ್ತವೆ.

**ಪರೋಕ್ಷತಾಪರಿಚ್ಛೇದಶಾಬಲ್ಯಾಪೋಹನಿರ್ಮಲಮ್।**

**ತದಸೀತಿ ಗಿರಾ ಲಕ್ಷ್ಯಮಹಮೇಕರಸಂ ಮಹಃ॥26॥**

**ಅನುವಾದ :** ಪರೋಕ್ಷತೆ, ಪರಿಚ್ಛೇದ ಮತ್ತು ಉಪಾಧಿಗಳ ಸಂಬಂಧಗಳನ್ನು ತ್ಯಜಿಸಿರುವುದರಿಂದ ನಿರ್ಮಲವಾಗಿರುವ, "ಅದು ನೀನು" ಎನ್ನುವ ಮಾತಿನಿಂದ ಲಕ್ಷಿಸಲ್ಪಡುವ ಏಕರಸವಾದ ಜ್ಯೋತಿ ನಾನು.

**ವಿವರಣೆ :** "ತತ್ ತ್ವಮ್ ಅಸಿ" ಎನ್ನುವ ವೇದಾಂತದ ಮಹಾವಾಕ್ಯದಲ್ಲಿ "ತತ್" ಪದದ ವಾಚ್ಯಾರ್ಥ ಪರೋಕ್ಷವಾದ, ಮಾಯೆಯೆನ್ನುವ ಉಪಾಧಿಯ ಸಂಬಂಧವಿರುವ ಈಶ್ವರ. "ತ್ವಮ್" ಎನ್ನುವ ಪದದ ವಾಚ್ಯಾರ್ಥವು ದೇಹಾದಿ ಉಪಾಧಿಗಳ ಸಂಬಂಧವುಳ್ಳ, ಪರಿಚ್ಛಿನ್ನನಾದ ಅಪರೋಕ್ಷ ಜೀವಾತ್ಮ. ಈ ಎರಡು ವಾಚ್ಯಾರ್ಥಗಳಲ್ಲಿ ಪರಸ್ಪರ ವಿರುದ್ಧ ಧರ್ಮಗಳಿರುವುದರಿಂದ ವಾಕ್ಯವು ಹೊಂದುವುದಿಲ್ಲ. ಹಾಗಾಗಿ ಪರಸ್ಪರ ವಿರುದ್ಧವಾದ ಅಂಶಗಳನ್ನು ಬಿಟ್ಟುಬಿಟ್ಟರೆ ಎರಡೂ ಪದಗಳು ಶುದ್ಧವಾದ, ಅಖಂಡವಾದ ಚೈತನ್ಯವನ್ನೇ ಹೇಳುತ್ತವೆ. ಈ ಶುದ್ಧವಾದ ಚೈತನ್ಯವೇ ಪದಗಳೆರಡರ ಲಕ್ಷ್ಯಾರ್ಥವಾಗಿದ್ದು ಮಹಾವಾಕ್ಯದ ತಾತ್ಪರ್ಯಾರ್ಥವಾಗಿದೆ. ಆ ಚೈತನ್ಯವು ನನ್ನ ಸ್ವರೂಪವೇ ಆಗಿದೆ.

**ಉಪಶಾನ್ತಜಗಜ್ಜೀವಶಿಷ್ಯಾಚಾರ್ಯೇಶ್ವರಭ್ರಮಮ್।**

**ಸ್ವತಃಸಿದ್ಧಮನಾದ್ಯನ್ತಂ ಪರಿಪೂರ್ಣಮಹಂ ಮಹಃ॥27॥**

**ಅನುವಾದ :** ಯಾವುದರಲ್ಲಿ ಜಗತ್ತು, ಜೀವ, ಶಿಷ್ಯ, ಆಚಾರ್ಯ ಹಾಗೂ ಈಶ್ವರರ ಭ್ರಮೆಯು ಉಪಶಾಂತವಾಗಿದೆಯೋ, ಆ ಸ್ವತಃಸಿದ್ಧ, ಆದ್ಯಂತರಹಿತ, ಪರಿಪೂರ್ಣ ಜ್ಯೋತಿ ನಾನು.

**ವಿವರಣೆ :** ಬ್ರಹ್ಮವೆಂಬ ಚೈತನ್ಯವು ಸ್ವಯಂಪ್ರಕಾಶವಾದ್ದರಿಂದ ಸ್ವತಃಸಿದ್ಧವಾಗಿದೆ. ಎಂದರೆ ಅದನ್ನು ತಿಳಿಯಲು ಇನ್ನೊಂದು ಪ್ರಕಾಶವಾಗಲೀ, ಪ್ರಮಾಣವಾಗಲೀ ಬೇಕಾಗಿರುವುದಿಲ್ಲ. ಈ ಚೈತನ್ಯವು ಆದ್ಯಂತರಹಿತವಾಗಿದ್ದು ನಿತ್ಯವಾಗಿದೆ. ಇದು ಪರಿಪೂರ್ಣವಾಗಿದೆ; ಎಂದರೆ ಅಪರಿಚ್ಛಿನ್ನವಾಗಿದೆ. ಬ್ರಹ್ಮ ಅಪರಿಚ್ಛಿನ್ನವಾಗಿದ್ದರೆ ದ್ವೈತಕ್ಕೆ ಅವಕಾಶವೆಲ್ಲಿದೆ? ಯಾಕೆಂದರೆ ಅಪರಿಚ್ಛಿನ್ನದ ಒಳಗಾಗಲೀ ಹೊರಗಾಗಲೀ ಇನ್ನೊಂದಕ್ಕೆ ಅವಕಾಶವಿಲ್ಲ. ಹಾಗಾಗಿ ದ್ವೈತವು ಮಿಥ್ಯೆಯಾಗಿದೆ ಎಂಬುದು ಸುನಿಶ್ಚಿತ.

ಹಾಗಾದರೆ ಜ್ಞಾನಕ್ಕೆ ಆವಶ್ಯಕವಾದ ಗುರು, ಶಿಷ್ಯ, ಈಶ್ವರ, ಶಾಸ್ತ್ರ ಇತ್ಯಾದಿ ಭೇದಗಳೂ ಮಿಥ್ಯೆಯೇ ಆಗಿವೆ ಎಂದಾಗುತ್ತದೆ. ಅಷ್ಟೇ ಅಲ್ಲದೆ, ಈ ಸಾಧನಗಳಿಂದ ಉಂಟಾಗುವ ಜ್ಞಾನವೂ ಮಿಥ್ಯೆ ಯಲ್ಲವೇ? ಮಿಥ್ಯೆಯಾದ ಜ್ಞಾನವು ಮೋಕ್ಷವನ್ನು ಕೊಡಲು ಸಮರ್ಥವೇ?

ಈ ಪ್ರಶ್ನೆಗೆ ಅವಕಾಶವಿಲ್ಲ. ಯಾಕೆಂದರೆ ನಿತ್ಯವಾದ ನಮ್ಮ ಮೋಕ್ಷಸ್ವರೂಪವನ್ನು ಆವರಿಸುವ ಅಜ್ಞಾನವೂ ಮಿಥ್ಯೆಯೇ. ಹೇಗೆ ಕನಸಿನಲ್ಲಿ ಕಾಣಿಸುವ ಅಗ್ನಿಯನ್ನು ಶಾಂತಗೊಳಿಸಲು ಕನಸಿನ ಜಲವೇ ಸಾಕಾಗುವುದೋ, ಹಾಗೆಯೇ ಮಿಥ್ಯೆಯಾದ ಅಜ್ಞಾನವನ್ನು ನೀಗಿಸಲು ಸತ್ಯವಾದ ಜ್ಞಾನ ಬೇಕಾಗಿಲ್ಲ. ಮಿಥ್ಯೆಯಾದ ಜ್ಞಾನವೇ ಸಾಕಾಗುವುದು.

ಅಜ್ಞಾನವಿರುವವರೆಗೆ ಸತ್ಯವೆಂದು ತಿಳಿಯಲ್ಪಡುವ ಗುರುಶಿಷ್ಯಾದಿ ಭೇದಗಳ ಮೂಲಕವೇ ಜ್ಞಾನವನ್ನು ಪಡೆಯ ಬೇಕಾಗುತ್ತದೆ. ಜ್ಞಾನವಾದೊಡನೆ ಇದೆಲ್ಲವೂ ಮಿಥ್ಯೆ, ಅಖಂಡವಾದ ಬ್ರಹ್ಮವೊಂದೇ ಸತ್ಯ. ಅದು ನನ್ನ ಯಥಾರ್ಥ ಸ್ವರೂಪ ಎಂದು ಮನವರಿಕೆಯಾಗುತ್ತದೆ. ಆಗಲೇ ಜ್ಞಾನದ ಫಲವಾದ ಮುಕ್ತಿಯೂ ದೊರಕುತ್ತದೆ.

**ಲಕ್ಷ್ಮೀಧರಕವೇಃ ಸೂಕ್ತಿಶರದಮ್ಭೋಜಸಂಭೃತಃ।**

**ಅದ್ವೈತಮಕರನ್ದೋಽಯಂವಿದ್ವದ್ಭೃಙ್ಗೈರ್ನಿಪೀಯತಾಮ್॥28॥**

**ಅನುವಾದ :** ಲಕ್ಷ್ಮೀಧರಕವಿಯ ಸೂಕ್ತಿಗಳೆಂಬ ಶರತ್ಕಾಲದ ತಾವರೆಗಳಲ್ಲಿ ಉಂಟಾದ ಈ ಅದ್ವೈತಮಕರಂದವು ವಿದ್ವಾಂಸರೆಂಬ ಭ್ರಮರಗಳಿಂದ ಕುಡಿಯಲ್ಪಡಲಿ.

**ವಿವರಣೆ :** ಅದ್ವೈತವಾದ ಬ್ರಹ್ಮವೇ ಮಕರಂದದಂತೆ ಆನಂದ ಸ್ವರೂಪವಾದ್ದರಿಂದ 'ಮಕರಂದ' ಎಂದು ಕರೆಯಲ್ಪಟ್ಟಿದೆ. ಆದ್ದರಿಂದ ಅದನ್ನು ತಿಳಿಸುವ ಈ ಗ್ರಂಥವೂ'ಅದ್ವೈತಮಕರಂದ' ಎನಿಸಿಕೊಂಡಿದೆ. ಶ್ರೀಲಕ್ಷ್ಮೀಧರಕವಿಯ ಈ ಗ್ರಂಥವು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾದಲೆಂಬ ಪ್ರಾರ್ಥನೆಯೊಂದಿಗೆ ಮುಕ್ತಾಯ ವಾಗುತ್ತದೆ.

**ಶ್ರೀ ಆದಿಶಂಕರು ಅಜರಾಮರಣೆಗಳು. ಅವರ ದವಳಕೀರ್ತಿ ವಿಶ್ವವ್ಯಾಪಕವಾದದ್ದು. ಪರಿವ್ರಾಜಕಾಚಾರ್ಯರಾಗಿ ಭಾರತದಾದ್ಯಂತ ಸಂಚಾರಮಾಡಿ, ಕೇದಾರನಾಥದ ಸರ್ವಜ್ಞಪೀಠಾರೋಹಣಮಾಡಿ, ಭಾರತದ ನಾಲ್ಕು ದಿಕ್ಕುಗಳಲ್ಲಿಯೂ ಚತುರಾಮ್ನಾಯ ಪೀಠಗಳನ್ನು ಸ್ಥಾಪಿಸಿ, ಪೀಠಾಧಿಪತಿಗಳನ್ನು ನೇಮಿಸಿದರು. ಶಂಕರ ಭಗವತ್ಪಾದಾಚಾರ್ಯರು ಬೋಧಿಸಿದ ತತ್ವಗಳಲ್ಲಿ ನಾಸ್ತಿಕರನ್ನು ಆಸ್ತಿಕರನ್ನಾಗಿಯೂ, ಆಸ್ತಿಕರನ್ನು ಭಕ್ತರನ್ನಾಗಿಯೂ, ಭಕ್ತರನ್ನು ಸಾಧಕರನ್ನಾಗಿಯೂ, ಸಾಧಕರನ್ನು ಸಿದ್ಧರನ್ನಾಗಿಯೂ, ಪರಿವರ್ತನೆ ಗೊಳಿಸಬಲ್ಲ ದಿವ್ಯ ಶಕ್ತಿ ಅಡಕವಾಗಿದೆ.**

ಜಾಹಿರಾತು

# ಶ್ರೀ ಗುರು ರಾಘವೇಂದ್ರ ಜ್ಯೋತಿಷ್ಯ ಕೇಂದ್ರ



ರಾಷ್ಟ್ರೀಯ ಮಟ್ಟದಲ್ಲಿ ಜನ ಮನ್ನಣೆ ಪಡೆದಿರುವ ತ್ರಿಕಾಲ ಜ್ಞಾನಿಗಳು
ಜ್ಯೋತಿಷ್ಯ ಶಿರೋಮಣಿ ಕೇರಳದ ಸರ್ವಸಿದ್ದಿ ಸಾಧಕ ವೇದಬ್ರಹ್ಮ

## ಶ್ರೀ ಶ್ರೀ ವಿಜಯೇಂದ್ರ ಗುರೂಜಿ

ಮಂತ್ರಾಲಯ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಮೂಲ ಬೃಂದಾವನದ ಆರಾಧಕರು

ಜಾತಕ, ಹಸ್ತ, ಫೋಟೋ, ಮುಖಲಕ್ಷಣ, ಗೋಚಾರಫಲ, ಪಂಚಪಕ್ಷಿ ಶಾಸ್ತ್ರ, ತಾಳೆಗರಿ ಶಾಸ್ತ್ರ, ಅಂಜನ ಶಾಸ್ತ್ರ, ದೈವಪ್ರಶ್ನೆ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿತಿಳಿಸುತ್ತಾರೆ. ಶ್ರೀ ಗುರುರಾಯರ ಪಾದಸಾಕ್ಷಿ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಧರ್ಮನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರವನ್ನು ಮಾಡಿಕೊಡುತ್ತಾರೆ.

ಮಕ್ಕಳ ಅಸಭ್ಯವರ್ತನೆ, ವಿವಾಹ ವಿಳಂಬ, ಡೈವರ್ಸ್, ಸಂತಾನ ಫಲ, ಉದ್ಯೋಗ, ವ್ಯಾಪಾರದಲ್ಲಿ ನಷ್ಟ ಹಣಕಾಸಿನ ಸಮಸ್ಯೆ, ದಾಂಪತ್ಯ ಕಲಹ, ಆರೋಗ್ಯ ಸಮಸ್ಯೆ, ಪ್ರೇಮಸಂಬಂಧ, ಮಾನಸಿಕ ಕಿರಿಕಿರಿ, ಶತ್ರುಗಳಿಂದ ತೊಂದರೆ, ಅತ್ತೆ–ಸೊಸೆ ಕಿರಿಕಿರಿ, ಜಾಗ–ಜಮೀನು ಸಮಸ್ಯೆ, ಪ್ರೇತ ಬಾಧೆ, ದುಷ್ಟಶಕ್ತಿ ತೊಂದರೆ, ನಿಮ್ಮ ಜೀವನದ ಸರ್ವ ದಾರಿದ್ರ ಸಮಸ್ಯೆಗಳಿಂದ ಮುಕ್ತಿ ಹೊಂದಲು ನಿಮಗಿದು ಸುವರ್ಣಾವಕಾಶ

**ಅತಿ ಶೀಘ್ರ ವಿವಾಹ ಪ್ರಾಪ್ತಿಯಾಗಲು ಶಿವ ಪಾರ್ವತಿ ಸ್ವಯಂವರ ಕವಚವನ್ನು ಸಿದ್ಧಿ ಮಾಡಿಕೊಡುತ್ತಾರೆ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ.**
**ದೂರದ ಊರಿನವರಿಗೆ ಫೋನ್ ಮೂಲಕ ಪರಿಹಾರ ತಿಳಿಸುತ್ತಾರೆ**

## ಮೊ. : 9945222228

ಬರುವ ಮೊದಲು ಭೇಟಿಯ ಸಮಯ ಖಚಿತಪಡಿಸಿಕೊಂಡು ಬನ್ನಿ
ನಿಮ್ಮ ಭವಿಷ್ಯದ ಕನಸು ನನಸಾಗಲು ಇಂದೇ ಸಂದರ್ಶಿಸಿ.
ಸಮಯ : ಬೆಳಗ್ಗೆ 10.45 ರಿಂದ 2.30, 3.00 ರಿಂದ 9.00ರವರೆಗೆ
ನಂ.157, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ಸ್ ಎದುರು, ಬಸವನಗುಡಿ, ಬೆಂಗಳೂರು–4.

# ಸತ್ಯನಾರಾಯಣ ಸೋಗಾಲ್

## ಕನ್ನಡಿಗ ಬ್ರಾಹ್ಮಣನ ಹೆಸರಲ್ಲೊಂದಿದೆ ಕಡಲ್ಗಾಲುವೆ

ಗುಜರಾತ್‌ನ ಖಚ್ ಜಿಲ್ಲೆಯ ಅರಬ್ಬೀ ಸಮುದ್ರದ ಕಾಂಡ್ಲಾ ಮಹಾ ಬಂದರಿಗೆ ಹಡಗುಗಳು ಬಂದು ಸೇರಲು ಅನುಕೂಲವಾಗುವಂತೆ 12ಕಿ.ಮಿ. ಉದ್ದದ ಕಾಲುವೆಯಿದೆ. ಅದಕ್ಕೆ ಸೋಗಾಲ್ ಕೆನಾಲ್ ಎಂದು ಹೆಸರು. ಸೂಯಜ್ ಕಾಲುವೆ, ಪನಾಮ ಕಾಲುವೆಗಳಂತೆ ಅಂತಾರಾಷ್ಟ್ರೀಯ ನಾವಿಕರ ನಕ್ಷೆಗಳಲ್ಲಿ ಸೋಗಲ್ ಕಾಲುವೆ ಕೂಡ ಪ್ರಮುಖವಾಗಿ ನಮೂದಿಸಲ್ಪಟ್ಟಿದೆ. ಈ ಸೋಗಾಲ್ ಎಂದರೆ ಏನು ಎಂದು ಪರಿಶೀಲಿಸಿದಾಗ ಗೊತ್ತಾಗಿದ್ದು ಅದು ಅಪ್ಪಟ ಕನ್ನಡಿಗರೂ ಹೊಯ್ಸಳ ಕರ್ನಾಟಕದವರೂ ಆದ ಸತ್ಯನಾರಾಯಣ ಸೋಗಾಲ್ ಎಂಬ ಒಬ್ಬ ಮಹನೀಯರ ಹೆಸರೆಂಬುದು. ಬ್ರಾಹ್ಮಣ ಸಮುದಾಯವಷ್ಟೇ ಅಲ್ಲದೆ ಇಡೀ ಕನ್ನಡ ಜನತೆಯೇ ಹೆಮ್ಮೆ ಪಡುವಂತಹ ಮಹತ್ವದ ಸಾಧನೆ ಮಾಡಿರುವ ಇವರ ಬಗ್ಗೆ ತಿಳಿದಿರುವವರು ಬಹಳ ಕಡಿಮೆ. ಸತ್ಯನಾರಾಯಣ ಸೋಗಾಲರು ಚನ್ನಪಟ್ಟಣದ ಬಳಿಯ ಸೋಗಾಲ ಎಂಬ ಊರಿನವರು. ಮೈಸೂರಿನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿರಿಂಗ್ ಸಂಸ್ಥೆಯಲ್ಲಿ 1949ರಲ್ಲಿ ವ್ಯಾಸಂಗವನ್ನು ಮುಗಿಸಿ ಸರಕಾರದ ನೌಕರಿಗೆ ಸೇರುವ ಹಂಬಲದಿಂದ ದೂರದ ಗುಜರಾತ್‌ನ ಕಾಂಡ್ಲಾ ಬಂದರಿನಲ್ಲಿ ಕಾರ್ಟೋಗ್ರಾಫರ್ ನೌಕರಿಯನ್ನು ಪಡೆದರು. ಈ ಹುದ್ದೆಯು ಬಹಳ ಪರಿಶ್ರಮದ ಮತ್ತು ಜವಾಬ್ದಾರಿಯ ಕಾರ್ಯವಾಗಿತ್ತು. ತೀರ ಪ್ರದೇಶಗಳಲ್ಲಿ ಹಡಗುಗಳು ಚಲಿಸುವ ಕಾಲುವೆಯ ಸಮೀಕ್ಷೆಯನ್ನು ನಡೆಸಿ, ಕಡಲ ತೀರದ ನೀರಿನ ಏರಿಳಿತ, ಚಲನೆಯ ಗತಿ, ಸಮುದ್ರದ ತಳದಲ್ಲಿ ಕಂಡು ಬರುವ ಮೆಕ್ಕಲುಮಣ್ಣು, ಮರಳು ಇವುಗಳ ಚಲನೆಯಿಂದ ಸಮುದ್ರದ ಆಳದಲ್ಲಿ ಆಗುವ ವ್ಯತ್ಯಾಸಗಳ ಅರಿವು ಇವೆಲ್ಲ ಇವರ ಕಾರ್ಯವ್ಯಾಪ್ತಿಯಲ್ಲಿತ್ತು.

ಕಾಂಡ್ಲಾವು ಸಮುದ್ರದ ಅಲೆಗಳ ಪ್ರಭಾವಕ್ಕೆ ಒಳಗಾಗುವ ಒಂದು ನೈಸರ್ಗಿಕ ಬಂದರು. ಕಡಲ ತಳದ ಮೆಕ್ಕಲು ಮಣ್ಣು ಮತ್ತು ಮರಳನ್ನು ಅಲೆಗಳು ತಂದು ಇಲ್ಲಿಗೆ ಹಾಕುತ್ತಿದ್ದುದರಿಂದ ಆಳದಲ್ಲಿ ವ್ಯತ್ಯಾಸವಾಗಿ ದೊಡ್ಡ ಹಡಗುಗಳು ಬಂದರಿಗೆ ಬರಲು ತೊಂದರೆಯಾಗುತ್ತಿತ್ತು. ಇದರ ನಿವಾರಣೆಗಾಗಿ ಈ ಹೂಳನ್ನು ತೆಗೆದು ಹಡಗಿನ ದಾರಿಯನ್ನು ಸುಗಮಗೊಳಿಸುತ್ತಿದ್ದರು. ಡ್ರೆಡ್ಜಿಂಗ್ ಎಂಬ ಈ ವಿಧಾನಕ್ಕೆ ಪ್ರತಿವರ್ಷ ಸರಕಾರಕ್ಕೆ ಲಕ್ಷಾಂತರ ರುಪಾಯಿಗಳು ಖರ್ಚಾಗುತ್ತಿತ್ತು

ಈ ಸಮಸ್ಯೆಯ ಬಗ್ಗೆ ಆಳವಾಗಿ ಯೋಚಿಸುತ್ತಿದ್ದ ಸೊಗಾಲರಿಗೆ ಒಂದು ಯೋಚನೆ ಹೊಳೆಯಿತು. ಅವರ ಪ್ರಕಾರ ಕಾಂಡ್ಲಾ ಬಂದರಿಗೆ ಮೆಕ್ಕಲು ಮಣ್ಣು ಮತ್ತು ಮರಳು ಎಲ್ಲಿಂದ ಬಂದು ಶೇಖರವಾಗುತ್ತದೆಯೋ ಆ ಜಾಗ ಇದರಿಂದಾಗಿ ಖಾಲಿಯಾಗಿ ಆಳ ಉಂಟಾಗಿರಬೇಕು. ಇದು ಪ್ರತಿ ವರ್ಷದ ನೈಸರ್ಗಿಕ ಕ್ರಿಯೆಯಾದ್ದರಿಂದ ಅಲ್ಲಿಗೂ ಕಾಂಡ್ಲಾ ಬಂದರಿಗೂ ಒಂದು ಕಾಲುವೆಯನ್ನು ನಿರ್ಮಿಸಿದಲ್ಲಿ ಆಳವಾದ ಮತ್ತು ಸುಗಮವಾದ ಮಾರ್ಗ ಹಡಗುಗಳಿಗೆ ದೊರೆಯುವುದಲ್ಲದೆ ಪ್ರತಿವರ್ಷ ಡ್ರೆಡ್ಜಿಂಗ್‌ಗಾಗಿ ವ್ಯಯ ಮಾಡುವುದನ್ನು ಉಳಿಸಿದಂತಾಗುತ್ತದೆ.



ಈ ಮಧ್ಯೆ ಈ ಸಮಸ್ಯೆಯ ನಿವಾರಣೆಗಾಗಿ ವಿದೇಶಿ ತಜ್ಞರೊಬ್ಬರನ್ನು ಕರೆಸಿ ಅವರ ನೆರವಿಗೆ ಸೊಗಾಲರನ್ನೆ ನೇಮಿಸಲಾಗಿತ್ತು. ಅವರಿಗೆ ಸೋಗಾಲರು ತಮ್ಮ ಚಿಂತನೆಯ ಬಗ್ಗೆ ತಿಳಿಸಿದರು. ತಮಗಿಂತ ಉತ್ತಮವಾಗಿದ್ದ ಇವರ ತಾಂತ್ರಿಕ ಜ್ಞಾನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು ಸೋಗಾಲರ ಯೋಚನೆಯನ್ನೇ ಅನುಮೋದಿಸಿದರು. ಮುಂದೆ ಇದರ ಬಗ್ಗೆ ವಿವರವಾದ ಸಮೀಕ್ಷೆಗಳು ನಡೆದು ಸೋಗಾಲರ ಯೋಜನೆಯನ್ನು ಕೈಗೊಳ್ಳಲಾಯಿತು. ನಂತರ ನಿರ್ಮಿತವಾದ 12 ಕಿಮಿ ಕಾಲುವೆಯಲ್ಲಿ 1984 ಫೆಬ್ರವರಿ 29ರ ಶಿವರಾತ್ರೆಯಂದು ಮದ್ಯಾಹ್ನ ಒಂದೂವರೆಗೆ ಎಮ್‌ಟಿ ಡಯ್ನೈನ ಎಂಬ ಹಡಗು ಕಾಂಡ್ಲಾ ಬಂದರಿಗೆ ಆಗಮಿಸಿತು. ಹಿರಿಯ ಅಧಿಕಾರಿಗಳು ಸೋಗಾಲರಿಗೆ ಸಿಹಿಯನ್ನು ತಿನ್ನಿಸಿದರಲ್ಲದೆ ಈ ಯೋಜನೆಯು ಅವರ ಮೆದುಳಿನ ಶಿಶುವಾದ್ದರಿಂದ ಸೋಗಾಲ್ ಕೆನಾಲ್ ಎಂದು ಅದನ್ನು ಅಧಿಕೃತವಾಗಿ ಹೆಸರಿಸಿದರು. ಈ ಕಾಲುವೆಯಿಂದಾಗಿ ಮುಂದೆ ಲಕ್ಷಾಂತರ ರುಪಾಯಿಗಳ ಉಳಿತಾಯವಾಯಿತು.

ಪ್ರತಿಭಾವಂತರೂ ಆಗಿದ್ದಅವರು ತಾವಿದ್ದ ಸ್ಥಳದಲ್ಲೇ ಕನ್ನಡ ಕಾರ್ಯಕ್ರಮಗಳನ್ನೂ ಆಯೋಜಿಸುತ್ತಿದ್ದರು

ಸೋಗಾಲರು ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ಬಂದು ನೆಲೆಸಿದರು. ಈ ಮಧ್ಯೆ 1998ರಲ್ಲಿ ನನಗೆ ಇವರ ಪರಿಚಯವಾಗಿ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ಪತ್ರಿಕೆಗಳಲ್ಲಿ ಇವರ ಸಾಧನೆಯ ಬಗ್ಗೆ ವಿಸ್ತೃತವಾದ ಲೇಖನಗಳನ್ನು ಬರೆದು ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡಬೇಕೆಂದು ಕೋರಿದ್ದೆ. ಆದರೆ ಅದು ದೊರೆಯಲಿಲ್ಲ.

ಇದಾದ ಎರಡು ವರ್ಷಗಳಲ್ಲೇ ಸೋಗಾಲರು ಬೆಂಗಳೂರಿನಲ್ಲೇ ದೈವಾಧೀನರಾದರು. ಕನ್ನಡದ ಬಾವುಟವನ್ನು ನಾವಿಕರ ನಕ್ಷೆಯಲ್ಲಿ ಹಾರಿಸಿದರೂ ಅಜ್ಞಾತವಾಗಿಯೇ ಉಳಿದಿರುವ ಸೋಗಾಲರು ನಾವೆಂದು ಮರೆಯಲೇಬಾರದ ಮಹನೀಯರು

## ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಪಿಂಚಣಿ ಯೋಜನೆಗೆ ಪ್ರಾಯೋಜಕತ್ವಕ್ಕಾಗಿ ಮನವಿ

ಸಂಕಷ್ಟದಲ್ಲಿರುವ ಆರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಪಿಂಚಣಿ' ನೀಡಲು ಯೋಜಿಸಲಾಗಿದೆ. ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಪಿಂಚಣಿಯನ್ನು ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

–ಪ್ರಧಾನ ಕಾರ್ಯದರ್ಶಿಗಳು

## ಸೂರ್ಯ ಪ್ರಾರ್ಥನೆ

ಆದಿತ್ಯಾದಿ ನಮಸ್ಕಾರಂ ಯೇ ಕುರ್ವಂತಿ ದಿನೇ ದಿನೇ ।
ಜನ್ಮಾಂತರ ಸಹಸ್ರೇಷು ದಾರಿದ್ರ್ಯಂ ನೋಪಜಾಯತೇ ॥
ಜಪಾಕುಸುಮ ಸಂಕಾಶಂ ಕಾಶ್ಯಪೇಯಂ ಮಹಾದ್ಯುತಿಂ ।
ತಮೋರಿಂ ಸರ್ವಪಾಪಘ್ನಂ ಪ್ರಣತೋಸ್ಮಿ ದಿವಾಕರಂ ।
ಉದಯೇ ಬ್ರಹ್ಮಸ್ವರೂಪಂಚ ಮಧ್ಯಾಹ್ನೇತು ಮಹೇಶ್ವರಃ ।
ಅಸ್ತಮಾನೇ ಸ್ವಯಂ ವಿಷ್ಣುಃ ತ್ರಯಿ ಮೂರ್ತಿರ್ದಿವಾಕರಃ ॥

## ತುಳಸಿಯನ್ನು ನಮಸ್ಕರಿಸುವಾಗ

ಪ್ರಸೀದ ತುಲಸೀದೇವೀ ಪ್ರಸೀದ ಹರಿವಲ್ಲಭೇ ।
ಕ್ಷೀರೋದಮಥನೋದ್ಭೂತೇ ತುಲಸೀ ತ್ವಾಂ ನಮಾಮ್ಯಹಂ ॥
ಯನ್ಮೂಲೇ ಸರ್ವತೀರ್ಥಾನಿ ಯನ್ಮಧ್ಯೇ ಸರ್ವದೇವತಾ ॥
ಯದಗ್ರೇ ಸರ್ವವೇದಾಶ್ಚ ತುಲಸೀ ತ್ವಾಲ ನಮಾಮ್ಯಹಂ ॥
ನಮಸ್ತುಲಸಿ ಕಲ್ಯಾಣಿ ನಮೋ ವಿಷ್ಣುಪ್ರಿಯೇ ಶುಭೇ ॥
ನಮೋ ಮೋಕ್ಷಪ್ರದೇ ದೇವಿ ನಮಃ ಸಂಪತ್ಪ್ರದಾಯಿಕೆ ॥




ಜಾಹಿರಾತು

# ಶ್ರೀ ಶಂಕರ ಬಡಾವಣೆ

# SRI SHANKARA LAYOUT



**200 ft. off Doddaballapur-Devanahalli state highway**
**DTPA noc DC converted (BIAPPA)**
**Fully developped with Box type drains, Water pipes, Asphalted 40 ft. Roads PARK with walking track & benches, Treatment plant, Street lights**
**CCTV surveillance Compounded**
**Ring Road passes inside layout**
**Own held land**
**2000/-per sq.ft. negotiable**
**Town Municipal Corporation Ward Number - 5**
**CONTACT : Ph. : 98453 77292, 63666 66858**



# ಪ್ರಕಾಶ ಗುಚ್ಛ

## (ಕೃತಿಯಿಂದ ಆಯ್ದ ಭಾಗಗಳು)

-ಡಾ॥ ಪಾವಗಡ ಪ್ರಕಾಶ್‌ರಾವ್

ಭಗವತ್ಪಾದರೇ ಅವತರಿಸದಿದ್ದರೇ, ಪಥ ಪರಿಷ್ಕರಿಸದಿದ್ದರೆ; ವೇದಾಂತಕ್ಕೆ ಅಗ್ರಸ್ಥಾನ ದೊರಕಿಸಿ ಪಟ್ಟಾಭಿಷೇಕ ಮಾಡದೇ ಇದ್ದಿದ್ದರೇ, ಉತ್ತರ ಮೀಮಾಂಸೆಯ ದೃಷ್ಟಿಕೋನವನ್ನು ಪರಿಚಯಿಸಿ ಆ ದರ್ಶನವನ್ನು ಉಣಬಡಿಸದೇ ಇದ್ದಿದ್ದರೆ; ವೈದಿಕ ಮಿತಿಯನ್ನು ಮೀರಿ ವೇದಾಂತ ಚಿಂತನೆಯನ್ನು ರೂಢಿಸದೇ ಇದ್ದಿದ್ದರೆ; ಮುಂದೆ ಖಂಡನೆಗಾಗಿಯೇ ಲೇಖನಿ ಎತ್ತದ ಯತಿ ರಾಜರಿಗಾಗಲಿ, ಆನಂದತೀರ್ಥರಿಗಾಗಲಿ ವಿಭಾವವೂ ಇರುತ್ತಿರಲಿಲ್ಲ; ನಿಲ್ಲಲೂ ಬುನಾದಿಯೂ ಇರುತ್ತಿರಲಿಲ್ಲ. ಸಾಮಾನ್ಯ ವಾಗಿ ಬೌದ್ಧರನ್ನು ವಿರೋಧೀ ಕಣದಲ್ಲಿ ಕಂಡರೂ ನಿಜವಾಗಿ ಅವರನ್ನು ಅಡಗಿಸಿದ್ದು ಭಟ್ಟ ಬಡಿಗೆ, ಆದರದರ ಬಡಿತ, ಅತ್ತ ಬೌದ್ಧರನ್ನು ದೂರಕ್ಕಟ್ಟಿದ್ದರೆ, ಇತ್ತ ನಮ್ಮನ್ನು ಯಜ್ಞ ಹೊಗೆ ಮಧ್ಯಕ್ಕೆ ನೂಕಿತ್ತು, ಉಸಿರು ಕಟ್ಟಿಸಿತ್ತು. ಆದ್ಯಂತವೆಲ್ಲ ಯಜ್ಞಮಯವಾಗಿ ನಮ್ಮೆಲ್ಲರ ಗುರಿ ಸ್ವರ್ಗ, ಅದರ ಆಕರ್ಷಣೆ, ಅಲ್ಲಿನ ಅಮೃತದ ರುಚಿ, ಊರ್ವಶಿಯ ಊರುಗಳು... ಇಷ್ಟೇ ಆಗಿತ್ತು. ಕಾರ್ಮಠ್ಯದ ಕಂಠದುರುಲು ಬಿಗಿಯಾಗಿತ್ತು. ಪುಣ್ಯ-ಪಾಪ ಅನುಭವದ ಸಂಗ್ರಹಕ್ಕಾಗಿ ಸ್ವರ್ಗ-ನರಕಗಳ ತಾಕಲಾಟದಲ್ಲಿ ಜೀವ ಬಸವಳಿದಿತ್ತು. ಅದನ್ನೇ ಪರಮವೆಂದು ನಂಬಿ, ಆ ನಂಬಿಕೆಯ ಬುಡಕ್ಕೇ ಕೈಹಾಕಿದವರು ಭಗವತ್ಪಾದರು!

**'ಪುನರಪಿ ಜನನಂ ಪುನರಪಿ ಮರಣಂ**
**ಪುನರಪಿ ಜನನೀ ಶಯನಂ'**

ಎಂದು ಮರುಗಿ, ಆ ಮೋಹದ ತೆರೆ ಸರಿಸಿ, ಇಹದ ಇಂದ್ರಿಯ ಸುಖದ ಬಡಾವಣೆಯಾದ ಸ್ವರ್ಗ ಸುಖದ ವೈಭವಕ್ಕೆ ಬಲಿಯಾದ ನಮ್ಮನ್ನು ಉದ್ಧರಿಸಿದವರು ಭಗವತ್ಪಾದರು! ಸ್ವರ್ಗ ಮೀರಿದ, ಅಂಡಲೆವ ಜೀವಕ್ಕೊಂದು ಶಾಶ್ವತ ನೆಲೆ ನಿಲ್ಲಿಸಿದ ಕೀರ್ತಿ ಭಗವತ್ಪಾದರದು. ಆ ಶಾಶ್ವತ ಸ್ಥಾನವನ್ನು ಮುಕ್ತಿ ಎಂದು ನಾಮಕರಿಸಿದವರೂ ಭಗವತ್ಪಾದರೇ! ಭಗವತ್ಪಾದರ (ಕ್ರಿ.ಶ. 632) ನಂತರ ಬಂದ ಆಚಾರ್ಯದ್ವಯರ ಕಾಲಕ್ಕೆ (ಕ್ರಿ.ಶ. 1017 ಮತ್ತು ಕ್ರಿ.ಶ. 1238) ಭಗವತ್ಪಾದರ ಪಾಠ ಪ್ರಚಾರವಾಗಿ ಶತ-ಶತಮಾನ ಗಳೇ ಸಂದಿತ್ತು. ಅವರಿಗೆ ದಕ್ಕಿದ್ದು ಭಗವತ್ಪಾದರದೆಂದು ಹೇಳಲಾದ ಅವರ ಶಿಷ್ಯರ ಬರವಣಿಗೆಗಳು. ಹೇಗೂ ಇರಲಿ, ಆ ಆಚಾರ್ಯದ್ವಯರೂ ತಮ್ಮ ಮಂಡನೆಗಾಗಿ ಆಶ್ರಯಿಸಿದ್ದೇ ಭಗವತ್ಪಾದರ ಖಂಡನೆ (ಅದ್ವೈತ ಖಂಡನೆ). ಹೀಗಾಗಿ, ಆಚಾರ್ಯ ಶಿಷ್ಯ ಪರಂಪರೆಗಿನ್ನ, ಆಚಾರ್ಯ ರಾಮಾನುಜರು, ಆಚಾರ್ಯ ಮಧ್ವರು, ಶ್ರೀ ಶ್ರೀ ಶಂಕರಾಚಾರ್ಯರಿಗೆ ಉಪಕೃತರಾಗಿರ ಬೇಕಾದ್ದು ನ್ಯಾಯವೇ ಆಗಿದೆ. ಆಶ್ಚರ್ಯವೆಂದರೆ, ಈ ಈರ್ವರೂ ಅದ್ವೈತಿಗಳೇ! ಪ್ರಥಮ ಪಾಠವೂ ಭಗವತ್ಪಾದರ ತತ್ವದ್ದೇ. ಶಂಕರರನ್ನು ಜೀರ್ಣಿಸಿಕೊಂಡವರೇ, ಆದರೆ ಪ್ರತಿಭೆ-ಪಾಂಡಿತ್ಯಗಳು ಯಾರ ಸೊತ್ತು? ಲಕ್ಷ್ಮಣಯ್ಯ ಹಾಗೂ ವಾಸುದೇವಯ್ಯರಿಗೆ ಶಂಕರರ ವಿವರಣೆ ತೃಪ್ತಿ ಕೊಡಲಿಲ್ಲ; ಪೂರ್ಣವೆನಿಸಲಿಲ್ಲ. ತಮ್ಮದೇ ದಾರಿಗಳನ್ನು, ಅದರ ರೂಪು ರೇಖೆಗಳನ್ನು ಅವರು ಕಂಡುಕೊಂಡರು. ನೂತನ ನಾಮಕರಣ ಮಾಡಿದರು. ಪ್ರಚಾರ ಪ್ರಸಾರ ಮಾಡಿದರು. ಈಗವೂ ಅದ್ವೈತದ ಹೊಯ್ಕೈಯ್ಯಾಗಿ ಮಿಂಚಿವೆ, ನಿಂತಿವೆ.

ಇದ್ದಿರಬಹುದು, ಈ ಈರ್ವರಿಗೂ ಹಿಂದೆ ಹಲ ದನಿಗಳು ಆದರವು ಪಿಸುಮಾತುಗಳಾಗಿದ್ದಿದ್ದರಿಂದಲೇ ಇವರು ಪ್ರಮುಖ ರಾದರು; ಪ್ರಥಮರಾದರು; ಪ್ರಸಿದ್ಧರಾದರು. ಇದಕ್ಕೆ ಕಾರಣವೂ ಭಗವತ್ಪಾದರೇ. ಪ್ರಾಂಜಲ ಮನಸ್ಕರಾದರೆ ಅವರೂ ಈ ಮಾತನ್ನು ಒಪ್ಪಲೇಬೇಕಾಗುತ್ತದೆ, ಕಾರಣ ಇಷ್ಟೇ, ಅವರವರೆವಿಗೆ, ಎಂದರೆ ಭಗವತ್ಪಾದರವರೆವಿಗೆ, ತಮ್ಮ ಚಿಂತನೆಗಳನ್ನು ಹೇಗೆ ಮಂಡಿಸ ಬೇಕೆಂಬ ಬೆಳಕು ಕಂಡಿರಲಿಲ್ಲ ಹಿಂದಿನವರಿಗೆ ಭಗವತ್ಪಾದರ ಗುರು ಸರಣಿಗೂ ಇದೇ ಕಗ್ಗಂಟು. ಮಲ್ಲಿಗೆ ಮಾರ್ಗ ಮೂಡಿಸಿದ್ದೇ ಶ್ರೀ ಶ್ರೀ ಶಂಕರ ಭಗವತ್ಪಾದರ ಔಚಿತ್ಯ. ಜಾಣ್ಮೆ ಪ್ರಜ್ಞೆ, ಸಾಧನೆ, ಅವರ ಆಡಿಜಾಡನ್ನೇ ಅನುಸರಿಸಿ ತಮ್ಮ ಕಾಣ್ಕೆಗಳನ್ನು ಕಂಡುಕೊಂಡರು ಯತಿರಾಜರು ಹಾಗೂ ಶ್ರೀಮದಾನಂದ ತೀರ್ಥರು.

ಸ್ವರ್ಗ ಸಿದ್ಧಿಗೆ ಯಜ್ಞ ಬೇಕಿದ್ದರೆ, ಮುಕ್ತಿಯ ಮಾರ್ಗವಾವುದು ಎಂಬ ಪ್ರಶ್ನೆಗೆ ಭಗವತ್ಪಾದರ ಉತ್ತರ 'ವೇದಾಂತ, ಉಪನಿಷತ್ತು'. ಉಪನಿಷತ್ ಪ್ರತಿಪಾದ್ಯ ಬ್ರಮ್ಹವೇ ನಮ್ಮ ಗುರಿ. ಅದುವೇ ಮೋಕ್ಷ. ಆ ಮೋಕ್ಷ (ಮುಕ್ತಿ) ಪ್ರಾಪ್ತಿಗೆ ಸಾಧನವೇ ವಿದ್ಯೆ ಅಥವಾ ತಪಸ್ಸು ಎಂದರು. ದಶೋಪನಿಷತ್ತುಗಳೂ ಈ ವಿದ್ಯೆಯನ್ನು ಅನೇಕವೆಂದು ಘೋಷಿಸಿತು. ಈ ವಿದ್ಯಾರ್ಜನೆಯ ಫಲಿತಾಂಶವೇ ಬ್ರಮ್ಹ ಸಾಕ್ಷಾತ್ಕಾರ, ಆನಂದ ಸಾಕ್ಷಾತ್ಕಾರ ಮೋಕ್ಷ.

ಭೋಗ ಬೆಂಕಿಯಲ್ಲಿ ನಮ್ಮ ಸುಡುವ ಪತಂಗವಾದ ನಾವು ಪೌರಾಣಿಕ ಸಾಂಸಾರಿಕ ದೇವತೆಗಳ ಪಾದಸೇವೆ, ಶಯನೋತ್ಸವ ಗಳಲ್ಲಿ ಪ್ರಜ್ಞಾಹೀನರಾಗಿ ತೇಲ್ಗಣ್ಣು-ಮೇಲ್ಗಣ್ಣು ಬಿಡುತ್ತಿದ್ದಾಗ, ಸತ್ಯದರ್ಶನ ಮಾಡಿಸಿ, ಪ್ರಪಂಚವೇ ಮೋಹದಲ್ಲಿ ಮುಳುಗಿ ಮೃತಪ್ರಾಯವಾಗಿದ್ದಾಗ ಕೈಹಿಡಿದೆತ್ತಿದವರು ಭಗವತ್ಪಾದರು. ಕೇವಲ ಐಹಿಕ ಸುಖದ ಸುತ್ತ ಗಿರಕಿ ಹೊಡೆಯುತ್ತ ಇದೇ, ಈ ಭೋಗಸಂಗ್ರಹ-ಸೇವನೆಗಳೇ ಜೀವನದ ಗೌರೀಶಂಕರವೆಂದು

ಇಳಿಜಾರಿನಲ್ಲಿ ಏರುವ ಸಾಹಸ-ಭ್ರಮೆಗಳಲ್ಲಿದ್ದಾಗ ಅಭ್ಯುದಯ ನಿಶ್ರೇಯಸ್ಸಗಳ ವಿಭಾಗ ಮಾಡಿ, ವೇದ ವೇದಾಂತಗಳ ಅವಶ್ಯಕತೆ, ಅನಿವಾರ್ಯತೆಗಳನ್ನು ಮನಗಾಣಿಸಿ, ವೇದದ ಮಿತಿಯನ್ನು ತೋರಿಸಿ, ಆ ಮಿತಿಯನ್ನು ಏರಿ, ಮೀರಿ, ವೇದಾಂತದ ಅಧ್ಯಯನ ವನ್ನು ವಿಧಿಸಿದ್ದೇ ಭಗವತ್ಪಾದರ ಹೊಸದಾರಿ, ನವ್ಯದಾರಿ. ಹೀಗಾಗಿ ಅವರೇ ಅಂದಿಗೂ, ಇಂದಿಗೂ ನೂತನ ಅಂತಿಮ ಗುರಿಯನ್ನು ಪ್ರತ್ಯಕ್ಷ ಮಾಡಿಸಿದವರು.

ಅಂಗೈ ಅಗಲದ ಭೂಮಿಯನ್ನು ಏಕವಿಕ್ರಮನಾಗಿ ಮೆಟ್ಟಿ, ಇಂದ್ರಿಯ ಗುಲಾಮೀ ಸ್ವರ್ಗದ ಸಿರಿಯನ್ನು ದ್ವಿವಿಕ್ರಮ ವ್ಯೋಮಾತೀತನಾಗಿ ತುಳಿದು, ಜನಚಕ್ರವರ್ತಿ ಬಲಿಯ ಪೌರುಷವನ್ನು ಸುತಲಕ್ಕೆ ಮಿತಿಗೊಳಿಸಿ ಮೆರೆದ ತ್ರಿವಿಕ್ರಮ ಸಾಕ್ಷಾತ್ಕಾರದ ವೈದಿಕ ರೂಪಕವನ್ನೇ, ನಮ್ಮ ಮಿತಿಯ ಆಕಾರ ಮೀರಿ, ಕಲ್ಪನೆಯ ಬಣ್ಣ ರೇಖೆಗಳ ಅಂಚನ್ನು ಹರಿದು, ಕಪ್ಪೆಯ ಕೊಳದ ಕಟ್ಟೆ ಒಡೆದು, ಅಂಬುಧಿಯ ಅಚ್ಚರಿಯಲ್ಲಿ ಮುಳುಗಿಸಿತು;, ಉಪನಿಷತ್ ಕಂಡ ಸತ್ಯ. ಇಂತಹ ಮಂತ್ರಾತ್ಮಕ ವೈದಿಕ ದೇವತೆಗಳನ್ನು ನಮ್ಮಂತೆ ರಕ್ತ ಮಾಂಸ, ಸಿಟ್ಟು-ಸೆಡವು, ಮನೆ-ಮಡದಿಯರ ಮಧ್ಯೆ, ಮಣ್ಣು ಮೆತ್ತಿ ಕೂಡಿಸಿದ್ದು ಪುರಾಣಗಳು. ನಮ್ಮೆಲ್ಲ ರಾಗದ್ವೇಷಗಳೇ ಮೂರ್ತಿವತ್ತಾಗಿ ಕಂಡರವರು. ಇಂದಿಗೂ ಜನಸಾಮಾನ್ಯರಿಗೆ ಅವರೇ ಪೂಜಾಪೀಠ ಮಂಡಿತರು. ಆದರೆ ಉಪನಿಷತ್ತಿನಲ್ಲಿ ಕಂಡ ಸತ್ಯ. ಯಾವುದನ್ನು ಹೇಳಿದೆಯೋ ಆ ಶಕ್ತಿ; ಅದೇ ಆ ದಿವ್ಯಶಕ್ತಿ; ಆ ಅಮಿತ ಶಕ್ತಿ; ಆ ಅನೂಹ್ಯ ಶಕ್ತಿ; ಆ ಕಲ್ಪನಾತೀತ ಶಕ್ತಿಯನ್ನೇ ನಮ್ಮಂತೆ ಚಿತ್ರಿಸಿಕೊಳ್ಳುವ ಮಂದ ಮತಿತ್ವದ ಮಂಕು ಪೊರೆಯನ್ನು ಛಿದ್ರ ಮಾಡಿ, ಆ ಮಹಾಶಕ್ತಿಯನ್ನು, ಪರಮಾತ್ಮ ಶಕ್ತಿಯೆಂದೂ, ಅದೇ ಅತಿ ಹಿರಿದಾದ, ಅಳತೆ ಮೀರಿದ ನಮ್ಮ ಕಣ್ಕಾಲು ಕೈಗಳ ನಿಯಮಿತ ಸಂಖ್ಯೆ ಸೀಳಿದ, ಕಾಣದ, ಕೇಳದ, ವಿವರಿಸಲಾಗದ ಅದ್ಭುತವೆಂದು ಬೆರಗುಗಣ್ಣುಗಳಿಂದ ಕಾಣಿಸಿ, ಅದೇ ಬ್ರಮ್ಹವೆಂದು ಉದ್ಗರಿಸಿ ಮತ್ತೊಮ್ಮೆ ಉಪನಿಷತ್ಪ್ರತಿಪಾದ್ಯ ಬ್ರಮ್ಹವನ್ನು ಪುನಃ ಪ್ರತಿಷ್ಠಾಪನೆ ಮಾಡಿದ್ದೇ ಭಗವತ್ಪಾದರು.

ವರ್ಷ ಎಂಬತ್ತಾದರೂ ಕೈಕಟ್ಟಿ, ಕಣ್ಮುಚ್ಚಿ, ಕಣ್ತುಂಬಿ, ನಡುಬಗ್ಗಿ, ಹೊರಳಾಡಿ, ಹೊಟ್ಟೆಕಟ್ಟಿ, ತುಪ್ಪ ಸುರಿದು ಕರ್ಮಾಂಧರಾಗಿದ್ದ ನಮ್ಮನ್ನು ಏಟು ಕೊಟ್ಟು, ಎಬ್ಬಿಸಿ ಕಣ್ತೆರೆಸಿ, ಮೆದುಳುಜ್ಜಿ, ಬುದ್ಧಿ ಬಿಸಿ ಮಾಡಿ, ಅಧ್ಯಯನ ಮಾಡಲು ಹೇಳಿ, ಜ್ಞಾನಪ್ರಕಾಶ ತೋರಿದ ಗುರುವರ್ಯರವರು. ಪ್ರಪಂಚಕ್ಕೆ ಜ್ಞಾನಮಾರ್ಗದ ನೂತನ ದಾರಿಯನ್ನು ಹದಮಾಡಿದ ಹರಿಕಾರರು ಭಗವತ್ಪಾದರು.

ತುಂಡು ಪಾಳಯಗಳಿಂದ ವಿಭಿನ್ನ ಪೂಜಾಪದ್ಧತಿಗಳಿಂದ, ವಿವಿಧ ಸಂಸ್ಕೃತಿಗಳ ಫಲವಾಗಿ ಐಕ್ಯ ಕಾಣದ ಮಧ್ಯ-ಮಾಂಸಗಳ, ಕ್ರೌರ್ಯ-ಅಸಹ್ಯ ಆಚರಣೆಗಳ ಅತಿಕ್ರಮದಿಂದ, ಸ್ಮಶಾನ ಸಖ್ಯಗಳಿಂದ, ಮೈಮುರಿತದ ದೈಹಿಕ ಹಿಂಸೆಗಳಿಂದ ದಿಕ್ಕೆಟ್ಟ ದುಃಸ್ಥಿತಿ ನಮ್ಮದಾಗಿದ್ದಾಗ ಭಾರತವನ್ನು ಒಂದು ಮಾಡಿ, ಇಡೀ ಭಾರತವನ್ನು ಒಂದು ತೆಕ್ಕೆಗೆ ತಬ್ಬಿ, ಭಾರತ ಪೂರ್ಣ ಕಾಲ್ನಡಿಗೆಯಲ್ಲಿ ಸಂಚರಿಸಿ ಮಹಾ ಪಾಂಥರಾಗಿ, ನಾಲ್ಕು ದಿಕ್ಕುಗಳಲ್ಲಿ ಧರ್ಮ ಗೋಪುರಗಳಾಗಿ ಮಠ ನಾಲ್ಕನ್ನು ಸ್ಥಾಪಿಸಿ, ಭಾರತದ ಭವ್ಯ ಧಾರ್ಮಿಕ ಪ್ರವಚಕರಾಗಿ ಧರ್ಮಗುರುಗಳಾದ ಮಹಾ ಪೂಜ್ಯರೇ ಭಗವತ್ಪಾದರು.

ತಮ್ಮ ಸಿದ್ಧಾಂತದ ಪ್ರಚಾರಕ್ಕಾಗಿ ಪ್ರವಚನ ಮಾಡಲು, ಮುಂದಿನವರಿಗೆ ದಾರಿ ದೀಪವಾಗಲೂ, ಭಗವತ್ಪಾದರು ಮಾಡಿದ ಮಹತ್ಕಾರ್ಯವೆಂದರೆ ಪ್ರಸ್ಥಾನತ್ರಯ ಸೃಷ್ಟಿ. ಪ್ರಪ್ರಥಮವಾಗಿ ಬ್ರಮ್ಹಸೂತ್ರಗಳಿಗೆ ಭಾಷ್ಯ ಬರೆದು, ವಾಸಾಪೇಕ್ಷೇ ಅದ್ವೈತವೆಂದು ಸಾಧಿಸಿ, ವೇದಪ್ರಾಮಾಣ್ಯವೆಂದು ದಶೋಪನಿಷತ್ತುಗಳಿಗೆ ಭಾಷ್ಯ ಬರೆದು, ಕೊನೆಗೆ ಕೃಷ್ಣನ ಭಗವದ್ಗೀತೆಯನ್ನು ಅರ್ಥೈಸಿ ಆತನ ಬೆಂಬಲ ಗಳಿಸಿ, ಈ ಮೂರೇ ಮಾರ್ಗವೆಂದು ಪ್ರಪ್ರಥಮ ಬಾರಿಗೆ ದಾರಿ ತೋರಿಸಿದ ಪರಮ ಕರುಣಾಳು ಭಗವತ್ಪಾದರು. ಇದೆಷ್ಟು ಪ್ರಭಾವಿಯಾಯಿತೆಂದರೆ ಮುಂದಿನ ಆಚಾರ್ಯರುಗಳು ಇದೇ ಮಾರ್ಗದಲ್ಲಿ ನಡೆದೇ ತಮ್ಮ ಗುರಿಮುಟ್ಟಬೇಕಾಯಿತು. ಆಚಾರ್ಯ ಸೃಷ್ಟಿಯ ಪ್ರಸ್ಥಾನತ್ರಯ ಭಾಷ್ಯಗಳೇ ಮುಂದಿನವರಿಗೆ ಮುನ್ನುಡಿ ಯಾಯಿತು. ಮೇಲ್ನುಡಿಯಾಯಿತು. ಮಾಹಾನುಡಿಯಾಯಿತು.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್

**ಸದಸ್ಯರು**

ಶ್ರೀಮತಿ ರಮಾ ಶ್ರೀನಾಥ್, ಶ್ರೀಮತಿ ಪಾರ್ವತಿ ಸ್ವಾಮಿ
ಶ್ರೀಮತಿ ಗಾಯತ್ರಿ ರಾವ್

ಜಾಹಿರಾತು

**R. KRISHNAMURTHY B.E.**
**MANAGING PARTNER**

**M.R.K. INDUSTRIES**
B. 398 (B) 7th Cross, Peenya 1st Stage
BENGALURU-560 058
Mob. : 9972372101
Phone : +91-080 28370747, 28392549
E-mail : mrkrindustries@gmail.com
Website : www.mrk_industries.com

Kirloskar
Authorised

TUV NABCB QM 002
ISO 9001 : 2008 COMPANY

**MANUFACTURING OF : D.C. MOTORS**
**We undertake Repair/Rewinding/Servicing of DC/AC, Imported Machine Alternators, Millduty Machine, Repair & Mag. of Commutators Epoxy Spool Mag. & D.C. Machine Spare Parts.**

## ಸೂಚನೆ

ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಈಗಿರುವ ಸದಸ್ಯರ ಪಟ್ಟಿಯನ್ನು ಪರಿಶೀಲಿಸಿ ಪರಿಷ್ಕರಣೆ ಮಾಡಲು ಶ್ರೀ ವಿ.ಸತ್ಯೇಂದ್ರರವರನ್ನು ಸಂಚಾಲಕರನ್ನಾಗಿ ನೇಮಿಸಿ ಉಪಸಮಿತಿಯನ್ನು ರಚಿಸಿರುತ್ತಾರೆ.

ಸಂಚಾಲಕರು ಮಹಾಸಭಾದ ಕೇಂದ್ರಕಾರಿಣಿ ಸಭೆಯ ಸದಸ್ಯರನ್ನು ಸಂಪರ್ಕಿಸಿ ತಮ್ಮ ವ್ಯಾಪ್ತಿಗೆ ಬರುವ ಮಹಾಸಭಾ ಸದಸ್ಯರ ವಿವರವನ್ನು ಸಲ್ಲಿಸುವಂತೆ ಕೋರುತ್ತೇವೆ. ದಯುವಾಡಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ :
ವಿ. ಸತ್ಯೇಂದ್ರ –9844001238
ಎಸ್. ಶ್ರೀಧರಮೂರ್ತಿ–ಪ್ರಧಾನ ಕಾರ್ಯದರ್ಶಿ

## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನದ ನವೀಕರಣವನ್ನು, ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್‌ಎಸ್‌ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

# ALPHA DESIGN TECHNOLOGIES PVT. LTD.













**COL. H.S. SHANKAR**
**(Holenarsipur Srikantiah Shankar)**

**Alpha Design Technologies Pvt Ltd has been established at Indiranagar, Bangalore, with a view to:**

- *Develop a strong technology base to meet the emerging needs of land, ship-borne, Airborne and simulation systems*
- *Establish series of Joint Venture Companies (JVCs) in India with International technology driven firms in specific niche areas*
- *Set up modern production, test and quality assurance facilities to produce selected products for International and Indian markets*
- *Provide technical support & advice during Evaluation, Installation, Warranty and PostContract phases*
- *Create high-end software development capabilities for Simulation, command & control requirements*

Interface Accolade Building", 09, Service Road, HAL II Stage, Indiranagar, Bangalore-560 008, India
Ph. No. +91-80-2521 6640 / 42, Fax: +91-80-2521 6541, Email: alphacorp@adtl.co.in; web : adtl.co.in

**ರೂ. 7.00 ಲಕ್ಷಗಳ ದೇಣಿಗೆ ನೀಡಿದ ಶ್ರೀಯುತ ಹೆಚ್.ಎಸ್. ಶಂಕರ್ ಇವರಿಗೆ ಮಹಾಸಭೆಯ ಕೃತಜ್ಞತಾಪೂರ್ವಕ ವಂದನೆಗಳು.**

PERIODICAL RATE

VIPRANUDI KANNADA MONTHLY. Postal Regn. No. RNP/KA/BGS/2275/
& RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-05-2022 Date of Publishing 9-05-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

VIPRANUDI

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar